ಜನಪದ ವಿಚಾರ


ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೯ ಜೂನ್-೨೦೦೯ ಸಂಚಿಕೆ-೧೧



೧೫ನೇ ರಾಷ್ಟ್ರೀಯ ಚುನಾವಣೆ ಪ್ರಜಾತಂತ್ರದ ಹಿನ್ನಡೆಯೋ, ಮುನ್ನಡೆಯೋ ?

ಜನಪದ ವಿಚಾರದಲ್ಲಿ

ಜೂನ್–2009

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಜೂನ್ - ೨೦೦೯

ಸಂಪುಟ - ೯

ಸಂಚಿಕೆ - ೧೧

ಸಂಪಾದಕ

ಸುರೇಂದ್ರ ಕೌಲಗಿ

ಸಲಹಾ ಸಮಿತಿ

ಜನಪದ ಸೇವಾ ಟ್ರಸ್ಟ್

ಧರ್ಮದರ್ಶಿ ಮಂಡಳಿ

ಚಂದಾ ವಿವರ

ವಾರ್ಷಿಕ : ರೂ ೧೦೦/-

ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ

ಜನಪದ ಸೇವಾ ಟ್ರಸ್ಟ್(ರಿ)

ಮೇಲುಕೋಟೆ-೫೭೧೪೩೧

ಜಿಲ್ಲಾ ಮಂಡ್ಯ

✆08236 316344

e-mail : janapada@yahoo.com

web: janapada.net

ಕಲ್ಲಾಯಿತೆ ಎದೆ !

ಯಾಕೆ ತಾಯಿ ಮುಲುಗುತಿರುವಿ
ಕರುಳಬಳ್ಳಿಗಳ ಕತ್ತರಿಸಿ ಚೆಲ್ಲಾಪಿಲ್ಲಿಯಾಗಿಸುತ
ನೀನೇ ನುಂಗಿ ನೀರು ಕುಡಿದರೆ ಹೇಗೆ?
ಧರಣಿ ಮಂಡಲ ಮಧ್ಯದೊಳಗೆ
ಸುನಾಮಿ ಜಲಪ್ರಳಯದಲಿ ಅವಿತು
ದೈತ್ಯಾಕಾರದಲಿ ಬೆಳೆದು ಬಂದು
ಕೈಯಾರೆ ಕೊಚ್ಚಿ ಸದೆಬಡಿದು
ಸದ್ದಡಗಿಸುತಿರುವಿಯಲ್ಲ!

ಇನ್ನೂ ಸಾಕಾಗಲಿಲ್ಲವೆ ತಾಯಿ
ಮತ್ತೆ ಮತ್ತೆ ಘರ್ಜಿಸುತ
ಭೂ ಕಂಪಿಸುತ, ಕ್ಷಣಮಾತ್ರದಲಿ
ನೆಲದಡಿಗೆ ಸೇರಿದ ನಿನ್ನ ಮಕ್ಕಳ
ಆಕ್ರಂದನ ಕೇಳುತಿರುವೆಯಾ
ಯಾಕೆ ನಿನ್ನೆದೆ ಕಲ್ಲಾಯಿತು
ಕಿವಿ ಕಿವುಡಾಯಿತು ಜನನಿ!

ಸ್ವಾರ್ಥಿ ಮಕ್ಕಳ ಸಹವಾಸ ಸಾಕು ಸಾಕಾಯಿತೆ
ಮನೆಯಿಂದ ಆಚೆ ಮತ್ತೆ ಮತ್ತೆ ದಬ್ಬುತಿರುವಿ
ಹುಲುಮಾನವರ ಹೊತ್ತಿದ್ದಕ್ಕೆ ಹೆತ್ತಿದ್ದಕ್ಕೆ
ಪಶ್ಚಾತ್ತಾಪ ಪಡುತಿರುವಿಯಾ ತಾಯಿ
ನಿನ್ನ ಉಡಿ ಸ್ಮಶಾನ ಮಾಡದಿರು
ಕ್ಷಮಿಸು! ಜಗಜ್ಜನನಿ ಬಹುರೂಪಿಣಿ

- ಲತಾ ಗುತ್ತಿ

ವಿಚಾರ ದೀಪ್ತಿ

ಕಾನ್ವೆಂಟ್ ಶಾಲೆ ವಿರುದ್ಧ ಸರ್ಕಾರಿ ಶಾಲೆ

ಸರ್ಕಾರಿ ಶಾಲೆಗಳು ಈ ಮೊದಲಿನ ಹಾಗಿಲ್ಲ. ತರಬೇತಿ ಹೊಂದಿದ ಕೌಶಲ್ಯ ಪೂರ್ಣ ಶಿಕ್ಷಕರಿಗೆ ನಮ್ಮ ಶಾಲೆಗಳಲ್ಲಿ ಬರವಿಲ್ಲ. ಅವರ ಬೋಧನಾ ಸಾಮರ್ಥ್ಯವನ್ನು ಅಲ್ಲಗಳೆಯಲಾಗದು. ಬಹುಪಾಲು ಶಾಲೆಗಳು ಸಮರ್ಪಣಾ ಮನೋಭಾವದಿಂದ ಕಾರ್ಯನಿರ್ವಹಿಸುತ್ತಿರುವುದನ್ನು ನಾನು ಕಂಡಿದ್ದೇನೆ. ಇದಕ್ಕೆ ತಾಜಾ ಉದಾಹರಣೆ ಎಂದರೆ ಮೊನ್ನೆ ದಿವಸ ಪ್ರಕಟವಾದ ಎಸ್.ಎಸ್.ಎಲ್.ಸಿ ಫಲಿತಾಂಶವನ್ನೇ ನೋಡಬಹುದು. ಅದರಲ್ಲಿ ಗ್ರಾಮೀಣ ವಿದ್ಯಾರ್ಥಿಗಳು ಮೇಲುಗೈ ಸಾಧಿಸಿದ್ದಾರಲ್ಲದೆ ಸರ್ಕಾರಿ ಶಾಲೆಗಳು ಸಾಮಾಜಿಕವಾಗಿ ಎದೆ ಸೆಟೆದು ನಿಲ್ಲುವಂತೆ ಮಾಡಿದ್ದಾರೆ. ಪ್ರತಿಸಲ ಫಲಿತಾಂಶ ಪ್ರಕಟವಾದಾಗಲೂ ಇಂಥ ಎಷ್ಟೋ ಗ್ರಾಮೀಣ ಪ್ರತಿಭೆಗಳು ಹೊರ ಹೊಮ್ಮುತ್ತಲೇ ಇವೆ. ಈ ವರ್ಷ ಕಸಗುಡಿಸುವ ಬಾಲಕನೋರ್ವ ಶೇಕಡಾ ತೊಂಭತ್ತಕ್ಕೂ ಅಧಿಕ ಅಂಕಗಳನ್ನು ಗಳಿಸಿರುವನಲ್ಲದೆ ತನ್ನ ಕನಸುಗಳನ್ನು ಸಾರ್ವಜನಿಕವಾಗಿ ಹಂಚಿಕೊಂಡಿದ್ದಾನೆ. ತರಕಾರಿ ಮಾರುವವರ, ಜವಾನರ, ಚಿಕ್ಕ ರೈತರ, ಕೃಷಿ ಕಾರ್ಮಿಕರ, ಮಕ್ಕಳು ಪ್ರತಿವರ್ಷ ಅತಿ ಹೆಚ್ಚು ಅಂಕಗಳನ್ನು ಪಡೆಯುತ್ತಲೇ ಬಂದಿದ್ದಾರೆ. ಇಂಥ ಗ್ರಾಮೀಣ ಪ್ರತಿಭೆಗಳ ಪ್ರಭಾವಳಿ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದೆ. ಇಂಥ ಆರ್ಥಿಕ ಅಸಹಾಯಕ ವಿದ್ಯಾರ್ಥಿಗಳನ್ನು ದತ್ತು ತೆಗೆದುಕೊಂಡು ಓದಿಸುವ ಕೈಂಕರ್ಯವನ್ನು ಈ ನಾಡಿನ ಧನಿಕರು ತೋರಿಸುವ ಅಗತ್ಯ ಹಿಂದೆಂದಿಗಿಂತ ಹೆಚ್ಚು ಇದೆ. ಇದು ಗ್ರಾಮದ ಬಗೆಗಿನ ಆಶಾದಾಯಕ ಸಂಗತಿ. ಇದನ್ನು ನೋಡಿ ಇನ್ನಾದರೂ ಪೋಷಕರು ಎಚ್ಚೆತ್ತುಕೊಳ್ಳುವ ಜರೂರತ್ತು ಹಿಂದೆಂದಿಗಿಂತ ಹೆಚ್ಚು ಇಲ್ಲದಿಲ್ಲ. ಹಾಗೆಯೇ ಕಾನ್ವೆಂಟ್ ಶಾಲೆಗಳ ಕುರಿತು ಒಂದೆರಡು ಮಾತು. ಸದರಿ ಎಷ್ಟೋ ಶಾಲೆಗಳು ಪಕ್ಕಾ ಕಟ್ಟಡಗಳನ್ನು ಹೊಂದಿಲ್ಲ. ಅಲ್ಲಿನ ಶಾಲೆಗಳಲ್ಲಿ ಬೋಧಿಸುವ ಶಿಕ್ಷಕರು ಶೈಕ್ಷಣಿಕವಾಗಿ ನುರಿತವರಲ್ಲ. ಕೇವಲ ಒಂದೆರಡು ಸಾವಿರ ಸಂಬಳವನ್ನು ಪಗಾರ ರೂಪದಲ್ಲಿ ಪಡೆಯುತ್ತಿರುವ ಅವರೆಲ್ಲ ಸಮರ್ಪಣಾ ಮನೋಭಾವದಿಂದ ಬೋಧಿಸುವುದಾದರೂ ಹೇಗೆ ಸಾಧ್ಯ? ಅಲ್ಲದೆ ಅಂಥವರಲ್ಲಿ ಕೌಶಲ್ಯ ಪೂರ್ಣ ಬೋಧನಾ ಸಾಮರ್ಥ್ಯವನ್ನು ನಿರೀಕ್ಷಿಸುವುದೂ ಆಗದ ಮಾತು! ಆ ಶಾಲೆಗಳ ಆಡಳಿತ ವ್ಯವಸ್ಥೆಗೆ ಹಣ ಮುಖ್ಯವೇ ಹೊರತು ಮಕ್ಕಳ ಭವಿಷ್ಯವಲ್ಲ. ಆದ್ದರಿಂದ ಪೋಷಕರು ಅಂಥ ಶಾಲೆಗಳಿಗೆ ಸೇರಿಸುವ ಮುನ್ನ ಯೋಚಿಸಬೇಕಿದೆ. ಕನ್ನಡ ಸಾಹಿತ್ಯದಲ್ಲಿ ಎಷ್ಟೋ ಹೆಸರು ಮಾಡಿರುವ ಲೇಖಕರು ಕನ್ನಡ ಮಾಧ್ಯಮದಲ್ಲಿ ಓದಿರುವವರು ಎಂಬುದನ್ನು ಅವರು ಮನಗಾಣಬೇಕಿದೆ. ಇಂಗ್ಲಿಷ್‌ನ ಹೆಸರಾಂತ ಕನ್ನಡ ಲೇಖಕ ಆರ್.ಕೆ. ನಾರಾಯಣ್ ಏಳನೆ ತರಗತಿಯಲ್ಲಿ ಇಂಗ್ಲಿಷ್‌ನಲ್ಲಿ ಫೇಲಾಗಿದ್ದರು ಎಂಬುದನ್ನು ಅರ್ಥಮಾಡಿಕೊಳ್ಳಬೇಕಿದೆ.

– ಕುಂ.ವೀರಭದ್ರಪ್ಪ
ಸಾಹಿತಿ ಮತ್ತು ಮುಖ್ಯೋಪಾಧ್ಯಾಯರು

೧೫ನೇ ರಾಷ್ಟ್ರೀಯ ಚುನಾವಣೆ
ಪ್ರಜಾತಂತ್ರದ ಹಿನ್ನಡೆಯೋ, ಮುನ್ನಡೆಯೋ ?

– *ಸುರೇಂದ್ರ ಕೌಲಗಿ*

ಹದಿನೈದನೇ ರಾಷ್ಟ್ರೀಯ ಚುನಾವಣೆ ಭಾರತ ಪ್ರಜಾತಂತ್ರದ ಹಿನ್ನಡೆಯೋ, ಮುನ್ನಡೆಯೋ ಎಂಬ ಪ್ರಶ್ನೆ ಪ್ರಜ್ಞಾವಂತ ಮತದಾರರನ್ನು ಕಾಡುತ್ತಿದೆ. ಮೇಲ್ನೋಟಕ್ಕೆ ಸ್ಥಿರ ಸರ್ಕಾರದ ರಚನೆಯಾಗಿ ದೇಶದ ಆಡಳಿತ ಸುವ್ಯವಸ್ಥಿತವಾಗಿ ನಡೆಯುತ್ತದೆಂದು ಕಂಡರೂ ದೇಶದ ಪ್ರಜಾತಂತ್ರದ ಆರೋಗ್ಯಪೂರ್ಣ ಬೆಳವಣಿಗೆಯ ಬಗ್ಗೆ ಆಸಕ್ತರಿರುವ ದೇಶದ ನಾಗರಿಕರು ಆತ್ಮಾವಲೋಕನ ಮಾಡಿಕೊಳ್ಳಬೇಕಾದ ಸಮಯ ಇದಾಗಿದೆ. ಬಹು ಧಾರಾಳತನದ ಬಹುಮತದಿಂದ ಜಯಿಸಿದ ಯು.ಪಿ.ಎ ಸಂಘಟನೆ ಅತ್ಯುತ್ಸಾಹದಲ್ಲಿ ಆಡಳಿತದ ವಿಷಯದಲ್ಲಿ ಮತ್ತು ನೀತಿ ನಿರ್ಧಾರಕ ವಿಷಯದಲ್ಲಿ ರೋಡ್ ರೋಲರ್‌ನಂತೆ ಕೆಲಸ ಮಾಡುವ ಸಾಧ್ಯತೆ ಹೆಚ್ಚಾಗಿ ಇರುವಾಗ, ಕಡು ವಿರೋಧ ಪಕ್ಷವಾಗಿ ಬೆಳೆಯಬೇಕಿದ್ದ ಎನ್.ಡಿ.ಎ. ಸಂಘಟನೆ ದುರ್ಬಲವಾಗಿ ತನ್ನ ವಿರೋಧಶಕ್ತಿ ಕ್ಷೀಣವಾಗಿರುವುದಕ್ಕೆ ಮನನೊಂದು ಇನ್ನೂ ಚೇತರಿಸಿಕೊಳ್ಳದೇ ಇರುವಾಗ ಹದಿನೈದನೇ ಲೋಕಸಭಾ ಚುನಾವಣೆ ಭಾರತೀಯ ಪ್ರಜಾತಂತ್ರದ ಹಿನ್ನಡೆಯೋ, ಮುನ್ನಡೆಯೋ ಎಂಬ ಪ್ರಶ್ನೆಗೆ ಉತ್ತರ ನೀತಿರಹಿತ ರಾಜಕಾರಣದ ಮಂಜಿನಲ್ಲಿ ಸ್ಪಷ್ಟವಾಗಿ ಕಾಣದಾಗಿದೆ. ಪ್ರಜಾತಂತ್ರದ ವ್ಯವಸ್ಥೆಗೆ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷ ಎರಡು ಚಕ್ರಗಳಿದ್ದಂತೆ. ಒಂದೇ ಚಕ್ರದ ಸಹಾಯದಿಂದ ವಾಹನ ಹೇಗೆ ಮುಂದೆ ಸಾಗಲಾರದೋ ಅಂತೆಯೇ ಇವೆರಡು ಪಕ್ಷದಲ್ಲಿ ಒಂದಿಲ್ಲದಿದ್ದರೂ ಪ್ರಜಾತಂತ್ರ ಸುಲಲಿತವಾಗಿ ನಡೆಯಲಾರದು; ಅಪಘಾತಕ್ಕೀಡಾಗುವ ಸಂದರ್ಭವೇ ಹೆಚ್ಚು. ಅಂಥ ಒಂದು ಪರಿಸ್ಥಿತಿ ಚುನಾವಣೋತ್ತರ ಭಾರತದಲ್ಲಿ ಉಂಟಾಗಿದೆ.

ಮೊಟ್ಟ ಮೊದಲನೆಯದಾಗಿ ಈ ಚುನಾವಣೆಯ ಫಲಿತಾಂಶದಿಂದ ಮುಖ್ಯವಾಗಿ ಹುಟ್ಟಬೇಕಾಗಿದ್ದ ಪ್ರಬಲ ವಿರೋಧ ಪಕ್ಷ ಹುಟ್ಟದೇ ಇರುವುದು. ಎನ್.ಡಿ.ಎ. ಸಂಘಟನೆ ಅಂಥ ವಿರೋಧ ಪಕ್ಷವಾಗಿ ಹೊರಹೊಮ್ಮಬೇಕಾಗಿತ್ತು. ಆಗ ದೇಶದಲ್ಲಿ ಯು.ಪಿ.ಎ. ಎಂಬ ಪುರೋಗಾಮಿ ಪಕ್ಷ ಮತ್ತು ಸಾತ್ವಿಕ ಬಲ ಪಕ್ಷವಾಗಿ ಎನ್.ಡಿ.ಎ.ಪಕ್ಷ ಇವು ದೇಶದ ಪ್ರಜಾತಂತ್ರವನ್ನು ಬಲಪಡಿಸಬಹುದಾಗಿತ್ತು. ಮತದಾರರಿಗೆ ಆಯ್ಕೆ ಮಾಡಲು ಎರಡು ಸುಸಂಘಟಿತ ರಾಷ್ಟ್ರೀಯ ಪಕ್ಷಗಳು ದೊರೆಯುವ ಸಾಧ್ಯತೆ ಇತ್ತು.

ಲೋಕಸಭೆಯ ಒಟ್ಟು ೫೪೩ ಸ್ಥಾನಗಳಿಗೆ ಯು.ಪಿ.ಎ ಸರ್ಕಾರ ೩೦೦ ಸ್ಥಾನಗಳನ್ನು ಪಡೆದು ದೈತ್ಯಾಕಾರದ ಆಡಳಿತಪಕ್ಷವಾಗಿ ಹೊರಹೊಮ್ಮಿದೆ. ಚುನಾವಣೆಯ ಮುನ್ನ ಯು.ಪಿ.ಎ ಸರ್ಕಾರದ ಆಂತರಿಕ ನೀತಿ ಮತ್ತು ವಿವಾದಾತ್ಮಕ ವಿದೇಶಾಂಗ ನೀತಿಗಳನ್ನು ವಿರೋಧ ಮಾಡುತ್ತಿದ್ದ ಎಲ್ಲ ಪಕ್ಷಗಳು ನಿರ್ವೀರ್ಯವಾಗಿ

ಸೋತುಬಿದ್ದಿವೆ. ಅವು ಪುನಃ ಶಕ್ತಿ ಪಡೆದು ವಿರೋಧಪಕ್ಷಗಳ ತಮ್ಮ ಧರ್ಮವನ್ನು ಪಾಲಿಸಬೇಕಾದರೆ ಇನ್ನು ಎಷ್ಟು ವರ್ಷ ಕಾಯಬೇಕೋ? ಹದಿನೈದನೇ ಲೋಕಸಭಾ ಚುನಾವಣೆಯ ಸಮಯದಲ್ಲಿ ವಿರೋಧಪಕ್ಷಗಳು ತುಂಬ ಬಲಶಾಲಿಯಾಗಿದ್ದವು ಮತ್ತು ಆತ್ಮ ವಿಶ್ವಾಸವನ್ನು ಹೊಂದಿದ್ದವು. ಅವುಗಳ ಏಕೈಕ ಗುರಿ ಯು.ಪಿ.ಎ.ಗೆ ಪರ್ಯಾಯವಾಗಿ ತಮ್ಮದೇ ಸರ್ಕಾರ ರಚಿಸಬೇಕೆಂಬುದಾಗಿತ್ತು. ಅದು ಸೂಕ್ತ ಹಾಗು ಸಕಾಲಿಕ ಗುರಿಯೂ ಆಗಿತ್ತು. ಆದರೆ ಆ ಪಕ್ಷಗಳಲ್ಲಿದ್ದ ಪರಸ್ಪರ ಮಡಿ-ಮೈಲಿಗೆಯ ಭಾವನೆ ಹಾಗೂ ಪ್ರಧಾನಮಂತ್ರಿ ಸ್ಥಾನಕ್ಕೆ ನಡೆದ ಅವುಗಳಲ್ಲಿಯ ನಕಾರಾತ್ಮಕ ಸ್ಪರ್ಧೆ ಅವು ಚುನಾವಣೆಯಲ್ಲಿ ಹೀನಾಯವಾಗಿ ಸೋಲುವುದಕ್ಕೆ ಕಾರಣಗಳಾದವು. ಇಂಥ ಪರಿಸ್ಥಿತಿ ಉಂಟಾದದ್ದು ಆ ವಿರೋಧ ಪಕ್ಷಗಳ ದುರ್ದೈವಕ್ಕಿಂತ ಭಾರತದ ಪ್ರಜಾತಂತ್ರದ ಮತ್ತು ಮತದಾರರ ದುರ್ದೈವ. ಕೈಗೆ ಸಿಕ್ಕಬಹುದಾಗಿದ್ದ ಹಣ್ಣನ್ನು ಕಳೆದುಕೊಂಡಂತಾಯಿತು. ೨೦೦೪ರಲ್ಲಿ ನಡೆದ ಹದಿನಾಲ್ಕನೇ ರಾಷ್ಟ್ರೀಯ ಚುನಾವಣೆಯ ಕಾಲದಲ್ಲಿದ್ದ ವಿರೋಧಪಕ್ಷಗಳ ಸ್ಥಿತಿಯನ್ನು ೨೦೦೯ರಲ್ಲಿ ನಡೆದ ಹದಿನೈದನೇ ರಾಷ್ಟ್ರೀಯ ಚುನಾವಣೆಯ ಕಾಲದಲ್ಲಿದ್ದ ವಿರೋಧಪಕ್ಷಗಳ ಸ್ಥಿತಿಯನ್ನು ಅವಲೋಕಿಸಿದಾಗ ಭೂಮಿ-ಆಕಾಶದಷ್ಟು ವ್ಯತ್ಯಾಸವಿರುವುದು ಕಂಡು ಬರುತ್ತದೆ. ಈ ಐದು ವರ್ಷಗಳ ಅವಧಿಯಲ್ಲಿ ಪ್ರತಿಯೊಂದು ವಿರೋಧಪಕ್ಷವು ಇಟ್ಟಿಗೆಯ ಮೇಲೆ ಇಟ್ಟಿಗೆಯನ್ನು ಇಡುತ್ತ ತಮ್ಮ-ತಮ್ಮ ಪಕ್ಷಗಳನ್ನು ಕಟ್ಟಿದ್ದವು. ಅದಕ್ಕಾಗಿ ಅವು ಪಟ್ಟ ಶ್ರಮ, ಮಾಡಿದ ಖರ್ಚು ಅಸದಳ. ಸುಮಾರು ಐದು ವರ್ಷಗಳ ಕಾಲ ಸತತ ಪರಿಶ್ರಮದಿಂದ ಕಟ್ಟಿದ್ದ ಕಟ್ಟಡವನ್ನು ಪೂರ್ತಗೊಳಿಸಿ ಅದನ್ನು ಉಳಿಸಿಕೊಳ್ಳಲು ಅವಕ್ಕೆ ರಾಜಕೀಯ ಮತ್ಸದ್ದಿತನ ಸಾಲದೇ ಹೋಯಿತಲ್ಲವೆಂಬ ವ್ಯಥೆ ಚಿಂತಕರ ಮತ್ತು ಪ್ರಜಾತಂತ್ರ ಪ್ರೇಮಿ ಮತದಾರರಿಗೆ ಆಗದೇ ಇರಲು ಸಾಧ್ಯವಿಲ್ಲ. ಜಗತ್ತಿನ ಎರಡು ದೊಡ್ಡ ಪ್ರಜಾಪ್ರಭುತ್ರ ದೇಶಗಳಾದ ಇಂಗ್ಲೆಂಡ್ ಮತ್ತು ಅಮೇರಿಕಾ ನಮ್ಮ ಮುಂದೆ ಸ್ಪಷ್ಟ ಉದಾಹರಣೆಯಾಗಿವೆ. ಆ ದೇಶಗಳಲ್ಲಿ ದ್ವಿಪಕ್ಷೀಯ ಪ್ರಜಾಪ್ರಭುತ್ವ ಸ್ಥಾಪಿತಗೊಳ್ಳಬೇಕಾದರೆ ಆ ದೇಶಗಳಲ್ಲಿಯ ರಾಜಕೀಯ ಪಕ್ಷಗಳು, ರಾಜಕೀಯ ಚಿಂತಕರು ಮತ್ತು ಮತದಾರರು ಎಷ್ಟೊಂದು ಪ್ರಕಾರದ ಏಳುಬೀಳುಗಳನ್ನು ಅನುಭವಿಸಬೇಕಾಯಿತೆಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ಆ ದೇಶಗಳಲ್ಲಿಯಂತೆ ಭಾರತದಲ್ಲೂ ದ್ವಿಪಕ್ಷೀಯ ಪ್ರಜಾತಂತ್ರ ವ್ಯವಸ್ಥೆಯನ್ನು ನಿರ್ಮಿಸಿಕೊಳ್ಳಬಹುದಾಗಿದ್ದ ಸುಸಮಯವೊಂದು ಕೈಜಾರಿ ಹೋಯಿತು. ಕೈಜಾರಿ ಹೋಗುವುದಕ್ಕೆ ಕಾರಣವಾದ ವಿರೋಧಪಕ್ಷಗಳ ಸಮೀಪ ದೃಷ್ಟಿಯ ಸ್ವಾರ್ಥದ ಬೆಲೆಯನ್ನು ದೇಶ ಮುಂದಿನ ವರ್ಷಗಳಲ್ಲಿ ಬಹುವಾಗಿ ತೆರಬೇಕಾಗುತ್ತದೆ.

ಈಗಾಗಲೆ ಯು.ಪಿ.ಎ ಸರ್ಕಾರ ತನ್ನ ಇದುವರೆಗಿನ ಅರ್ಥಿಕ ನೀತಿ ಮತ್ತು ವಿದೇಶ ನೀತಿಗಳನ್ನು ಮುಂದುವರೆಸಿಕೊಂಡು ಹೋಗುವುದಾಗಿ ಹೇಳಿದೆ. ಇದೇ ನೀತಿ ಯು.ಪಿ.ಎ ಸರ್ಕಾರದ ಅಧಿಕಾರದ ಅವಧಿಯಲ್ಲಿ ಜಾಗತಿಕರಣದ ಬಿರುಗಾಳಿಗೆ ಭಾರತ ತನ್ನ ದೇಶದಲ್ಲಿ ಅವಕಾಶ ಮಾಡಿಕೊಟ್ಟಿತು. ಆ ಜಾಗತಿಕರಣದ ಪಾಪದ ಕೂಸುಗಳಾಗಿ ಹುಟ್ಟಿದ ಖಾಸಗಿಕರಣ, ವಾಣಿಜ್ಯಕರಣ, ಕೈಗಾರಿಕರಣ ಇಂದು ದೇಶವನ್ನು ಹಾಳುಗೆಡವಿವೆ. ಜನ ಸಾಮಾನ್ಯರ ಜೀವನ ಬಟಾಬಯಲಿನಲ್ಲಿರುವ ಹಣತೆಯಲ್ಲಿಯ ದೀಪದಂತಾಗಿದೆ. ಪ್ರಕೃತಿ, ಪರಿಸರ, ಹವಾಮಾನ ಮುಂತಾದ

ಪಂಚಭೂತಗಳೆಲ್ಲವೂ ಹದಗೆಟ್ಟು ಮಾನವರ ಹಾಗೂ ಪ್ರಕೃತಿ ಸಂಕುಲದ ಪ್ರಾಣವನ್ನು ಹಿಂಡುತ್ತಿವೆ. ಇದೆಲ್ಲ ಸಾಲದಂತೆ ಜೀವನದ ಪ್ರತಿಯೊಂದು ಕ್ಷೇತ್ರದಲ್ಲಿ ಕುಟುಂಬವೂ ಸೇರಿದಂತೆ ಮಾನವೀಯ ಮೌಲ್ಯಗಳು ಕುಸಿದಿವೆ; ತತ್ಪರಿಣಾಮವಾಗಿ ಮಾನವ ದಾನವನಾಗುತ್ತಿದ್ದಾನೆ. ಇಂಥದೇ ಪರಿಣಾಮ ಬೀರುವ ಹಳೆಯ ಆರ್ಥಿಕ ನೀತಿಯನ್ನೂ, ಕೈಗಾರಿಕಾ ನೀತಿಯನ್ನೂ, ಶಿಕ್ಷಣ ನೀತಿಯನ್ನೂ, ಶಸ್ತ್ರಾಸ್ತ್ರ ನಿರ್ಮಾಣ ನೀತಿಯನ್ನೂ, ಚಂದ್ರಯಾನ ನೀತಿಯನ್ನೂ ಹೊಸ ಯು.ಪಿ.ಎ. ಸರ್ಕಾರ ಮುಂದುವರೆಸಿದರೆ ಅದನ್ನು ತಡೆಯುವ, ವಿರೋಧಿಸುವ, ಜನತೆಯನ್ನೆಚ್ಚರಿಸುವ ಬಲವಾದ ವಿರೋಧ ಪಕ್ಷವೆಲ್ಲಿದೆ? ವಿರೋಧ ಪಕ್ಷವೇ ಇಲ್ಲದಿರುವಂಥ ಪ್ರಜಾಪ್ರಭುತ್ವವನ್ನು ಹುಟ್ಟುಹಾಕಿದ ಹದಿನೈದನೇ ರಾಷ್ಟ್ರೀಯ ಚುನಾವಣೆ ಪ್ರಜಾತಂತ್ರದ ಹಿನ್ನಡೆಯೆಂದು ಅನಿಸಿದಲ್ಲಿ ಅದು ತಪ್ಪಾಗಲಾರದು. ವಿರೋಧ ಪಕ್ಷದ ಅಸ್ತಂಗತದ ವಿಷಯವಲ್ಲದೆ ಇಡೀ ಚುನಾವಣೆಯೇ ಭ್ರಷ್ಟತೆಯಿಂದ ಕೂಡಿತ್ತೆಂಬ ಸಂಗತಿಯೂ ಪ್ರಜಾತಂತ್ರದ ಹಿನ್ನಡೆಯೆಂಬ ಅನಿಸಿಕೆಗೆ ಕಾರಣವಾಗುತ್ತಿದೆ. ಹೊಸ ಲೋಕಸಭೆಗೆ ಆರಿಸಿಬಂದಿರುವ ಬಹು ಸಂಖ್ಯಾತ ಸದಸ್ಯರು ಕೋಟ್ಯಾಧೀಶ್ವರರು. ಅವರು ಚುನಾವಣೆಯಲ್ಲಿ ಖರ್ಚು ಮಾಡಿದ್ದೂ ಕೋಟ್ಯಾಂತರ ರುಪಾಯಿ. ಇಲ್ಲಿ ವೈರುಧ್ಯವೇನೆಂದರೆ ಪ್ರಜಾಸತ್ತೆಯ ಪ್ರಭುವಾದ ಮತದಾರ ಭಿಕ್ಷಾಧೀಶ, ಆ ಭಿಕ್ಷಾಧೀಶರಿಂದ ಮತ ಯಾಚಿಸಿದ ಪ್ರಭು ಕೋಟ್ಯಾಧೀಶ! ಒಂದು ದಿನಕ್ಕೆ ಇಪ್ಪತ್ತು ರುಪಾಯಿಯನ್ನು ಖರ್ಚುಮಾಡಲಾರದ, ಒಂದು ನೂರು ರುಪಾಯಿಯನ್ನು ಸಂಪಾದಿಸಲಾರದ ಶ್ರೀಸಾಮಾನ್ಯ ಒಂದು ಕಡೆಯಾದರೆ ತಿಂಗಳೊಂದಕ್ಕೆ ೧೬,೦೦೦ ರುಪಾಯಿಗಳ ವೇತನದೊಂದಿಗೆ ಹತ್ತಾರು ಸೌಲಭ್ಯಗಳನ್ನು ಹೊಂದಿ ಕಂಗಾಲಾಗಿರುವ ದೇಶದಲ್ಲಿ ಸುಖಜೀವನ ನಡೆಸುವ ಅವನ ಪ್ರತಿನಿಧಿ ಇನ್ನೊಂದುಕಡೆ. ಐದು ವರ್ಷದ ಅವಧಿಯಲ್ಲಿ ಓರ್ವ ಲೋಕಸಭೆ ಸದಸ್ಯನಿಗೋಸ್ಕರ ಖರ್ಚಾಗುವ ಮೊತ್ತ ೧.೬೦ ಕೋಟಿ ರುಪಾಯಿ. ಭಾರತದಂಥ ದೊಡ್ಡ ದೇಶದ ಆಡಳಿತವನ್ನು ನಡೆಸಲು ಇಂಥ ಖರ್ಚುಗಳು ಅನಿವಾರ್ಯವೆಂದು ಹೇಳಬಹುದು. ಆದರೆ ಆಡಳಿತಕ್ಕಾಗಿ ಆಗುವ ಈ ಖರ್ಚಿಗೂ, ಭಾರತೀಯ ಪ್ರಜೆಯೊಬ್ಬನ ವಾರ್ಷಿಕ ಸರಾಸರಿ ಆದಾಯಕ್ಕೂ (ಜಿ.ಡಿ.ಪಿ)ಗೂ ಸಾವಯವ ಸಂಬಂಧ ಇರಬೇಡವೇ? ಇಂಥ ಸಂಬಂಧದ ಅಗತ್ಯ ಅನಿಸುತ್ತಿಲ್ಲವಾದರೆ ಇಂಗ್ಲೀಷರ ಆಳ್ವಿಕೆಯಿಂದ ಬಿಡುಗಡೆ ಹೊಂದಿ ಸ್ವತಂತ್ರ ಪಡೆದದ್ದಾದರೂ ಏಕೆ? ಇಂಗ್ಲಿಷರ ದುಂದುವೆಚ್ಚ, ದೇಶದ ಸಂಪತ್ತಿನ ಲೂಟಿಯನ್ನು ತಪ್ಪಿಸಿ ಸರ್ವೋದಯ ಸಮಾಜ ರಚನೆಯ ಉದ್ದೇಶ್ಯಕ್ಕಲ್ಲವೆ ಗಾಂಧೀಜಿ ಮತ್ತು ಇತರ ನಾಯಕರು ಸ್ವಾತಂತ್ರ್ಯ ಚಳುವಳಿ ನಡೆಸಿದ್ದು?

ಇನ್ನು ಚುನಾವಣೆಯಲ್ಲಿ ಆದ ಮತದಾನದ ಪ್ರಮಾಣ. ದೇಶದ ಮತದಾರರಲ್ಲಿ ಕೇವಲ ೫೮.೪೩% ರಷ್ಟು ಮತದಾರರು ಮತ ಹಾಕಿದ್ದಾರೆ. ಇನ್ನು ಶೇಕಡಾ ೪೨ರಷ್ಟು ಮತದಾರರು ತಮ್ಮ ಮತವನ್ನು ಹಾಕಿಲ್ಲ. ಅಂದರೆ ಈಗ ತನ್ನದು ಬಹುಮತವೆಂದು ಹೇಳಿಕೊಳ್ಳುವ ಯು.ಪಿ.ಎ ಸಂಘಟನೆ ನಿಜವಾಗಿಯೂ ಅಲ್ಪಮತದವರೆಂದು ಕರೆದುಕೊಳ್ಳುವ ಬಹದೊಡ್ಡ ಜನಸಂಖ್ಯೆಯ ಮೇಲೆ ತನ್ನ ಅಧಿಕಾರವನ್ನು ಚಲಾಯಿಸಲಿದೆ. ಈ ಅಲ್ಪ ಮತದವರ ಅಭಿಪ್ರಾಯವನ್ನು, ನೋವನ್ನು, ಅಧಿಕಾರಸ್ಥರಿಗೆ ತಲುಪಿಸುವ ಮಾಧ್ಯಮವಾಗಿ ವಿರೋಧ ಪಕ್ಷ ಇಲ್ಲದೇ

ಇರುವುದು ಈಗ ಮುಗಿದಿರುವ ರಾಷ್ಟ್ರೀಯ ಮಹಾ ಚುನಾವಣೆಯಿಂದ ಪ್ರಜಾತಂತ್ರದ ಹಿನ್ನಡೆಯಾಗಿದೆಯೆಂದು ಅನಿಸಿದರೆ ಏನು ತಪ್ಪು?

ಹಾಗೆ ನೋಡಿದರೆ ಪ್ರಜಾತಂತ್ರದ ಅನಿವಾರ್ಯ ರೋಗವೇ ಆಗಿದೆ ಈ ಬಹುಮತ ಮತ್ತು ಅಲ್ಪಮತದ ಸಿದ್ಧಾಂತ. ಈ ಸಿದ್ಧಾಂತದ ಕಾರಣದಿಂದಾಗಿ ಒಳ್ಳೆಯ ಸಲಹೆಗಳು, ವಿಚಾರಗಳು ಬಹುಮತದ ರೋಡ್‌ರೋಲರ್ ಕೆಳಗೆ ಸಿಕ್ಕಿಹಾಕಿಕೊಂಡು ನುಚ್ಚು ನೂರಾಗುತ್ತವೆ. ಸಂತ ವಿನೋಬಾ ಹೇಳಿದ ಕಥೆ ಈ ಸಂದರ್ಭಧಲ್ಲಿ ಸಾರಭೂತವಾಗಿ ಒದಗಿಬರುತ್ತದೆ. ಒಬ್ಬ ಕುರುಡಿಗೆ ನಾಲ್ವರು ಮಕ್ಕಳಿದ್ದರು. ಅವರೆಲ್ಲರೂ ಕುರುಡರೇ. ಅವಳಿಗೊಬ್ಬ ಐದನೇ ಮಗ ಹುಟ್ಟಿದ. ಆದರೆ ಅವನ ಕಣ್ಣು ಸರಿಯಾಗಿ ಕಾಣಿಸುತ್ತಿದ್ದವು. "ಇದು ನನಗೆ ಕಾಣಿಸುತ್ತದೆ, ಅದು ನನಗೆ ಕಾಣಿಸುತ್ತದೆ ಎಂದು ಹೇಳುತ್ತಿದ್ದ. ಆ ತಾಯಿಗಾಗಲಿ, ಹಿರಿಯ ಮಕ್ಕಳಿಗಾಗಲಿ ಈ ಮಾತುಗಳು ಅರ್ಥವೇ ಆಗುತ್ತಿರಲಿಲ್ಲ. ಹೀಗಾಗಿ ಆ ಕೊನೆಯ ಮಗವಿಗೆ ಏನೋ ವಿಚಿತ್ರ ರೋಗ ಆಗಿರಬಹುದೆಂದು ಅವರಿಗೆ ಕಲ್ಪನೆಯುಂಟಾಯಿತು. ಕೊನೆಗೆ ಅವರು ಆ ಮಗುವನ್ನು ಡಾಕ್ಟರ್ ಬಳಿಗೆ ಕರೆದೊಯ್ದರು. ಆ ಡಾಕ್ಟರ್ ಕೂಡ ಕುರುಡನೇ ಆಗಿದ್ದ. ಆಪರೇಶನ್ ಮಾಡಿ ಹುಡುಗನ ಎರಡು ಕಣ್ಣುಗಳನ್ನೂ ಕುರುಡು ಮಾಡಿದ. ಅನಂತರ ಅವನು ಅದು ಕಾಣುತ್ತದೆ, ಇದು ಕಾಣುತ್ತದೆ ಎಂದೆಲ್ಲ ಹೇಳುವುದನ್ನು ಬಿಟ್ಟು ಬಿಟ್ಟ. ಆಗ ಅವರೆಲ್ಲ ಸಮಾಧಾನಪಟ್ಟುಕೊಂಡರು. ಹೀಗೇಕಾಯಿತು ಗೊತ್ತೇ? ಬಹು ಸಂಖ್ಯಾತರು ಕುರುಡರಿದ್ದುದೇ ಇದಕ್ಕೆ ಕಾರಣ. ಇವನೊಬ್ಬನಿಗೇ ಕಾಣುತ್ತದೆಂದ ಮೇಲೆ ಇವನಿಗೆ ರೋಗ ಬಂದಿರಲಿಕ್ಕೇ ಬೇಕೆಂದು ಅವರ ಪ್ರಾಮಾಣಿಕ ಅಭಿಪ್ರಾಯ. ಅರ್ಥಾತ್ ಬಹುಮತದ ರಾಜ್ಯವೆಂಬುದು ಬರೀ ಒಂದು ಯಾಂತ್ರಿಕವಾದ ಕೆಲಸ. ಅದರಲ್ಲಿ ಸ್ವತಂತ್ರ ವಿಚಾರಕ್ಕೆ ಅವಕಾಶವಿಲ್ಲ.

ಬಹುಮತದ ಆಡಳಿತ ಸ್ಥಿತಿ ಹೀಗಿರುವಾಗ ನಮ್ಮ ದೇಶಕ್ಕೊಂದು ಸುಯೋಗ್ಯವಾದ ವಿರೋಧ ಪಕ್ಷ ಬೇಡವೇ? ದೇಶದಲ್ಲಿ ಸಾರ್ವತ್ರಿಕ ಚುನಾವಣೆಯ ಪ್ರಕ್ರಿಯೆ ಪ್ರಾರಂಭವಾದಾಗಿನಿಂದಲೂ ದ್ವಿಪಕ್ಷ ಪ್ರಜಾತಂತ್ರದ ಬೇರು ದೇಶದ ಭೂಮಿಯಲ್ಲಿ ಇಳಿಯಲೇ ಇಲ್ಲ. ಮತದಾರ ಪ್ರೌಢನಾಗಲೇ ಇಲ್ಲ. ದೇಶಕ್ಕೆ ಸ್ವಾತಂತ್ರ್ಯ ಬಂದು ಅರವತ್ತು ವರ್ಷಗಳಾದರೂ ಮತದಾರ ಇನ್ನೂ ಪ್ರೌಢನಾಗಲಿಲ್ಲವೆಂದ ಮೇಲೆ ಅವನು ಪ್ರೌಢನಾಗುವುದು ಯಾವಾಗ? ಆದ್ದರಿಂದ ೨೦೦೯ರ ರಾಷ್ಟ್ರೀಯ ಚುನಾವಣೆ ಪ್ರಜಾತಂತ್ರದ ಹಿನ್ನಡೆಯೋ, ಮುನ್ನಡೆಯೋ ಎಂಬ ಪ್ರಶ್ನೆಗೆ ಅವಕಾಶ ಮಾಡಿಕೊಟ್ಟಿರುವುದು.

ಇನ್ನು ಚುನಾವಣೆಯ ಫಲಿತಾಂಶ. ಯು.ಪಿ.ಎ. ಸಂಘಟನೆಗೆ ಬಹುಮತ ಬಂದಿದೆಯೆಂಬುದು ಗೊತ್ತಾಗುತ್ತಿದ್ದಂತೆ ಎನ್.ಡಿ.ಎ ಪಾಳ್ಯದಲ್ಲಿ ನಿರಾಶೆಯ ಕಾರ್ಮೋಡ ಕವಿಯಿತು. ಉಕ್ಕಿನ ಮನುಷ್ಯ, ದೂರದೃಷ್ಟಿಯ ನೇತಾರ, ಐದು ದಶಕಗಳ ಹೋರಾಟದ ಅನುಭವಿ, 'ಭಾರತ ಪ್ರಕಾಶಿಸುತ್ತಿದೆ' ಎಂಬ ಘೋಷಣೆಯ ಮುಖಂಡ ಅಡ್ವಾಣಿ ಮತ್ತು ಇತರ ನಾಯಕರು ತಮ್ಮ ಭೀಕರ ಸೋಲಿನಿಂದ ಆಘಾತಕ್ಕೊಳಗಾದರು. ಕಿಂಕರ್ತವ್ಯ ಮೂಢರಾದರು. ಎನ್.ಡಿ.ಎ ಮೈತ್ರಿಕೂಟದ ಪಕ್ಷಗಳು, ಕಮ್ಯೂನಿಸ್ಟರು ಮತ್ತು ಇತರ ವಿರೋಧ ಪಕ್ಷಗಳು ಗೆದ್ದ ಸದಸ್ಯರ ಸಂಖ್ಯೆ ೨೯೫ ಆಗಿತ್ತು. ಅಂದರೆ ಸಾಮಾನ್ಯ ಬಹುಮತದ ಸಂಖ್ಯೆಯಾದ ೨೭೨ ಕಿಂತ ಇನ್ನೂ

೨೩ ಹೆಚ್ಚಾಗಿತ್ತು. ಆದ್ದರಿಂದ ಯು.ಪಿ.ಎ ಸಂಘಟನೆಗೆ ವಿರುದ್ಧವಾಗಿ ಹೋರಾಡಿದ ಪ್ರತಿಯೊಂದು ರಾಜಕೀಯ ಪಕ್ಷ ಮತ್ತು ಸ್ವತಂತ್ರ ಉಮೇದುವಾರರು ತಮ್ಮಲ್ಲಿಯ ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ ತಮ್ಮೆಲ್ಲರ ಸಾಮಾನ್ಯ ಪ್ರತಿಸ್ಪರ್ಧಿ ಅಥವಾ ಶತ್ರುವಾಗಿದ್ದ ಯು.ಪಿ.ಎ ಸಂಘಟನೆಯನ್ನು ಅಧಿಕಾರದಿಂದ ದೂರವಿಡಲು ಪ್ರಯತ್ನ ಮಾಡದೇ ಇದ್ದುದು ರಾಜಕೀಯ ದುರಂತವೆಂದೇ ಹೇಳಬಹುದು. ಈ ಅದ್ಭುತ ಘಟನೆಯ ಜಾದು ಆಗದೇ ಇರುವುದಕ್ಕೆ ಮೊದಲನೆಯ ಕಾರಣ ಚುನಾವಣೆಯ ಫಲಿತಾಂಶ ಹೊರಬೀಳುತ್ತಿದ್ದಂತೆಯೇ ಎನ್.ಡಿ.ಎ ಪಾಳ್ಯದ ಮುಖಂಡರು ಆಘಾತಗೊಂಡರು. ತತ್ಪರಿಣಾಮವಾಗಿ ಮುಂದಿನ ದಾರಿ ತೋಚದಾಯಿತು. ಎರಡನೆಯ ಕಾರಣ ತಮ್ಮೊಂದಿಗೆ ಕಮ್ಯುನಿಸ್ಟರು, ಟಿ.ಡಿ.ಪಿ, ಬಿ.ಜೆ.ಡಿ, ಬಿ.ಎಸ್.ಪಿ, ಜೆ.ಡಿ.ಎಸ್ ಮುಂತಾದ ಪಕ್ಷಗಳು ಯಾವುದೇ ಕಾರಣಕ್ಕೆ ಸಹಕರಿಸುವುದಿಲ್ಲವೆಂಬ ಹಿಂಜರಿಕೆ ಬಿ.ಜೆ.ಪಿ ನಾಯಕರಲ್ಲಿ ಉಂಟಾಯಿತು. ಒಂದು ವೇಳೆ ಈ ಆಘಾತ ಮತ್ತು ಈ ಹಿಂಜರಿಕೆಯನ್ನು ತ್ಯಜಿಸಿ ಎನ್‌ಡಿಎ ಎಲ್ಲ ವಿರೋಧ ಪಕ್ಷಗಳ ನಾಯಕರಿಗೆ ಸರ್ಕಾರದಲ್ಲಿ ಪ್ರಮುಖ ಸ್ಥಾನ ದೊರೆಯುವ ಸಾಧ್ಯತೆಯನ್ನು ವಿವರಿಸಿ ಅಡ್ವಾಣಿ ಮಾತ್ರ ಪ್ರಧಾನಮಂತ್ರಿಯಾಗಿರಲಿ ಎಂಬ ಸೂತ್ರದೊಂದಿಗೆ ಬಿ.ಜೆ.ಪಿ ಕೇಂದ್ರದಲ್ಲಿ ಸರ್ಕಾರವನ್ನು ರಚಿಸಿದ್ದರೆ ಕ್ರಮೇಣ ಇನ್ನುಳಿದ ಕೆಲವು ಪಕ್ಷಗಳ ಸದಸ್ಯರು ವಿರೋಧ ಪಕ್ಷಗಳ ಮೈತ್ರಿ ಕೂಟದ ಸರ್ಕಾರವನ್ನು ರಚಿಸಲು ಮುಂದೆ ಬರುವ ಸಾಧ್ಯತೆ ಇತ್ತು. ರಾಜಕೀಯ ಚದುರಂಗದಾಟವನ್ನು ಆಡದೆ ಸುಮ್ಮನೆ ಕುಳಿತ ಎನ್.ಡಿ.ಎ ನಾಯಕರ ಮಂಕು ಬುದ್ಧಿಗೆ ಏನೆಂದು ಹೇಳಬೇಕು. ಒಟ್ಟಿನಲ್ಲಿ ಭಾರತೀಯ ಪ್ರಜಾತಂತ್ರ ವ್ಯವಸ್ಥೆಯಲ್ಲಿ ದ್ವಿಪಕ್ಷೀಯ ರಾಜಕಾರಣದ ಬಹು ಅಮೂಲ್ಯವಾದ ಅವಕಾಶವೊಂದು ತಪ್ಪಿ ಹೋದ್ದರಿಂದ ಹದಿನೈದನೇ ರಾಷ್ಟ್ರೀಯ ಚುನಾವಣೆ ಪ್ರಜಾತಂತ್ರದ ಹಿನ್ನಡೆಯೋ, ಮುನ್ನಡೆಯೋ ಎಂಬ ಪ್ರಶ್ನೆ ಹುಟ್ಟುವುದಕ್ಕೆ ಅವಕಾಶ ಮಾಡಕೊಟ್ಟಿದೆ.

ದೇಶದ ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿ ನಮಗೆ ತೃತೀಯ ರಂಗ, ಚತುರ್ಥ ರಂಗ ಇತ್ಯಾದಿ ಕಲಬೆರಕೆಯ, ಸ್ವಾರ್ಥ ಚಿಂತನೆಯ ಪಕ್ಷಗಳ ಕೂಟದ ಬದಲಾಗಿ ಸ್ಪಷ್ಟವಾದ ಸಾಮಾಜಿಕ, ಆರ್ಥಿಕ ಸಿದ್ಧಾಂತವುಳ್ಳ ಎರಡು ಪ್ರತ್ಯೇಕ ರಾಜಕೀಯ ಪಕ್ಷಗಳು ಸಾಕು. ಇವು ಪರ್ಯಾಯ ಪದ್ಧತಿಯಂತೆ ಪ್ರತಿ ಐದು ವರ್ಷಕ್ಕೊಮ್ಮೆ ಅಥವಾ ತುರ್ತು ಪರಿಸ್ಥಿತಿಯಲ್ಲಿ ವಿಶೇಷವಾಗಿ ಅಧಿಕಾರ ಹಿಡಿದು ಪ್ರಜಾತಂತ್ರವನ್ನು ಮುಂದೊಯ್ದರೆ ಸಾಕು. ಒಂದು ಮಾತು ಇಲ್ಲಿ ಮುಖ್ಯ. ಯಾವುದೇ ರಾಜಕೀಯ ಪಕ್ಷವಿರಲಿ ಅದು ನಿಜಾರ್ಥದಲ್ಲಿ ರಾಷ್ಟ್ರೀಯ ಪಕ್ಷವಾಗಿರಬೇಕು. ಅಂದರೆ ಹಳ್ಳಿಯಿಂದ ದಿಲ್ಲಿಯವರೆಗೆ ಅದರ ಸಂಘಟನೆ ಪಿರಾಮಿಡ್ ರೂಪದಲ್ಲಿ ರಚಿತವಾಗಿರಬೇಕು ಮತ್ತು ಅದರಲ್ಲಿ ಪ್ರಜಾತಾಂತ್ರಿಕ ವ್ಯವಸ್ಥೆಯಿರಬೇಕು.

ಪ್ರಜಾತಂತ್ರದ ಹಿನ್ನಡೆಯಾಗಿದೆಯೇನೋ ಎಂದು ಅನಿಸುವುದಕ್ಕೆ ಇನ್ನೊಂದು ಕಾರಣವೇನೆಂದರೆ ಯು.ಪಿ.ಎ ಸಂಘಟನೆ ಅಧಿಕಾರ ಹಿಡಿಯುತ್ತದೆ ಎಂದು ಗೊತ್ತಾಗುತ್ತಲೆ ದೇಶದ ಎಲ್ಲ ವಿರೋಧಿ ಪಕ್ಷಗಳ ನಾಯಕರು ದಿಲ್ಲಿಗೆ ಹಾರಿ ಹೋಗಿ ಸೋನಿಯಾ ಪದತಲದಲ್ಲಿ ಶರಣಾಗತಿಯನ್ನು ವ್ಯಕ್ತಪಡಿಸಿದರು. ಮಾಯಾವತಿ ದಲಿತೋದ್ಧಾರದ ಏಕೈಕ ಉದ್ದೇಶ್ಯದಿಂದ ಹೋರಾಡಿ ಒಂದು ಬಲವಾದ ಪಕ್ಷವನ್ನು ಕಟ್ಟಿದಂಥವರು, ಇನ್ನು ಟಾಟಾ ಕಂಪನಿಯಂಥ ಬಹು ದೊಡ್ಡ

ಕೈಗಾರಿಕಾ ಕಂಪನಿಯನ್ನು ಪಶ್ಚಿಮ ಬಂಗಾಳದಿಂದ ಓಡಿಸಿ, ರೈತರ ಭೂಮಿಯನ್ನು ರೈತರಿಗೆ ದೊರೆಯುವಂತೆ ಮಾಡಿದ ಮಮತಾ ಬ್ಯಾನರ್ಜಿಯಂಥವರು ಅಧಿಕಾರದ ಲಾಲಸೆಯಿಂದ ಯು.ಪಿ.ಎ ಸಂಘಟನೆಯೊಂದಿಗೆ ಸೇರಿದ್ದು ನಮ್ಮ ಪ್ರಜಾತಂತ್ರದ ಇನ್ನೊಂದು ದುರಂತ. ಹೋರಾಟ ಮಾಡುತ್ತ ಮೌಲ್ಯಗಳನ್ನು ಸ್ಥಾಪಿಸುವುದು ಕತ್ತಿಯ ಅಲಗಿನ ಮೇಲೆ ನಡೆದಂತೆ. ಕುರ್ಚಿಯ ಮೇಲೆ ಕೂಡುವುದು ಸುಲಭದ ಕೆಲಸ ದೇಶದ ಪ್ರಜಾತಂತ್ರ ಬಲಿಷ್ಠವಾಗುವುದಕ್ಕೆ ಮಾಯಾವತಿ ಮತ್ತು ಮಮತಾ ಅಧಿಕಾರದ ಕೇಂದ್ರ ಬಿಂದುವಿನಿಂದ ದೂರ ಉಳಿದು ಜನಸಂಘಟನೆಗೇ ತಮ್ಮ ಶಕ್ತಿಯನ್ನು ಕೊಡಬೇಕಾಗಿತ್ತು. ರಾಹುಲ್ ಗಾಂಧೀ ಈ ವಿಚಾರದಲ್ಲಿ ಸ್ವಲ್ಪ ಉತ್ತಮ. ಆದರೆ ಆತ ಸರ್ಕಾರದ ಪರ ಯುವಶಕ್ತಿಯನ್ನು ಸಂಘಟಿಸುವಾತ. ದೇಶಕ್ಕೆ ಬೇಕಾದದ್ದು ಶ್ರೀ ಸಾಮಾನ್ಯರನ್ನೂ ಸಂಘಟಿಸುವಂಥ ಮತ್ತು ಅವರ ಸಮಸ್ಯೆಗಳನ್ನು ನಿವಾರಿಸಲು ಸರ್ಕಾರದ ಮೇಲೆ ಒತ್ತಡ ತರಬೇಕಾದ ನಾಯಕರು. ಈ ವಿಷಯದಲ್ಲಿ ಮಾಯಾವತಿ ಮತ್ತು ಮಮತಾ ದಾರಿ ತಪ್ಪಿದರು. ಇದು ವಿಷಾದಕರ ಬೆಳವಣಿಗೆ. ರಾಜ್ಯಶಕ್ತಿ ಮತ್ತು ದಂಡಶಕ್ತಿಯ ಮೇಲೆ ತೃತೀಯ ಶಕ್ತಿಯಾಗಿ ಲೋಕಶಕ್ತಿಯನ್ನು ಇವರು ನಿರ್ಮಾಣ ಮಾಡಬೇಕಿತ್ತು.

ಈ ಚುನಾವಣೆ ಪ್ರಜಾತಂತ್ರದ ಮುನ್ನಡೆಯೆಂಬುದಕ್ಕೆ ಹೆಚ್ಚು ಕಾರಣಗಳಿಲ್ಲ. ಒಂದೇ ಒಂದು ಮುಖ್ಯವಾದ ಕಾರಣವಿರಬಹುದಾದರೆ ಅದು ದೇಶದಲ್ಲಿ ಸ್ಥಿರ ಸರ್ಕಾರ ರಚನೆಯಾಗುವುದಕ್ಕೆ ದಾರಿಮಾಡಿಕೊಟ್ಟದ್ದು. ಸ್ಥಿರ ಸರ್ಕಾರದಿಂದ ದೇಶದ ಪ್ರಜಾತಂತ್ರ ಪ್ರಬಲವಾಗುತ್ತದೋ, ದುರ್ಬಲವಾಗುತ್ತದೋ ಎಂಬುದು ಕಾಲಗರ್ಭದಲ್ಲಿ ಅಡಗಿರುವ ವಿಷಯ.

* * *

ಶೂದ್ರ

ಕಳೆದ ಮೂವತ್ತೈದು ವರ್ಷಗಳಿಂದ ಪ್ರಕಟಗೊಳ್ಳುತಿರುವ "ಶೂದ್ರ" ಮಾಸ ಪತ್ರಿಕೆಯು ತನ್ನ ಮೂವತ್ತೈದನೆ ವರ್ಷದ ಸವಿನೆನಪಿಗಾಗಿ ವಿವಿಧ ಲೇಖಕರಿಂದ ಪ್ರಚಲಿತ ವಿಷಯಗಳ ಬಗ್ಗೆ ಅವರವರ ಮಾನಸಿಕ ಹೊಯ್ದಾಟಗಳನ್ನು ಲೇಖನದ ರೂಪದಲ್ಲಿ ಸಂಗ್ರಹಿಸಿ "ಲೇಖಕನಾಗಿ ನನ್ನ ತಲ್ಲಣಗಳು" ಎಂಬ ಹೆಸರಿನಲ್ಲಿ ವಿಶೇಷ ಸಂಚಿಕೆಯನ್ನು ಹೊರಡಿಸಿದೆ. ಇದರಲ್ಲಿ ಕರ್ನಾಟಕದ ಮೂವತ್ತು ಬಗೆಯ ಸಾಹಿತಿಗಳು ಮತ್ತು ಚಿಂತಕರು ತಮ್ಮ ತಲ್ಲಣಗಳನ್ನು ಅಭಿವ್ಯಕ್ತಿಗೊಳಿಸಿದ್ದಾರೆ. ಈ ವಿಶೇಷ ಸಂಚಿಕೆಯು ೧೯೮ ಪುಟಗಳನ್ನು ಹೊಂದಿದೆ. ಬೆಲೆ ೧೨೫ರೂಪಾಯಿ.

ವಿಳಾಸ :

ಶೂದ್ರ ಪ್ರಕಾಶನ
೫೭೩- "ಕೋಟೆ ಮನೆ"
೧೭ನೇ ಕ್ರಾಸ್ ಇಸ್ರೊ ಲೇಔಟ್
ಬೆಂಗಳೂರು ೫೬೦೦೭೮.

ನನ್ನ ಪಾಠ - ಶಿಷ್ಯರ ಪಾಡು

- ಸಂಪಟೂರು ವಿಶ್ವನಾಥ್

ಮನುಷ್ಯರಾಗಿ ಹುಟ್ಟಿದವರೆಲ್ಲಾ ಪಾಠ ಕೇಳಲೇ ಬೇಕು. ಮನುಷ್ಯರಾಗಿ ಪಾಠವನ್ನು ಕೇಳದೆ ಇರೋಕ್ಕೆ ಸಾಧ್ಯವಿಲ್ಲ. ಹುಟ್ಟಿದ ತಕ್ಷಣ ತಾಯಿ ಪಾಠ ಹೇಳೋಕ್ಕೆ ಶುರು ಮಾಡುತ್ತಾಳೆ. ಆಮೇಲೆ ಮೇಡಂ (ಮಿಸ್ಸು), ಆಮೇಲೆ ಮೇಷ್ಟ್ರು, ಆಮೇಲೆ ಸ್ನೇಹಿತರು, ಆಮೇಲೆ ಗಂಡ ಅಥವಾ ಹೆಂಡ್ತಿ, ಆಮೇಲೆ... ಯಾರೋ ಒಬ್ರು, ಡಾಕ್ಟ್ರೋ, ಲಾಯರ್‍ರೋ, ಸಂನ್ಯಾಸಿಗಳೋ... ಯಾರೋ? ಪಾಠ ಕೇಳಿಸ್ಕೊಳ್ಳೋದು ಪ್ರತಿಯೊಬ್ಬರ ಜಾಯಮಾನ. ಆದ್ರೆ, ಪಾಠ ಹೇಳೋದು? ಕೆಲವರ ಜಾಯಮಾನ. ಪಾಠ ಹೇಳಿದ ಗುಂಪಿಗೆ ಸೇರಿದವರ ಪೈಕಿ ನಾನೂ ಒಬ್ಬ.

ನಾನು, ಪಾಠ ಹೇಳೋದಕ್ಕೆ ಮೊದಲು ಎಲ್ಲರ ಹಾಗೆ ಪಾಠ ಕೇಳಿಸಿಕೊಂಡವ್ನೇ.. ಕೇಳಿಸ್ಕೊಂಡಾಗಲೆಲ್ಲಾ, ನಾನೇ ಪಾಠ ಹೇಳಿದ್ರೆ ಹೇಗಿರುತ್ತೆ ಅಂತ ಊಹಿಸ್ಕೊಳ್ತಾ ಇದ್ದೆ. ನನ್ನ ಪಾಠದಿಂದ ಹುಡುಗರ/ ಹುಡುಗಿಯರ ಪಾಡು ಏನಾಗಬಹುದೂಂತ ಮಾತ್ರ ಊಹಿಸಿಕೊಳ್ಳಲಿಲ್ಲ.

ಇರಲಿ. ಮೊದಲು, ನಾನು ಪಾಠ ಕೇಳಿಸಿಕೊಂಡ ಕೆಲವು ಸ್ವಾರಸ್ಯಗಳನ್ನ ಹೇಳ್ತೀನಿ ಕೇಳಿ. ಬರೀ ಮೇಡಂಗಳೇ ಪಾಠ ಹೇಳ್ತಿದ್ದ, ಮನೆಯ ಹತ್ತಿರವಿದ್ದ ಒಂದು ಒಳ್ಳೆಯ ಸ್ಕೂಲಿಗೆ ನನ್ನನ್ನು ನಮ್ಮ ಅಪ್ಪ ಅಮ್ಮ ಸೇರಿಸಿದರು. ಯಾಕೋ ಏನೋ ಆ ಮೇಡಂಗಳು ನನ್ನ ಒಂದು ದಿನ ಬಯ್ದರು. ನಾನು ಬರೀ ಮೇಡಂಗಳೇ ಇರೋ ಸ್ಕೂಲಿಗೆ ಹೋಗೋಲ್ಲ ಅಂದ್ಬಿಟ್ಟೆ. ನನ್ನ ಮುಂದಿನ ಸ್ಕೂಲ್‌ನಲ್ಲಿ ಬರೀ ಮೇಷ್ಟ್ರುಗಳೇ ಇದ್ದರು. ಅವರೆಲ್ಲರೂ ತುಂಬಾ ಸ್ಟ್ರಿಕ್ಟು. ಆ ಸ್ಕೂಲ್ ತುಂಬಾ ಬಡ ಹುಡುಗರೇ ಇರ್ತಿದ್ರು. ಎಲ್ರೂ ಅದನ್ನ 'ತೊಟ್ಟಿ ಪಾಪರ್ ಪ್ರೈಮರಿ ಸ್ಕೂಲ್' ಅಂತಿದ್ರು. ಅಲ್ಲೊಬ್ರು ಹೆಡ್ ಮೇಷ್ಟ್ರಿದ್ರು. ಅವರನ್ನ ಎಲ್ರೂ ಶೆಟ್ರ ಮೇಷ್ಟ್ರು ಅಂತಿದ್ರು. ತುಂಬಾ ಚೆನ್ನಾಗಿ ಕಲಿಸ್ತಿದ್ರು ಇವ್ರು, ಇವರ ಒಂದು ಕೈನಲ್ಲಿ ಚಾಕ್ ಪೀಸು, ಇನ್ನೊಂದು ಕೈನಲ್ಲಿ ಕೋಲು. ಒಂದೊಂದು ಸಾರಿ ಕೋಲಿಗೆ ಬದಲು ಬೀಗದ ಕೈ ಗೊಂಚಲು. ಒಂದು ದಿನ ಹೆಡ್‌ಮೇಷ್ಟ್ರು ನನ್ನನ್ನ ಮಾನಿಟರ್ ಮಾಡಿ "ಯಾರೇ ಗಲಾಟೆ ಮಾಡಿದ್ರೂ ಸುಮ್ಮನೆ ಇರ್ಬೇಡ", ಅಂತ ಹೇಳಿ ಹೊರಕ್ಕೆ ಹೋದರು. ಮೇಜಿನ ಮೇಲಿದ್ದ ದಂಡವನ್ನು ಕೈಗೆತ್ತಿಕೊಂಡೆ. ಗಲಾಟೆ ಮಾಡಿದ ಹುಡುಗಿಯ ಮೇಲೆ ಒಮ್ಮೆ ದಂಡ ಪ್ರಯೋಗ ಮಾಡಿದೆ. ಫಲವಾಗಿ, ಮಾರನೆಯ ದಿನ ಒಂದು ಘಂಟೆಯ ಹೊತ್ತು ನನ್ನನ್ನು ಕೂಡಿ ಹಾಕಿದ್ದರು. ಮಾನಿಟರ್ ಗಿರಿಯೂ ಹೋಯಿತು! ಈ ಸ್ಥಿತಿಯಲ್ಲಿ ನನ್ನ ಅಣ್ಣ ನನ್ನನ್ನು ನೋಡಿಕೊಂಡು ಹೋದರು. ಸರ್ಕಾರಿ ಹೈಸ್ಕೂಲಿನಲ್ಲಿ ನನ್ನ ಇಂಗ್ಲಿಷ್ ಮೇಷ್ಟ್ರು ಟಿ.ಅಬ್ದುಲ್ ಖುದ್ದೂಸ್ ಸಾಹೇಬ್ರು ಹೇಳ್ತಿದ್ರು, "ಒಬ್ಬ ಮೇಷ್ಟ್ರನ್ನ ಬೆಸ್ಟ್ ಅಂತ ಕರಿಯಬೇಕಾದವರು ವಿದ್ಯಾರ್ಥಿಗಳೇ ಹೊರ್ತು, ಅಧಿಕಾರಿಗಳಲ್ಲ," ಅಂತ.

ಜೀವವಿಜ್ಞಾನದ ಮೇಷ್ಟ್ರು ಎಂ.ಎ.ರಂಗಸ್ವಾಮಿಯವರು, ಆಟದಲ್ಲಿ ನಮ್ಮ ಶಾಲೆ ಸೋತರೆ, ಆಟಗಾರನಿಗೆ ಮಾರನೆಯದಿನ ತರಗತಿಯಲ್ಲಿ ಶಿಕ್ಷೆಕೊಡ್ತಿದ್ರು. ತರಗತಿಯನ್ನೇ ಕಾವ್ಯ ಲೋಕಕ್ಕೆ ಕರೆದುಕೊಂಡು ಹೋಗುತ್ತಿದ್ದರು ಹೆಚ್.ಎಂ.ರಾಮಾರಾಧ್ಯರು. ಶುಭ್ರತೆಗೆ ಒತ್ತು ಕೊಡುತ್ತಿದ್ದ ಕೆಮಿಸ್ಟ್ರಿ ಮೇಷ್ಟ್ರು ಟಿ.ಎಸ್.ಕೃಷ್ಣಮಾಚಾರ್ಯರು- ಇವರೆಲ್ಲ ನನ್ನ ಮರೆಯಬಾರದ ಮೇಷ್ಟ್ರುಗಳು.

ಇಂಟರ್ ಮೀಡಿಯಟ್ ಮತ್ತು ಪದವಿ ತರಗತಿಗಳಲ್ಲಿ ಇಂಗ್ಲಿಷ್ ಭಾಷೆಯ ಬಗ್ಗೆ ತಿಳುವಳಿಕೆ ನೀಡಿದ ಪ್ರೊ|| ಬಿ.ಚಂದ್ರಶೇಖರ ಮತ್ತು ಡಾ|| ಎಸ್.ರಾಮಸ್ವಾಮಿ; ಕನ್ನಡ ಭಾಷೆಯ ಸೊಗಡನ್ನು ಸೂಸಿದ ಎಂ.ವಿ.ಸೀತಾರಾಮಯ್ಯನವರು ಮತ್ತು ಜಿ.ಪಿ.ರಾಜರತ್ನಂರವರ ಮಾರ್ಗದರ್ಶನವನ್ನು ಮರೆಯಲಾರೆ. ಸಸ್ಯ ವಿಜ್ಞಾನವನ್ನು ಅರೆದು ಕುಡಿದಿದ್ದ ಟಿ.ತಾತಾಚಾರ್ಯರು, ಅಹ್ಮದುಲ್ಲಾ ಷರೀಫ್ ಸಾಹೇಬರು, ವಿಜ್ಞಾನದಲ್ಲಿ ತಣಿಯದ ಕುತೂಹಲವನ್ನು ಹುಟ್ಟಿಸಿದರು.

ಹೀಗೆಯೇ ಶಿಕ್ಷಕರ ತರಪೇತಿ ಕಾಲೇಜಿನಲ್ಲಿ, 'Say What you mean and mean what you say" ಅಂದ ಶೇಷ ಐಯ್ಯಂಗಾರ್ರು, 'Text book should be a pretext to teach the subject. Teach the child, not the text book", ಅಂದ ಎಂ.ಆರ್.ಶ್ರೀನಿವಾಸರಾಯರು, "A teacher should always be a student. You should keep on the ground", ಅಂದ ಪ್ರೊ|| ಡಿ.ಎಸ್.ಗೋರ್ಡನ್, ನುಡಿದಂತೆ ನಡೆದ ಮೇಷ್ಟ್ರುಗಳು.

ಇವರೆಲ್ಲರ ಆದರ್ಶಗಳು ಮತ್ತು ನನ್ನ ತಂದೆಯವರು ಹೇಳುತ್ತಿದ್ದ "ವಿದ್ಯೆ ಮಾರಾಟದ ವಸ್ತು ಆಗಬಾರದು; ಮೇಷ್ಟ್ರ ಆಸ್ತಿ ಅಂದ್ರೆ ಅವನು(ಳು) ಸಂಪಾದಿಸಿದ ಶಿಷ್ಯರೇ" ಎಂಬ ಮಾತುಗಳನ್ನು ರೂಢಿಗೆ ತರಬೇಕು ಎನ್ನುವ ಉತ್ಸಾಹದಲ್ಲಿ ೧೯೬೦ರ ಜುಲೈ ತಿಂಗಳಿನಲ್ಲಿ ಮೇಷ್ಟ್ರಾದೆ. ೧೯೯೬ರ ಫೆಬ್ರವರಿ ಅಂತ್ಯದ ವರೆಗೂ ನಾನು ಮೇಷ್ಟ್ರ/ಹೆಡ್‌ಮೇಷ್ಟ್ರ ಕೆಲಸವನ್ನು ಮಾಡಿದ ಶಾಲೆ, ಬೆಂಗಳೂರು ಕುಮಾರಾ ಪಾರ್ಕಿನ ಗಾಂಧೀನಗರ ಪ್ರೌಢೋನ್ನತ ಶಾಲೆ. ಆಗ, ಶಿಕ್ಷಣ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದ ವಿದ್ಯಾಸಾಗರ ಎಂ.ಪಿ.ಎಲ್. ಶಾಸ್ತ್ರಿಗಳು ನನ್ನ ಹೆಡ್‌ಮೇಷ್ಟ್ರು, ಮಾನವತೆಯೇ ಮೂರ್ತಿವೆತ್ತಂತಿದ್ದ ಟಿ.ಶ್ರೀನಿವಾಸನ್, ಸಂಸ್ಕೃತ ಮತ್ತು ಕನ್ನಡ ಭಾಷೆಗಳಲ್ಲಿ ಅಗಾಧ ಪಾಂಡಿತ್ಯ ಪಡೆದಿದ್ದ ಎಂ.ವಿ.ಚಕ್ರವರ್ತಿ ಮುಂತಾದವರು ನನ್ನ ಸಹೋದ್ಯೋಗಿಗಳಾದರು.

ನಾನು ಮಾಡಿದ ಮೊದಲ ಪಾಠ ಒಂಭತ್ತನೇ ತರಗತಿಯ ಇಂಗ್ಲಿಷ್ ಗದ್ಯ, ನನ್ನ ಮೇಲಿನ ಕರುಣೆಯಿಂದಲೋ, ಮೊದಲನೆ ಕ್ಲಾಸಿನಲ್ಲಿ ನನ್ನ ಗುಣಾವಗುಣಗಳನ್ನು ಅವಲೋಕಿಸಲೋ ಅಥವಾ ನಾನು ಇತರರಿಗಿಂತ ಭಿನ್ನವಾಗಿದ್ದದ್ದರಿಂದಲೋ, ಕ್ಲಾಸು ಚೆನ್ನಾಗಿಯೇ ನಡೆಯಿತು. ನನ್ನಲ್ಲಿದ್ದ ಭಯ ನಿವಾರಣೆಯಾಯಿತು. 'ಪ್ರಥಮ ಚುಂಬನಂ ದಂತ ಭಗ್ನಂ' ಆಗಲಿಲ್ಲವಲ್ಲಾ ಅಂತ ನನ್ನ ಬೆನ್ನನ್ನು ನಾನೇ ತಟ್ಟಿಕೊಂಡೆ. "ನಾಳೆಯಿಂದ ಕೆಲಸ ಆರಂಭಿಸು", ಅಂದ್ರು ಹೆಡ್‌ಮೇಷ್ಟ್ರು. ಮಾರನೆಯ ದಿನ ಸ್ವಲ್ಪ ಬೇಗ ಸ್ಕೂಲನ್ನು ಸೇರಿಕೊಂಡೆ. ಹುಡುಗರು ಆಡುತ್ತಿದ್ದ ವಾಲಿಬಾಲ್, ಕ್ರಿಕೆಟ್‌ಗಳನ್ನು ದೂರದಿಂದಲೇ ನೋಡಿದೆ. 'ಬರ್ತೀರಾ ಸಾರ್?! ನಿಮಗೆ ಆಡೋಕ್ಕೆ ಬರತ್ತಾ?

ಅಂತ ಒಂದಿಬ್ಬರು ಕೇಳಿದರು. ಕ್ರಿಕೆಟ್ ಆಡಿ ಅಭ್ಯಾಸವಿದ್ದಿದ್ದರಿಂದ ಮುನ್ನುಗ್ಗಬೇಕು ಅನ್ನಿಸಿತು. ತಕ್ಷಣ, ನಾನು ತೊಟ್ಟಿದ್ದ ಉಡುಪಿಗೆ ಏನಾಗತ್ತೋ, ಹುಡುಗರೊಂದಿಗೆ ಆಡಬಾರದು ಎನ್ನುವ ರೂಲ್ಸ್ ಏನಾದರೂ ಈ ಶಾಲೆಯಲ್ಲಿದೆಯೋ ಹೇಗೋ ಎಂದು ಅನುಮಾನಿಸಿದೆ. ನನ್ನ ಅನುಮಾನವನ್ನು ಕ್ಯಾಪ್ಟನ್ ಪರಿಹರಿಸಿದ. "ನೀವೂ ಬನ್ನಿ ಸಾರ್. ಮೊದಲು ಇದ್ದ ಸ್ಪೋರ್ಟ್ಸ್ ಸೆಕ್ರಟರಿ ಕೂಡ ಬರ್ತಿದ್ರು", ಅಂದ. "ನಾಳೆಯಿಂದ ಬರ್ತೀನಪ್ಪಾ", ಅಂದೆ.

ಶಾಲೆ ಆರಂಭವಾಯಿತು. ನನ್ನ ಸರ್ಟಿಫಿಕೇಟ್‌ಗಳನ್ನೆಲ್ಲಾ ನೋಡಿ ಟೈಂ ಟೇಬಲ್ಲನ್ನು ಕೊಟ್ಟರು. ಜೀವವಿಜ್ಞಾನ, ರಸಾಯನ ವಿಜ್ಞಾನ, ಇಂಗ್ಲಿಷ್, ಕನ್ನಡ ಮತ್ತು ನಾಟಕ ಶಾಸ್ತ್ರಗಳನ್ನು ೮,೯,೧೦,೧೧ನೆಯ ತರಗತಿಯ ವಿದ್ಯಾರ್ಥಿಗಳಿಗೆ ಬೋಧಿಸಬೇಕಾಯಿತು.

ಅಂದಿನಿಂದ ನನ್ನ ಮೇಷ್ಟ್ರ ಕೆಲಸ ನಿಜವಾಗಿ ಆರಂಭವಾಯಿತು. ನಿರ್ಜೀವವಾದ, ಅಚ್ಚಿನಲ್ಲಿರುವ ಪಾತ್ರಗಳ ಮಾತುಗಳನ್ನು, ಸಜೀವ ಪಾತ್ರಧಾರಿಗಳ ಮೂಲಕ, ಪ್ರೇಕ್ಷರಿಗೆ ಮುಟ್ಟಿಸುವಂತೆ, ನಾನು ಕಲಿಸ ಬೇಕಾದ ವಿಷಯಗಳಿಗೆ ಜೀವಕೊಟ್ಟು, ವಿಶಿಷ್ಟ ವ್ಯಕ್ತಿಗಳಾದ ಶಿಷ್ಯ/ ಶಿಷ್ಯೆಯರಿಗೆ ತಲುಪಿಸಲು ಆರಂಭಿಸಿದೆ.

ನನ್ನ ಶಾಲೆಯ ವಿದ್ಯಾರ್ಥಿ, ವಿದ್ಯಾರ್ಥಿನಿಯರೆಲ್ಲಾ ೧೩ ರಿಂದ ೧೭ ವರ್ಷದ ಒಳಗಿನವರಾಗಿದ್ದು, ಅಡಾಲಿಸೆಂಟ್ಸ್ ಆಗಿದ್ದರು. ಈ ವಯಸ್ಸಿನವರು ದೈಹಿಕ, ಮಾನಸಿಕ ಪ್ರಬುದ್ಧತೆಯನ್ನು ಸಾಧಿಸಿದವರಲ್ಲ. ಆದರೆ ಚಟುವಟಿಕೆಯ ಆಗರವಾಗಿದ್ದರು. ಚಟುವಟಿಕೆಯನ್ನು ನಿಯಂತ್ರಿಸುವುದು, ಶೈಕ್ಷಣಿಕವಾಗಿ ಬಳಸಿಕೊಳ್ಳುವುದು, ಸರ್ಕಸ್ ಕಂಪನಿ ಮ್ಯಾನೇಜರ್‌ರ ಕೆಲಸದಷ್ಟೇ ಕ್ಷಿಷ್ಟವಾದದ್ದು ಅನ್ನಿಸೋಕೆ ಪ್ರಾರಂಭವಾಯಿತು.

ಕೆಲಸಕ್ಕೆ ಸೇರಿದ ಮೊದಲ ಐದೇ ವರ್ಷಗಳಲ್ಲಿ, ನಾಟಕಶಾಸ್ತ್ರ, ರಸಾಯನ ವಿಜ್ಞಾನ, ಜೀವವಿಜ್ಞಾನ, ಪ್ರಥಮ ಚಿಕಿತ್ಸೆ, ಶೈಕ್ಷಣಿಕ ಸಮಸ್ಯೆಗಳ ಸಲಹೆಗಾರ, ಮಕ್ಕಳ ಮನೋವಿಜ್ಞಾನ/ ಶೈಕ್ಷಣಿಕ ಚಲನಚಿತ್ರಗಳನ್ನು ಪ್ರದರ್ಶಿಸುವುದು ಇಂತಹ ತರಪೇತಿಗಳನ್ನು ಪಡೆದುಕೊಂಡೆ. ಇವೆಲ್ಲದರಿಂದ ವಿದ್ಯಾರ್ಥಿಗಳೊಂದಿಗಿನ ನನ್ನ ಸಂಬಂಧ ನಿಕಟವಾಯಿತು. ನಾನು ಕಲಿತಿದ್ದನ್ನೆಲ್ಲಾ ವಿದ್ಯಾರ್ಥಿಗಳ ಮೇಲೆ ಪ್ರಯೋಗಿಸಿಬಿಡಬೇಕು ಎಂಬ ಕಾತುರ ನನಗೆ. ನಾನು ಓದಿದ್ದನ್ನೆಲ್ಲಾ ಹೇಳಿ ಬಿಡಬೇಕು ಎನ್ನುವ ಮಹದಾಸೆ ನನಗೆ. ಹೀಗಾಗಿ ಮಾತಿನ ಧಾಟಿ, ವೇಗ ಮಿತಿಮೀರುತ್ತಿತ್ತು ಕೆಲವು ಬಾರಿ. ಆದರೆ ನನ್ನ ಜಾಣ ವಿದ್ಯಾರ್ಥಿಗಳ ಪೈಕಿ ಕೆಲವರು ನವಿರಾಗಿ ಪಠ್ಯಪುಸ್ತಕದ ಕಡೆಗೆ ನನ್ನ ಗಮನವನ್ನು ಸೆಳೆಯುತ್ತಿದ್ದರು. ಬಹುಷಃ ಹಾಗೆ ಮಾಡದೆ ಇದ್ದಿದ್ದರೆ ನನ್ನ ನಂಬಿಕೆಯೇ ಮುಂದುವರಿಯುತ್ತಿತ್ತು. ಏನು ಗೊತ್ತೇ ಆ ನಂಬಿಕೆ? 'ನಾನು ಆಡಿದ ಮಾತುಗಳೆಲ್ಲವೂ ಎದುರಿಗಿರುವವರಿಗೆ ಅರ್ಥ ಆಗತ್ತೆ, ನಾನು ಹೆಚ್ಚು ಮಾತಾಡಿದಷ್ಟೂ ಹೆಚ್ಚು ಫಲಪ್ರದವಾಗತ್ತೆ' ಎನ್ನುವುದು. ಕ್ರಮೇಣ, 'ಪ್ರಶ್ನೋತ್ತರ ರೀತಿ', 'ವಿಚಾರ ವಿನಿಮಯ', 'ವಿದ್ಯಾರ್ಥಿಗಳಿಗೂ ಸಾಕಷ್ಟು ಪ್ರಾಮುಖ್ಯತೆ'ಯೇ ಸಾಧಾರಣ ವಿದ್ಯಾರ್ಥಿಗಳಿಗೆ ಹೆಚ್ಚು ಉಪಯುಕ್ತ ಎನ್ನುವುದನ್ನು ಕಂಡುಕೊಂಡೆ.

ನನ್ನ ಅದೃಷ್ಟ ಚೆನ್ನಾಗಿದ್ದಿದ್ದರಿಂದ ನನ್ನ ವಿದ್ಯಾರ್ಥಿಗಳು ನಾನು ಹೇಳಿದ

ಕೆಲಸಗಳನ್ನು ಮಾಡಿಕೊಂಡು ಬರುತ್ತಿದ್ದರು. ಆಟಗಳಲ್ಲಿ ಪಾಲ್ಗೊಳ್ಳುವುದು, ನಾಟಕ, ಚರ್ಚೆಗಳಲ್ಲಿ ಭಾಗವಹಿಸುವುದು, ಪಠ್ಯವಿಷಯಗಳ ಪ್ರಾತ್ಯಕ್ಷಿಕೆಗಳನ್ನು ತಯಾರಿಸುವುದು, ತಮ್ಮ ತರಗತಿಯ ಕೈ ಬರಹ ನಿಯತಕಾಲಿಕವನ್ನು ಹೊರತರುವುದು ಮಾಡಿದರು. ಕೆಲವರು ಸಹೋದ್ಯೋಗಿಗಳ ದೃಷ್ಟಿಯಲ್ಲಿ ಇವು ಅನಗತ್ಯ, ಟೈಂ ವೇಸ್ಟು ಅನ್ನಿಸುತ್ತಿತ್ತು. ಆದರೆ ಈ ಅವಕಾಶಗಳನ್ನು ಉಪಯೋಗಿಸಿಕೊಂಡವರು ಕಾಲೇಜುಗಳಲ್ಲಿ, ನಂತರ ವೃತ್ತಿ ಜೀವನದಲ್ಲಿ ಗಮನಾರ್ಹ ಸಾಧನೆಗಳನ್ನು ಮಾಡಿದರು. ಶಿಕ್ಷಣ, ವೈದ್ಯಕೀಯ, ಇಂಜಿನಿಯರಿಂಗ್, ಬ್ಯಾಂಕಿಂಗ್, ಸಂಗೀತ, ನಾಟಕ ಮತ್ತು ಚಲನಚಿತ್ರ, ಆಡಳಿತ, ರಾಜಕೀಯ, ಸಾಮಾಜಿಕ ಕ್ಷೇತ್ರಗಳಲ್ಲಿ ಪರಿಣತಿ ಪಡೆದವರು ನನ್ನ ಶಿಷ್ಯರು, ಶಿಷ್ಯೆಯರು ಎಂದು ಹೇಳಿಕೊಳ್ಳಲು ಹೆಮ್ಮೆ ಎನಿಸುತ್ತದೆ. (ಡಾ.ಪ್ರಕಾಶ್, ಡಾ.ಯೋಗೇಂದ್ರಸಿಂಹ, ಡಾ.ನರಸಿಂಹನ್.ಎಂ.ಎಸ್, ರಮೇಶ್, ಡಾ.ಪದ್ಮಜ್ಯೋತಿ, ಡಾ.ಕೆ.ಶ್ರೀಧರ್, ಡಾ.ಎಂ.ವಿ.ವಾಸುದೇವನ್, ಡಾ.ಕೆ.ಆರ್.ಸುರೇಶ್, ಡಾ.ಎನ್.ಸೋಮೇಶ್ವರ, ಡಾ.ಅನಿಲ್‌ಕುಮಾರ್, ಗಣೇಶ್ ಶಿವಶಂಕರ್, ಎಸ್. ಆರ್.ನಾಗರಾಜ, ಪದ್ಮರೇಖಾ, ಸಿ.ಕೆ.ಸತ್ಯಪ್ರಿಯ, ವಾಸುದೇವರಾವ್, ಡಾ.ನಾಗೇಶ್ ಮಳವಳ್ಳಿ, ಡಿ.ಸಿ.ಕೃಷ್ಣಮೂರ್ತಿ, ಪ್ರಕಾಶ್ ಅರಸ್, ಜಿ.ಎಸ್.ನಟರಾಜ್, ರವಿಕುಮಾರ್ ಕಾಶಿ, ಗುರುಪ್ರಸಾದ್(ಐಪಿಎಸ್), ಎಸ್.ಟಿ.ರಮೇಶ್, ಡಿ.ಬಾಲಕೃಷ್ಣ, ಎಂ.ಎಸ್.ಗೋವಿಂದಸ್ವಾಮಿ, ಪಿ.ಬಿ.ಮಹಿಷಿ, ರತ್ನಮಾಲಾ ಪ್ರಕಾಶ್, ಬಿ.ಡಿ.ಜತ್ತಿ, ಸಂತೋಷ್ ಕೌಲಗಿ, ಅರಬಿಂದ್ ಗಜಾನನ ರಿಸ್‌ಬುಡ್, ಎಸ್.ಹರೀಶ್, ಎಸ್. ಕಣ್ಣನ್, ಹೆಚ್.ಎನ್.ಶ್ರೀನಿಧಿ, ಟಿ.ಬಿ.ಜಯಚಂದ್ರ, ರಮೇಶ್ ಕುಮಾರ್ ಮುಂತಾದವರು). ಇದು ಒಂದು ಮುಖ ಮಾತ್ರ, ನನ್ನ ಪಾಠ ಕೇಳಿಸಿಕೊಂಡವರ ಪಾಡು ದುಃಸ್ಥಿತಿಯನ್ನು ತಲುಪಿದ್ದನ್ನೂ ಕಾಣುತ್ತಿದ್ದೇನೆ. ಕೆಲಸವಿಲ್ಲದೆ ಬೀದಿಬೀದಿ ಅಲೆಯುತ್ತಿರುವವರು, ಕೆಲವರು ಬುದ್ಧಿ ಭ್ರಮಣೆಯಾದವರಂತೆ ಬಡಬಡಿಸುತ್ತಾ ಓಡಾಡುವವರು, ಕಂಡರೂ ತಿರಸ್ಕಾರ ತೋರುವವರು, ಕಲಾಕಾರರಾಗಲು ಹೊರಟು ಭಿಕ್ಷೆ ಕೇಳುತ್ತಿರುವವರು, ಇವರಿಗೂ ನಾನೇ ಪಾಠ ಮಾಡಿದೆ. ಇವರ ಇಂದಿನ ಪಾಡಿಗೆ ನಾನೇ ಹೊಣೆ ಎಂದು ಬೇಜಾರುಪಡುತ್ತಲೂ ಇದ್ದೇನೆ. ಶ್ರೀಮಂತರು, ವಿದ್ಯಾವಂತರು, ಪ್ರಭಾವಶಾಲಿಗಳು ಮಾತ್ರ ನನ್ನ ಶಿಷ್ಯರು ಎಂದು ಹೇಗೆ ಹೇಳಿಕೊಳ್ಳಲಿ? ಏನನ್ನೂ ಸಾಧಿಸಲಾಗದಿದ್ದಕ್ಕೂ ನಾನೆ ಕಾರಣ ಎನ್ನುವ ಅಪರಾಧಿ ಮನೋಭಾವ ನನ್ನನ್ನು ಈಗಲೂ ಕಾಡುತ್ತದೆ. ೧೩ ರಿಂದ ೧೭ರ ವಯಸ್ಸಿನ ಬಾಲಕ ಬಾಲಕಿಯರು, ಬೆಳೆಯುವ ಪಯಿರು, ಅವರ ಸಹಜ ಚೇಷ್ಟೆಗಳನ್ನು ಸಹಿಸಿಕೊಂಡು, ಸುಮ್ಮನಿದ್ದಿದ್ದು ತಪ್ಪಾಯಿತೇ ಎಂದು ಆಗಾಗ ಚಿಂತಿಸುತ್ತೇನೆ. ಇಲ್ಲಿ ಒಂದು ಸಮಾಧಾನ ಕಂಡುಕೊಂಡಿದ್ದೇನೆ. ಕಡಿಮೆ ಅಂಕಗಳನ್ನು ಗಳಿಸಿದವರನ್ನಷ್ಟೇ ಅಲ್ಲದೆ ಹೆಚ್ಚು ಅಂಕಗಳನ್ನು ಪಡೆದು ಆಗಾಗ ಕ್ಲಾಸಿಗೆ ಚಕ್ಕರ್ ಹೊಡೆಯುವವರನ್ನು ಗಮನಿಸುತ್ತಿದ್ದೆ. ಅನುಮತಿಯಿಲ್ಲದೆ ಚಕ್ಕರ್ ಹೊಡೆದವರ ಮನೆಗಳಿಗೇ ಹೋಗಿ, ವಿಚಾರಿಸಿಕೊಂಡು ಬರುವ ಪರಿಪಾಠವೂ ನಮ್ಮಲ್ಲಿತ್ತು. ಇದರಿಂದ ನಮ್ಮ ಪಾಠಕ್ಕೆ, ವಿದ್ಯಾರ್ಥಿಗಳ ಪ್ರಗತಿಗೆ ಬಹಳ ಸಹಾಯವಾಗುತ್ತಿತ್ತು. ಹಿಗಾಗಿ ವಿದ್ಯಾರ್ಥಿಗಳು ಬೇಜವಾಬ್ದಾರಿಯಿಂದ ವರ್ತಿಸಲು ಕಡಿಮೆಯಾಗುತ್ತಿತ್ತು. ಇಂದಿನ Parent-teacher meeting ಗಳನ್ನು ನಾವು ರೂಢಿಗೆ ತಂದಿದ್ದೆವು.

ನನ್ನ ಪಾಠ ಸ್ಕೂಲು ಮುಗಿದ ಕೂಡಲೆ ಮುಗಿಯುತ್ತಿರಲಿಲ್ಲ. ಕೆಲವರು ತಮ್ಮ ಅನುಮಾನಗಳನ್ನು ಪರಿಹರಿಸಿಕೊಳ್ಳಲು, ಹೆಚ್ಚು ವಿವರಗಳನ್ನು ತಿಳಿದುಕೊಳ್ಳಲು ನನ್ನ ಜೊತೆಗೆ ಮನೆಯವರೆಗೂ ಬರುತ್ತಿದ್ದರು. ನಾನು ಸೈಕಲ್ಲನ್ನು ರಸ್ತೆಯಲ್ಲಿ

ತಳ್ಳಿಕೊಂಡೇ ನಡೆಯುತ್ತಿದ್ದೆ. ನಾಟಕದ ಪ್ರಾಕ್ಟೀಸು, ಬಹುಮಾನ ವಿತರಣೆ, ಅಂತರ ಶಾಲಾ ಸ್ಪರ್ಧೆಗಳು ಇದ್ದಾಗ ಕೆಲವರು ವಿದ್ಯಾರ್ಥಿಗಳು ನಮ್ಮ ಮನೆಯೊಳಕ್ಕೂ ಬರುತ್ತಿದ್ದರು. ಇವರ ಯೋಗಕ್ಷೇಮ, ತಿಂಡಿತೀರ್ಥಗಳ ಬಗ್ಗೆ ನನ್ನ ಪತ್ನಿಯೂ ಕಾಳಜಿವಹಿಸುತ್ತಿದ್ದುದರಿಂದ ವಿದ್ಯಾರ್ಥಿಗಳು ಅನೇಕ ವರ್ಷಗಳ ನಂತರವೂ ಹತ್ತಿರದವರಾಗಿಯೇ ಸ್ನೇಹಿತರಾಗಿ ಉಳಿದುಕೊಂಡಿದ್ದಾರೆ.

ಲೈಬ್ರರಿಗಳ ಸಂದರ್ಶನದಿಂದ ಪುಸ್ತಕದ ಹುಚ್ಚು ಹಿಡಿಸಿದ್ದೆ ಎನ್ನುವುದು, ಕೆಲವರಿಗೆ ನಾಟಕ ಮುಂತಾದ ಕಲೆಗಳ ಗೀಳು ಹತ್ತಿಸಿದ್ದೆ ಎನ್ನುವಷ್ಟೇ ನಿಜ. ಆದರೆ ಇವುಗಳಿಂದ ನಾನು ಎಂದೂ ಪಶ್ಚಾತ್ತಾಪ್ಪದಪಟ್ಟುಕೊಂಡಿಲ್ಲ. ಪುಸ್ತಕದ ಗೀಳು ಹತ್ತಿಸಿಕೊಂಡವರು ಇಂದು ಮೌಲ್ಯಯುಕ್ತ ಪುಸ್ತಕಗಳನ್ನು ಬರೆದಿದ್ದಾರೆ; ನಾಟಕ, ಸಂಗೀತದ ಅಭಿರುಚಿ ಬೆಳೆಸಿಕೊಂಡವರು ಜನಪ್ರಿಯ ಕಲಾಕಾರರಾಗಿದ್ದಾರೆ.

'An ordinary teacher teaches but a good teacher ispires' ಎನ್ನುವ ಹೇಳಿಕೆಯನ್ನು ನಂಬಿದವನು ನಾನು. ಪುಸ್ತಕಜ್ಞಾನ ಪರೀಕ್ಷೆಗಳಲ್ಲಿ ಪಾಸುಮಾಡಲು ಅಗತ್ಯ, ಆದರೆ ಶಿಕ್ಷಣದ ಮೂಲ ಉದ್ದೇಶ, ಉತ್ತಮ ನಾಗರಿಕರಾಗಿ ರೂಪುಗೊಳ್ಳುವುದು. 'Education is something that remains with you after you leave your school' ಎನ್ನುವಂತೆ ವಿದ್ಯಾರ್ಥಿಗಳಿಗೆ ಬದುಕಿನ ಪಾಠವನ್ನು ಕಲಿಸುವುದು ಶಿಕ್ಷಕ, ಶಿಕ್ಷಕಿಯರ ಕೆಲಸವೇ. ಹೀಗೆ ಮಾಡುವಾಗ ಆಸಕ್ತಿಯಿಲ್ಲದ ಕೆಲವರು ವಿದ್ಯಾರ್ಥಿಗಳಿಗೆ ಏನೆನ್ನಿಸುತ್ತೆ ಗೊತ್ತೇ? 'ಪಾಠವನ್ನು ಬಿಟ್ಟು ಏನೇನೋ ಹೇಳ್ತಾರೆ ಅಂತ'. ನನ್ನ ಪಾಠದ ಬಗ್ಗೆ ಇಂತಹ ವಿಮರ್ಶೆಗೇನೂ ಬರವಿಲ್ಲ. 'ಗೋವಿಂದನ ಪೂಜೆಯಲ್ಲಿ ಶಂಖ ಊದುವವನಿಗೆ ನಂಬಿಕೆಯಿರಬೇಕು', ಎನ್ನುವಂತೆ ನನ್ನ ಪಾಠದಲ್ಲಿ ನನಗೆ ಸಂಪೂರ್ಣ ನಂಬಿಕೆಯಿತ್ತು.

೩೫ ವರ್ಷಗಳಲ್ಲಿ ಸುಮಾರು ೧೦-೧೨ ಸಾವಿರ ವಿದ್ಯಾರ್ಥಿ/ನಿಯರಿಗೆ ನಾನು ಪಾಠ ಹೇಳಿರಬಹುದು. ಇವರಲ್ಲಿ ಕೆಲವರಿಗೆ ಬಡತನವಿದ್ದರೂ, ಸ್ವಾಭಿಮಾನಕ್ಕೇನೂ ಕೊರತೆಯಿರಲಿಲ್ಲ. ಸಮವಸ್ತ್ರ, ಪುಸ್ತಕ, ಫೀಜು ಮುಂತಾದ ವಿಷಯಗಳಲ್ಲಿ ನಾನೆ ಪತ್ತೇದಾರಿ ಕೆಲಸ ಮಾಡಿ, 'ಬಡತನ'ವನ್ನು ಪತ್ತೆಹಚ್ಚಿ, ಲಭ್ಯವಿದ್ದ ಸ್ಕಾಲರ್‌ಶಿಪ್, ಸಹಾಯವನ್ನು ಒದಗಿಸಬೇಕಾಗಿತ್ತು. ಇಂತಹ ಪ್ರತಿಕೂಲ ಪರಿಸ್ಥಿತಿಯಿಂದ ಮೇಲೆದ್ದು ಬಂದವರ ಸುಧಾರಿಸಿರುವುದರಿಂದ ನನ್ನ ಕೆಲಸ ನನಗೆ ಹೆಮ್ಮೆ ತಂದಿದೆ. ಎಲ್ಲಿಗೆ ಹೋದರೂ 'ಸಾರ್, ನಿಮ್ಮ ಶಿಷ್ಯ ಆಗಿದ್ದೆ' ಎಂಬ ಮಾತು ಕೇಳಿಸುತ್ತದೆ. ಆಗ ನನ್ನ ಬದುಕು ಸಾರ್ಥಕವಾಯಿತು ಅನ್ನಿಸುತ್ತದೆ.

ಪಾಠ ಹೇಳುವ ದಿನಗಳಲ್ಲಿ ನಾನು ಎಂದೂ ವಿದ್ಯಾರ್ಥಿಗಳನ್ನು ಅವರ ಪಾಡಿಗೆ ಇರಲು ಬಿಡುತ್ತಿರಲಿಲ್ಲ. ಇದರಿಂದ ಅವರು ಪಟ್ಟ ಪಾಡನ್ನು ಕುರಿತು ಅವರೇ ಹೇಳಬೇಕಷ್ಟೆ. ಆದರೆ ಒಂದು ವಿಷಯವಂತೂ ಸತ್ಯ. ನನ್ನಿಂದ ನನ್ನ ಶಿಷ್ಯರು ಎಷ್ಟು ಕಲಿತರೋ, ನಾನು ಅದರ ಅರ್ಧದಷ್ಟಾದರೂ ಅವರಿಂದ ಕಲಿತಿದ್ದೇನೆ. ಅವರು ಬೆಳೆದ ಹಾಗೆಯೇ, ನಾನೂ ಬೆಳೆದೆ. ಹ್ಯಾಟ್ಸ್ ಆಫ್ ಟು ಮೈ ಶಿಷ್ಯಾಸ್ !

* * *

ಜನಪದ ಧ್ವನಿ

ರಾಜಕಾರಿಣಿಗಳು ಪಕ್ಷದಿಂದ ಪಕ್ಷಕ್ಕೆ ಕಪ್ಪೆಗಳಂತೆ ಹಾರಿದರು. ಚುನಾವಣೆ ಪ್ರಚಾರದ ನೆಪದಲ್ಲಿ ತಮ್ಮ ಹೊಟ್ಟೆಯಲ್ಲಿದ್ದ ಕಲ್ಮಶಗಳೆಲ್ಲವನ್ನು ವಾಂತಿ ಮಾಡಿದರು. ಚುನಾವಣಾ ಆಯೋಗ ಗೋಪಾಲ ಸ್ವಾಮಿಯವರ ನೇತೃತ್ವದಲ್ಲಿ ತನ್ನ ಚಾವಟಿಯ ರುಚಿಯನ್ನು ಎಲ್ಲ ಪಕ್ಷಗಳಿಗೂ ಮುಟ್ಟಿಸಿತು. ಚುನಾವಣಾ ಆಯೋಗ ನಿಷ್ಪಕ್ಷಪಾತವಾಗಿ, ನಿರ್ದಾಕ್ಷಿಣ್ಯವಾಗಿ ತನ್ನ ಅಧಿಕಾರ ಚಲಾಯಿಸಿದ್ದು ಶುಭ ಸೂಚನೆ ಮತ್ತು ಇದು ತುಂಬ ಒಳ್ಳೆಯ ಬೆಳವಣಿಗೆ, ಚುನಾವಣಾ ಆಯೋಗ ನ್ಯಾಯಾಂಗದಷ್ಟೆ ಪವಿತ್ರವಾದದ್ದು, ಶಕ್ತಿಶಾಲಿಯಾದದ್ದು ಎಂದು ಸಾಬೀತು ಮಾಡಿದೆ.

ಚುನಾವಣೆಯ ದಿನ ಸಾರ್ವತ್ರಿಕ ರಜಾ ಆಗಿ ಮಾಧ್ಯಮಗಳ ಮೂಲಕ, ಜಾಹೀರಾತುಗಳ ಮೂಲಕ ಪಾದಯಾತ್ರೆಗಳ ಮೂಲಕ ಅಬ್ಬರದ ಪ್ರಚಾರ ಮಾಡಿದರೂ ಮತದಾನ ಶೇಕಡ ೫೦ರಿಂದ ೬೦ ರವರೆಗೆ ಮಾತ್ರ ನಡೆಯಿತು. ಮತದಾರನ ಈ ನಿರಾಸಕ್ತಿಗೆ ಮುಖ್ಯ ಕಾರಣ ಅಭ್ಯರ್ಥಿಗಳು ನೀಡುವ ಭರವಸೆಗಳು, ಆಶ್ವಾಸನೆಗಳು ಯಾವುದೂ ಈಡೇರುವುದಿಲ್ಲ ಎಂಬುದು. ಯಾರೇ ಅಧಿಕಾರಕ್ಕೆ ಬಂದರೂ ತನ್ನ ಸ್ಥಿತಿ ಉತ್ತಮಗೊಳ್ಳುವುದಿಲ್ಲ. ಎಲ್ಲ ರಾಜಕಾರಣಿಗಳೂ ಸ್ವಹಿತ ಸಾಧಿಸಿಕೊಳ್ಳುತ್ತಾ ಚುನಾವಣೆಗೆ ಖರ್ಚು ಮಾಡಿದ ಹಣವನ್ನು ಬಡ್ಡಿ, ಚಕ್ರಬಡ್ಡಿ ಸಮೇತ ಪಡೆದುಕೊಳ್ಳುವುದರಲ್ಲಿ ನಿರತರಾಗುತ್ತಾರೆ. ಅವರು ನೀಡಿದ ಭರವಸೆಗಳು ಆಶ್ವಾಸನೆಗಳು ಎಲ್ಲ ಗಾಳಿಯಲ್ಲಿ ತೂರಿ ಹೋಗುತ್ತವೆ.

ಎಲ್ಲಾದರೂ ಒಂದು ತುಂಡು ಬಟ್ಟೆ ಅಥವಾ ಒಂದು ಸಣ್ಣ ಉಡುಗೊರೆ ಕೊಡುವುದಾಗಿ ತಿಳಿದರೆ ಯಾವುದೇ ಪ್ರಚಾರವಿಲ್ಲದಿದ್ದರೂ ಸಾವಿರಾರು ಜನ ಸೇರಿ ಅಲ್ಲಿ ಸಿಗುವ ಸಣ್ಣ ಪದಾರ್ಥಕ್ಕೆ ಲಾಠಿ ಏಟು ಕೊನೆಗೆ ಗುಂಡಿನೇಟಿಗೆ ಗುರಿಯಾಗುವುದನ್ನು ನೋಡಿರುತ್ತೇವೆ.

ಪ್ರಜಾಪ್ರಭುತ್ವ ಭದ್ರವಾಗಬೇಕಾದರೆ ಮತದಾರ ಯಾವಾಗಲೂ ಪ್ರಭುವಾಗಿರಬೇಕು. ಎಚ್ಚರದಿಂದ ಇರಬೇಕು. ದುರ್ದೈವದ ಸಂಗತಿಯೆಂದರೆ ಮತದಾರ ಮತ ಚಲಾಯಿಸಿದ ನಂತರ ಸಂಪೂರ್ಣ ನಿಷ್ಕ್ರಿಯನಾಗುತ್ತಾನೆ. ತಾನು ಚುನಾಯಿಸಿದವರನ್ನು ರಟ್ಟೆ ಹಿಡಿದು ಕರೆತರುತ್ತಾರೆ.

– ವೆಂಕಟರಮಣಶೆಟ್ಟಿ. ಎ.

ಗಾಂಧೀ ಮತ್ತು ಪರಿಸರ ಪ್ರಜ್ಞೆ

– ಜಿ.ಬಾಲಕೃಷ್ಣ

ಇಂದು ಮಾನವ ವೈಜ್ಞಾನಿಕ ಸಾಧನೆಯ ಉತ್ತುಂಗದಲ್ಲಿದ್ದಾನೆ. ಅವನ ಮನೋ ಆದೇಶಕ್ಕೆ ತಲೆಬಾಗಿ, ಎದುರುತ್ತರ ಹೇಳದೆ ಕೆಲಸ ಮಾಡುವ ಯಂತ್ರಗಳು ಸಾಲುಸಾಲಾಗಿ ನಿಂತಿವೆ. ಕೇವಲ ಐವತ್ತು ವರ್ಷಗಳ ಹಿಂದೆ ಊಹಿಸಲೂ ಸಾಧ್ಯವಾಗದಷ್ಟು 'ಪ್ರಗತಿ' ವಿಜ್ಞಾನರಂಗದಲ್ಲಾಗಿದೆ. ಆದರೆ ಇಂದಿನ ಆಧುನಿಕತೆಯ ವೆಚ್ಚ ಅತಿ ದುಬಾರಿಯಾದುದು. 'ಪ್ರಗತಿ' ಮತ್ತು 'ಆಧುನಿಕತೆ'ಯನ್ನು ಸಾಧಿಸುವ ಭರದಲ್ಲಿ ಪರಿಸರ ಅಥವಾ ಪ್ರಕೃತಿಯನ್ನು ಮಾನವ ಸಂಪೂರ್ಣ ಕಡೆಗಣಿಸಿದುದರ ಪರಿಣಾಮವಾಗಿ ಇಂದು ಪರಿಸರ ಸಂರಕ್ಷಣೆ ಅತ್ಯಂತ ದೊಡ್ಡ ಸವಾಲು ಹಾಗೂ ಸಮಸ್ಯೆಯಾಗಿದೆ. ಭೂಮಿಯ ಮೇಲಿನ ಎಲ್ಲ ಪ್ರಾಣಿಗಳಿಗಿಂತ ಮಾನವ ಅತ್ಯಂತ ಅಪಾಯಕಾರಿಯಾದ ಪ್ರಾಣಿಯಾಗಿದ್ದಾನೆ. ವಿಜ್ಞಾನಿಗಳು ಹೇಳುವಂತೆ ಭೂಮಿಯ ಚರಿತ್ರೆಯಲ್ಲಿ ಇದುವರೆಗೆ ಆರು ಸಾರಿ ಭೂಮಿಯ ಜೀವಸಂಕುಲಗಳು ನಿರ್ನಾಮವಾದ ಘಟನೆಗಳು ಸಂಭವಿಸಿವೆ. ಆ ಆರೂ ಸಾರಿಯೂ ಜೀವ ಮತ್ತೆ ಪುಟಿದೆದ್ದಿದೆ. ಆದರೆ ಇನ್ನು ಮುಂದೆ ಮಾನವನ ದುರಾಸೆ, ಅಜಾಗರೂಕತೆ ಯಿಂದ ನಡೆಯಬಹುದಾದ ದುರಂತಗಳಿಂದಾಗುವ ಜೀವಸಂಕುಲ ವಿನಾಶದಿಂದ ಬಹುಶಃ ಮತ್ತೆ ಚೇತರಿಸಿಕೊಳ್ಳುವುದು ದುಸ್ಸಾಧ್ಯವಾಗುತ್ತದೆ.

ಪರಿಸರ ಸಂರಕ್ಷಣೆಯ ಹಾದಿಯನ್ನು ಅರಸುತ್ತಾ ಹೊರಟಲ್ಲಿ ನಾವು ನಮಗರಿವಿಲ್ಲದಂತೆ ಮಹಾತ್ಮ ಗಾಂಧಿಯ ಹೆಜ್ಜೆಗಳನ್ನೇ ಅನುಸರಿಸತೊಡಗುತ್ತೇವೆ. ಪರಿಸರ ಕ್ಷೇತ್ರದಲ್ಲಿ ಹಿಂದೆಂದಿಗಿಂತ ಈಗ ಗಾಂಧಿ ಹೆಚ್ಚು ಪ್ರಸ್ತುತರಾಗುತ್ತಿದ್ದಾರೆ. ಗಾಂಧಿ ಇಂದಿನ ನಮ್ಮ ಎಲ್ಲ ಆಧುನಿಕತೆಯ ಸಮಸ್ಯೆಗಳಿಗೂ ಪರಿಹಾರ ದೊರಕಿಸಿಕೊಡಬಲ್ಲವರಾಗಿದ್ದಾರೆ. ಈಗಿನ ಮನುಷ್ಯ ಎದುರಿಸುತ್ತಿರುವ ಪರಿಸರ ಸಮಸ್ಯೆಗಳು ಗಾಂಧಿಯ ಸಮಯದಲ್ಲಿ ಇರಲಿಲ್ಲ ಹಾಗೂ ಈ ಸಮಸ್ಯೆಗಳು ಇಷ್ಟು ಬೃಹದಾಕಾರವಾಗಿ ಬೆಳೆಯುತ್ತವೆಂದು ಯಾರೂ ಊಹಿಸಿರಲಿಲ್ಲ. ಆದರೆ ಆಗಲೇ ಅವನ್ನೆಲ್ಲ ಕಂಡ ಮಹಾನ್ ದಾರ್ಶನಿಕ ಆತ. ಆತನ ಬದುಕು ಮತ್ತು ಆಚರಣೆಗಳೇ ನಮಗಿಂದು ದಾರಿದೀಪಗಳಾಗಿವೆ. ಗಾಂಧಿಗೆ ನೈತಿಕ ಬಲದ ಸಾಮರ್ಥ್ಯವಿತ್ತು. ಏಕೆಂದರೆ ಅವರು ಬೋಧಿಸುತ್ತಿದ್ದುದನ್ನು ಅವರೇ ಆಚರಿಸುತ್ತಿದ್ದರು. ಅಹಿಂಸೆ ಮತ್ತು ಅಸಹಕಾರ ಮನೋಭಾವವೆಂಬ ತೀರಾ ವೈಯಕ್ತಿಕ ನೈತಿಕತೆಯನ್ನು ಒಂದು ಬಲಿಷ್ಠ ಸಾಮಾಜಿಕ ಹಾಗೂ ರಾಜಕೀಯ ಶಕ್ತಿಯನ್ನಾಗಿ ರೂಪಿಸಿದರು. ಅವರ ಹೋರಾಟ ಸತ್ಯದ ಆಧಾರವಾಗಿತ್ತು, ಅದಕ್ಕೇ ಅದನ್ನು ಸತ್ಯಾಗ್ರಹವೆಂದು ಕರೆದರು.

ಗಾಂಧಿ ಹೊರದೇಶದಲ್ಲಿ ಉನ್ನತ ಶಿಕ್ಷಣ ಪಡೆದವರಾದ್ದರಿಂದ ಅವರಿಗೆ ಪಾಶ್ಚಿಮಾತ್ಯ ಸಂಸ್ಕೃತಿಯ ಅರಿವಿತ್ತು. ಅವರು ೧೯೦೯ರಲ್ಲೇ ತಮ್ಮ 'ಹಿಂದ್'

ಸ್ವರಾಜ್'ನಲ್ಲಿ ಭಾರತಕ್ಕೆ ಪಾಶ್ಚಿಮಾತ್ಯ ನಾಗರಿಕತೆಯನ್ನು ಬರಮಾಡಿಕೊಳ್ಳುವುದೆಂದರೆ 'ಭಸ್ಮಾಸುರ'ನನ್ನು ಆಹ್ವಾನಿಸಿದಂತೆ ಎಂದು ಹೇಳಿದ್ದರು. 'ಪಾಶ್ಚಿಮಾತ್ಯ ನಾಗರಿಕತೆ 'ಕೊಳ್ಳುಬಾಕ' ಸಂಸ್ಕೃತಿಯದಾಗಿದ್ದು ಅದನ್ನೇ ಅಭಿವೃದ್ಧಿ ಎಂದುಕೊಂಡಿದೆ. ಪದಶಃ ಅರ್ಥದಲ್ಲಿ ಅದು ನಾಗರಿಕತೆಯೇ ಅಲ್ಲ' ಎಂದಿದ್ದರು. ಕೈಗಾರಿಕಾ ಸಮಾಜವೊಂದರ ಮೊಟ್ಟಮೊದಲ ಪರಿಕಲ್ಪನೆಯೆಂದರೆ ಸಂಪನ್ಮೂಲಗಳು ಅಸೀಮಿತವಾಗಿವೆ ಎನ್ನುವುದು. 'ಇಂಗ್ಲೆಂಡ್‌ನಂತೆ ನಮ್ಮ ದೇಶವೂ ಅಭಿವೃದ್ಧಿಯಾಗುವುದು ಯಾವಾಗ?' ಎಂದು ಒಬ್ಬರು ಕೇಳಿದ್ದಕ್ಕೆ, 'ಇಂಗ್ಲೆಂಡ್‌ನ ಅಭಿವೃದ್ಧಿಗೆ ಭೂಮಿಯ ಅರ್ಧ ಸಂಪನ್ಮೂಲಗಳೇ ಬರಿದಾಗಿವೆ. ಭಾರತ ಆ ರೀತಿ ಆಗಬೇಕಾದಲ್ಲಿ ಭೂಮಿಯಂತಹ ಇನ್ನೆಷ್ಟು ಗ್ರಹಗಳು ಬರಿದಾಗಬೇಕೋ' ಎಂದಿದ್ದರು. ಬ್ರಿಟಿಶ್ ಆಳ್ವಿಕೆಯಲ್ಲಿ ಭಾರತದ ಸಂಪನ್ಮೂಲಗಳನ್ನು ದೋಚಿ ಬ್ರಿಟನ್‌ನ ಮಿಲ್ಲು ಮತ್ತು ಕೈಗಾರಿಕೆಗಳಿಗೆ ಸರಬರಾಜು ಮಾಡಲಾಗುತ್ತಿತ್ತು. "ಅಂತಹ ಅಭಿವೃದ್ಧಿ ಬೇಡವೇ ಬೇಡ. ಮನುಷ್ಯನ ಆಸೆಗೆ ಕೊನೆಯೇ ಇಲ್ಲ. ತನ್ನ ದುರಾಸೆಯನ್ನು ತೃಪ್ತಿಪಡಿಸಿಕೊಳ್ಳಲು ಪಶ್ಚಿಮದ ನಾಗರಿಕತೆ ಪ್ರಕೃತಿಯ ಮೇಲೆ ಮೇಲುಗೈ ಸಾಧಿಸಲು ಯತ್ನಿಸುತ್ತಿದೆ" ಎಂದಿದ್ದರು ಗಾಂಧಿ. 'ಪ್ರತಿಯೊಬ್ಬನ ಅವಶ್ಯಕತೆ ಈಡೇರಿಸುವಷ್ಟು ಭೂಮಿಯಲ್ಲಿದೆ, ಆದರೆ ದುರಾಸೆಯ ಈಡೇರಿಕೆಯಷ್ಟಲ್ಲ' ಎಂಬ ಗಾಂಧಿಯ ಮಾತು ಈಗಷ್ಟೇ ಪ್ರಸ್ತುತವಲ್ಲ ಇನ್ನು ಸಾವಿರ ವರ್ಷ ಕಳೆದರೂ ಅಪ್ರಸ್ತುತವಾಗಲಾರದು. ಗಾಂಧಿ ಮನುಷ್ಯನ ಅವಶ್ಯಕತೆ ಮತ್ತು ಬೇಡಿಕೆಗಳನ್ನು ಪ್ರತ್ಯೇಕವಾಗಿ ನೋಡುತ್ತಿದ್ದರು. ಭೂಮಿಯ ಸಂಪನ್ಮೂಲಗಳು ಈಗಿನವರಿಗೆ ಮಾತ್ರವಲ್ಲ, ಅದರ ಅವಶ್ಯಕತೆ ಇರುವ ಮುಂದಿನ ಪೀಳಿಗೆಯನ್ನೂ ಗಮನದಲ್ಲಿರಿಸಿ ಕೊಳ್ಳಬೇಕೆನ್ನುತ್ತಿದ್ದರು. ಮಾನವರು ದುರಾಸೆಯ ಗುಲಾಮರಾಗಬಾರದೆಂದು ಅವರು ಸದಾ ಹೇಳುತ್ತಿದ್ದರು.

ಗಾಂಧೀಜಿ ಪರಿಸರ ಹಾಳಾಗುತ್ತಿರುವುದರ ಬಗ್ಗೆ ನಿರ್ದಿಷ್ಟವಾಗಿ ಏನನ್ನೂ ಹೇಳಿಲ್ಲ. ಪರಿಸರದ ಬಗೆಗಿನ ಗಾಂಧಿಯ ಮಾತುಗಳಿಗಿಂತ ಅವರ ಆಚರಣೆಯೇ ಮುಖ್ಯವಾದುದು. ಒಮ್ಮೆ ಅವರನ್ನು ಜನರಿಗೆ ನಿಮ್ಮ ಸಂದೇಶ ಏನೆಂದು ಕೇಳಿದಾಗ 'ನನ್ನ ಬದುಕೇ ಒಂದು ಸಂದೇಶ' ಎಂದು ಹೇಳಿದ್ದರು. ಆ ಸಂದೇಶದಲ್ಲಿಯೇ ಪ್ರತಿಯೊಬ್ಬ ಮನುಷ್ಯ ಅವನ ಎಂಥಹುದೇ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಬಹುದು. ಅವರು ಮನೆ ಮತ್ತು ಸುತ್ತಮುತ್ತಲ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳುವಂತೆ ಹೇಳುತ್ತಿದ್ದರು. ಅವರ ಆಶ್ರಮಕ್ಕೆ ಪ್ರವೇಶ ಬಯಸುವವರಿಗೆ ಅವರು ಮೊದಲು ಕೇಳುತ್ತಿದ್ದ ಮೊದಲ ಪ್ರಶ್ನೆ, 'ನಿನ್ನ ಪಾಯಖಾನೆಯನ್ನು ನೀನೇ ಸ್ವಚ್ಛಗೊಳಿಸಿಕೊಳ್ಳಬಲ್ಲೆಯಾ?' ಅವರು ಸಬರಮತಿ ಆಶ್ರಮದ ಬಳಿಯ ನದಿಯಲ್ಲಿ ಸ್ನಾನ ಮಾಡುವಾಗ ಅವರು ಎಷ್ಟು ಬೇಕೋ ಅಷ್ಟೇ ನೀರನ್ನೇ ಬಳಸುತ್ತಿದ್ದರು. ನದಿಯಲ್ಲಿ ನೀರು ಉಕ್ಕಿ ಹರಿಯುತ್ತಿದ್ದರೂ ಅವರು ಅದನ್ನು ಅನವಶ್ಯಕವಾಗಿ ಬಳಸುತ್ತಿರಲಿಲ್ಲ. 'ನದಿಯಲ್ಲಿ ಅಷ್ಟು ನೀರಿದ್ದರೂ ಅದನ್ನು ಬೇಕಾದಷ್ಟು ಬಳಸಲು ಏಕೆ ಹಿಂಜರಿಯುತ್ತಿರುವಿರಿ?' ಎಂದು ಒಮ್ಮೆ ಕೇಳಿದಾಗ, 'ನದಿಯಲ್ಲಿ ಹರಿಯುತ್ತಿರುವ ನೀರೆಲ್ಲಾ ನನ್ನದಲ್ಲವಲ್ಲಾ' ಎಂದಿದ್ದರು. ಅವರಿದ್ದ ಸಮಯದಲ್ಲಿ ಕಾಗದಕ್ಕಾಗಿ ಕಾಡುಗಳನ್ನು ಕಡಿಯುವುದು ಸಮಸ್ಯೆಯೇ ಆಗಿರಲಿಲ್ಲ. ಆದರೂ ಅವರಿಗೆ

ಯಾರಾದರೂ ಪತ್ರ ಬರೆದಲ್ಲಿ ಬೇರೆ ಕಾಗದ ಬಳಸದೇ ಆ ಪತ್ರದ ಹಿಂದೆಯೇ ಬರೆದು ಉತ್ತರಿಸುತ್ತಿದ್ದರು. ಲಕೋಟೆಗಳನ್ನು ಕತ್ತರಿಸಿ ಅದರ ಹಿಂದಿನ ಖಾಲಿ ಸ್ಥಳದಲ್ಲಿ ಟಿಪ್ಪಣಿ ಮಾಡಿಕೊಳ್ಳುತ್ತಿದ್ದರು. ಹಲವಾರು ಅವರ ಅನುಯಾಯಿಗಳನ್ನು ಅದನ್ನು ಅನುಸರಿಸುವಂತೆ ಮಾಡಿದರು.

ಅವರ ಅಹಿಂಸಾಚರಣೆ ಜೀವಿಗಳಿಗೆ ಮಾತ್ರ ಅನ್ವಯಿಸುವಂಥದಲ್ಲ. ಪ್ರಕೃತಿಯಲ್ಲಿನ ನಿರ್ಜೀವ ವಸ್ತುಗಳ ಮೇಲಿನ ದಬ್ಬಾಳಿಕೆಯೂ ಅವರ ದೃಷ್ಟಿಯಲ್ಲಿ ಹಿಂಸೆಯೇ ಆಗಿತ್ತು. ಪ್ರಕೃತಿಯನ್ನು ಧನ್ಯತಾ ಭಾವದಿಂದ ನೋಡಬೇಕೆನ್ನುವುದೇ ಅವರ ಉದ್ದೇಶವಾಗಿತ್ತು. ಹೇಗೆ ಮನುಷ್ಯನಿಗೆ ಜೀವವನ್ನು ಸೃಷ್ಟಿಸುವ ಶಕ್ತಿ ಇಲ್ಲವೋ, ಅದೇ ರೀತಿ ಅವನಿಗೆ ಜೀವವನ್ನು ನಾಶಮಾಡುವ ಹಕ್ಕೂ ಇಲ್ಲವೆನ್ನುವುದು ಅವರ ಅಭಿಪ್ರಾಯವಾಗಿತ್ತು. ಅವರ ಸೇವಾಗ್ರಾಮ ಆಶ್ರಮದಲ್ಲಿ ದೊಡ್ಡ ಮರದ ಇಕ್ಕಳಗಳಿದ್ದು ಆಶ್ರಮದೊಳಗೆ ಬರುವ ಹಾವುಗಳನ್ನು ಕೊಲ್ಲದೆ ಹಿಡಿದು ದೂರ ಬಿಟ್ಟುಬಿಡಲಾಗುತ್ತಿತ್ತು. ಒಮ್ಮೆ ಬ್ರಿಟಿಷ್ ಲೇಖಕ ಹಾಗೂ ಗೆಳೆಯ ಎಡ್ವರ್ಡ್ ಥಾಂಪ್ಸನ್ ಗಾಂಧಿಯವರ ಜೊತೆ ಮಾತನಾಡುತ್ತ 'ಭಾರತದಲ್ಲಿ ಕಾಡುಪ್ರಾಣಿಗಳು ಕಡಿಮೆಯಾಗುತ್ತಿವೆ' ಎಂದು ಆತಂಕ ವ್ಯಕ್ತಪಡಿಸಿದರಂತೆ. ಅದಕ್ಕೆ ಗಾಂಧೀಜಿ ಒಂದರೆಕ್ಷಣ ಯೋಚಿಸಿ, 'ಹೌದು ಕಾಡುಗಳಲ್ಲಿ ಕಡಿಮೆಯಾಗುತ್ತಿವೆ, ಆದರೆ ನಗರಗಳಲ್ಲಿ ಹೆಚ್ಚಾಗುತ್ತಿವೆ' ಎಂದರಂತೆ.

ಪರಿಸರಸ್ನೇಹಿ ಸುಸ್ಥಿರ ಅಭಿವೃದ್ಧಿ ಎಂದರೆ ಮುಂದಿನ ಪೀಳಿಗೆಯವರ ಅವಶ್ಯಕತೆಗಳ ಪೂರೈಕೆಗೆ ಯಾವುದೇ ತೊಂದರೆಯಾಗದಂತೆ ಇಂದಿನವರ ಅವಶ್ಯಕತೆಗಳನ್ನು ಪೂರೈಸುವುದು. ಅಭಿವೃದ್ಧಿ ಅಥವಾ ಪರಿಸರದ ಬಗೆಗಿನ ಗಾಂಧಿಯ ಆಲೋಚನೆಗಳನ್ನು ಆಧುನಿಕ ಮಾತುಗಳಲ್ಲಿ ಹೇಳುವುದಾದರೆ, ಅಭಿವೃದ್ಧಿಗಾಗಿ ನವೀಕರಣಗೊಳಿಸಬಹುದಾದ ಸಂಪನ್ಮೂಲಗಳ ಬಳಕೆ ಮತ್ತು ನವೀಕರಣ ಸಾಧ್ಯವಿಲ್ಲದ ಸಂಪನ್ಮೂಲಗಳ ಕನಿಷ್ಠ ಬಳಕೆ. ಗಾಂಧಿಯ ಈ ಆಲೋಚನೆ ಪರಿಸರ ಸಂರಕ್ಷಣೆಯ ಬಗೆಗೆ ಅಲ್ಲದೆ ಪರಿಸರದ ಬಗೆಗಿನ ಧನ್ಯತಾ ಭಾವನೆಯಿಂದಲೇ ಆಗಿದ್ದರೂ ಅದು ಪರಿಸರ ಸಂರಕ್ಷಣೆಯ ಆಲೋಚನೆಯೇ ಆಗಿದೆ. ಗಾಂಧಿ ಪರಿಸರದ ಬಗೆಗೆ ಒಮ್ಮೆ ಹೀಗೆ ಹೇಳಿದ್ದರು, 'ನನಗೆ ಪ್ರಕೃತಿಯದಲ್ಲದೆ ಮತ್ತಾವುದರ ಸ್ಫೂರ್ತಿಯೂ ಬೇಡ. ಆಕೆ ನನ್ನನ್ನೆಂದೂ ನಿರಾಶಳನ್ನಾಗಿಸಿಲ್ಲ. ಆಕೆಯಲ್ಲಿ ಎಂಥದೋ ನಿಗೂಢತೆಯಿದೆ, ಅಚ್ಚರಿಯಿದೆ, ಆನಂದ ಪರವಶತೆಗೆ ಕರೆದೊಯ್ಯುವ ಸಾಮರ್ಥ್ಯವಿದೆ. ಅದರ ಮುಂದೆ ಮಾನವ ಎಷ್ಟು ಗೌಣನಲ್ಲವೆ? ಸುಂದರ ತಾರೆಗಳ ಕತ್ತಲ ಆಗಸವನ್ನು ನೋಡುತ್ತಾ ದಣಿಯದೆ ಅದೆಷ್ಟು ಸಾರಿ ಮೈಮರೆತಿಲ್ಲ! ನನ್ನ ದೃಯಲ್ಲಿ ಕಲೆ ಅತ್ಯುತ್ತಮವಾಗಬೇಕಾದರೆ ಅದೂ ಸಹ ಪ್ರಕೃತಿಯ ಸೌಂದರ್ಯದಂತೆ ಸಾರ್ವತ್ರಿಕವಾಗಿರಬೇಕು, ನಿರೂಪಣೆಯಲ್ಲಿ ಸರಳವಾಗಿರಬೇಕು ಹಾಗೂ ಅಭಿವ್ಯಕ್ತಿಯಲ್ಲಿ ನೇರವಾಗಿರಬೇಕು ಪ್ರಕೃತಿಯ ಭಾಷೆಯಂತೆ........ನಾನು ಸೂರ್ಯಾಸ್ತದ ಅದ್ಭುತವನ್ನು ಅಥವಾ ಚಂದಿರನ ಸೌಂದರ್ಯವನ್ನು ಮೆಚ್ಚಿದಲ್ಲಿ, ನನ್ನ ಆತ್ಮ ಸೃಷ್ಟಿಕರ್ತನ ಆರಾಧನೆಯಲ್ಲಿ ಮೈಮರೆಯುತ್ತದೆ'.

ಗಾಂಧಿಯ ಅರ್ಥಶಾಸ್ತ್ರದಲ್ಲಿ ಅನವಶ್ಯಕ ಬೇಡಿಕೆಗಳಿಗೆ ಆಸ್ಪದವಿಲ್ಲ, ಸರಳ ಜೀವನವೇ ಎಲ್ಲ ಆಧುನಿಕತೆಯ ಮೂಲದ ಸಮಸ್ಯೆಗಳಿಗೆ ಪರಿಹಾರ. ಸರಳ

ಜೀವನದಿಂದಲೇ ಪ್ರಕೃತಿಯ ಸೀಮಿತ ಸಂಪನ್ಮೂಲಗಳ ಸಂರಕ್ಷಣೆಯೂ ಸಾಧ್ಯ. ನಾವು ಏನನ್ನು ಪ್ರಕೃತಿಯಿಂದ ಪಡೆಯುತ್ತೇವೆಯೋ ಅದನ್ನು ಮರಳಿಸುವಂತಿರಬೇಕು. 'ನಾವು ಪ್ರಕೃತಿಯ ವರದಾನವನ್ನು ನಮ್ಮ ಮನಸೋ ಇಚ್ಛೆ ಉಪಯೋಗಿಸಬಹುದು, ಆದರೆ ಆಕೆಯ ಪುಸ್ತಕದಲ್ಲಿ ವ್ಯಯ ಮತ್ತು ಆದಾಯದ ಲೆಕ್ಕಗಳು ಸಮವಾಗಲೇಬೇಕು' ಎನ್ನುತ್ತಿದ್ದರು. ಭಾರತದ ಅಭಿವೃದ್ಧಿಯ ಕನಸನ್ನು ಗಾಂಧಿ ಮತ್ತು ನೆಹರು ಇಬ್ಬರೂ ಹೊಂದಿದ್ದರು. ಆದರೆ ಅದರ ಸಾಕಾರದ ಹಾದಿಯಲ್ಲಿ ಅಜಗಜಾಂತರ ವ್ಯತ್ಯಾಸವಿತ್ತು. ೧೯೪೫ರಲ್ಲಿ ಗಾಂಧಿಯವರು ನೆಹರೂಗೆ ಬರೆದ ಪತ್ರವೊಂದರಲ್ಲಿ, '..ಭಾರತವು ನಿಜವಾದ ಸ್ವಾತಂತ್ರ್ಯವನ್ನು ಮತ್ತು ಆ ಮೂಲಕ ಇಡೀ ಜಗತ್ತು ಸ್ವಾತಂತ್ರ್ಯವನ್ನು ಗಳಿಸಬೇಕಾದರೆ, ಜನರೆಲ್ಲ ಇಂದಲ್ಲ ನಾಳೆ ಗ್ರಾಮಗಳಲ್ಲಿ ಬದುಕಬೇಕಲ್ಲದೆ ಪಟ್ಟಣಗಳಲ್ಲ; ಗುಡಿಸಲುಗಳಲ್ಲದೆ ಅರಮನೆಗಳಲ್ಲಲ್ಲ ಎಂಬ ಸತ್ಯವನ್ನು ಮನಗಾಣಬೇಕು. ಇದರಲ್ಲಿ ನನಗೆ ಸಂಪೂರ್ಣವಾದ ವಿಶ್ವಾಸವಿದೆ. ಪಟ್ಟಣ ಮತ್ತು ಅರಮನೆಗಳಲ್ಲಿ ಕೋಟ್ಯಂತರ ಜನರು ಸಹಬಾಳ್ವೆ, ನೆಮ್ಮದಿಯಿಂದ ಬದುಕಲಾರರು. ಅಲ್ಲಿ ಹಿಂಸೆ ಮತ್ತು ಅಸತ್ಯದ ಆಚರಣೆ ಬಿಟ್ಟರೆ ಅವರಿಗೆ ಅನ್ಯಮಾರ್ಗವಿಲ್ಲ. ಸತ್ಯ ಮತ್ತು ಅಹಿಂಸೆಗಳಿಲ್ಲದಿದ್ದರೆ ಮನುಕುಲದ ವಿನಾಶ ಖಂಡಿತ. ಗ್ರಾಮೀಣ ಬದುಕಿನ ಸರಳತೆಯಲ್ಲಿ ಸತ್ಯ ಮತ್ತು ಅಹಿಂಸೆಗಳ ಸಾಕ್ಷಾತ್ಕಾರ ಸಾಧ್ಯ. ಅಂಥ ಸರಳತೆಯನ್ನು ಚರಕ ಮತ್ತು ಅದು ಪ್ರತಿನಿಧಿಸುವ ಎಲ್ಲ ಅಂಶಗಳಲ್ಲಿಯೂ ಕಾಣಬಹುದು. ಜಗತ್ತು ಇಂದು ಅಡ್ಡದಾರಿ ಹಿಡಿದಿದ್ದರೆ ನಾವು ಧೃತಿಗೆಡಬಾರದು. ಭಾರತವೂ ಸಹ ಜ್ವಾಲೆಯ ಕುಡಿಗೆ ಆಕರ್ಷಿತವಾಗಿ ಅದನ್ನು ಸುತ್ತುತ್ತಾ ತನ್ನನ್ನೇ ಸುಟ್ಟುಕೊಳ್ಳುವ ಪತಂಗದ ರೀತಿಯಲ್ಲಿ ಅದೇ ದಾರಿಯನ್ನು ಹಿಡಿಯಬಹುದು. ಆದರೆ, ಅಂಥ ದುರಂತದಿಂದ ಭಾರತವನ್ನು ಆ ಮೂಲಕ ಇಡೀ ಜಗತ್ತನ್ನು ರಕ್ಷಿಸಲು ನನ್ನ ಕೊನೆಯುಸಿರಿನವರೆಗೂ ಪ್ರಯತ್ನಿಸುವುದು ನನ್ನ ಕರ್ತವ್ಯ. ನನ್ನ ಮಾತಿನ ಸಾರಾಂಶ. ಮಾನವ ತನ್ನ ನಿಜ ಅಗತ್ಯಗಳಿಗೆ ತೃಪ್ತಿಪಟ್ಟು ಸ್ವಾವಲಂಬಿಯಾಗಬೇಕು. ಅಂಥ ನಿಯಂತ್ರಣವಿಲ್ಲದಿದ್ದರೆ ಆತ ತನ್ನನ್ನು ತಾನು ರಕ್ಷಿಸಿಕೊಳ್ಳಲಾರ..' ಎಂದು ಬರೆದಿದ್ದರು. ಇದನ್ನು ಅಭಿವೃದ್ಧಿಯ ಗಾಂಧಿಯ ಹಾದಿ ಎನ್ನಬಹುದು. ಆ ಪತ್ರಕ್ಕೆ ಉತ್ತರವಾಗಿ ನೆಹರೂರವರು '..ಇಂಥ ಸಮಾಜದ ಸಾಕ್ಷಾತ್ಕಾರದ ವಿಧಾನ ಮತ್ತು ಅದು ಒಳಗೊಳ್ಳಬೇಕಿರುವ ವಿಷಯಗಳು ಯಾವುವು ಎಂಬುದೇ ನಮ್ಮ ಮುಂದಿರುವ ಪ್ರಶ್ನೆ. ಒಂದು ಗ್ರಾಮವು ಸತ್ಯ ಮತ್ತು ಅಹಿಂಸೆಗಳನ್ನೆ ಒಳಗೊಂಡಿರಬೇಕು ಎಂಬುದು ನನಗೆ ಅರ್ಥವಾಗದು. ಸಾಮಾನ್ಯ ಅಭಿಪ್ರಾಯವೆಂದರೆ, ಒಂದು ಗ್ರಾಮ ಬೌದ್ಧಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಹಿಂದುಳಿದಿದೆ. ಒಂದು ಹಿಂದುಳಿದ ಪರಿಸರದಿಂದ ಯಾವುದೇ ಪ್ರಗತಿ ಸಾಧನೆ ಅಸಾಧ್ಯ. ಸಂಕುಚಿತ ಮನೋಭಾವನೆಯ ಜನರು ಹೆಚ್ಚು ಸುಳ್ಳರೂ ಹಿಂಸಾವಾದಿಗಳೂ ಆಗಿರುವ ಸಾಧ್ಯತೆಯಿದೆ. ಆಹಾರ, ಉಡುಪು, ವಸತಿ, ಶಿಕ್ಷಣ, ನೈರ್ಮಲ್ಯ ಇತ್ಯಾದಿಗಳನ್ನು ಒದಗಿಸುವ ಗುರಿಗಳನ್ನು ನಾವು ಹಮ್ಮಿಕೊಳ್ಳಬೇಕು. ಈ ಉದ್ದೇಶದಿಂದ ಅವುಗಳನ್ನು ತ್ವರಿತಗತಿಯಲ್ಲಿ ನಿರ್ದಿಷ್ಟವಾಗಿ ಸಾಧಿಸುವ ಹಾದಿಯನ್ನು ಕಂಡುಕೊಳ್ಳಬೇಕು. ಅದಕ್ಕಾಗಿ ಆಧುನಿಕ ಸಾರಿಗೆ ವಿಧಾನಗಳು ಮತ್ತು ಇತರೆ ಆಧುನಿಕ ಅಭಿವೃದ್ಧಿಗಳು ನಿರಂತರವಾಗಿ ಬೆಳೆಯಬೇಕು. ಇವುಗಳನ್ನು ಬಿಟ್ಟರೆ ಅನ್ಯಮಾರ್ಗವಿಲ್ಲ.

ಇವೆಲ್ಲ ಬಡ ಗ್ರಾಮಗಳ ಚೌಕಟ್ಟಿನಲ್ಲಿ ಹೇಗೆ ಹೊಂದಿಕೊಳ್ಳುತ್ತವೆ? ಬೃಹತ್ ಅಥವಾ ಲಘು ಉದ್ದಿಮೆಗಳನ್ನು ಸಾಧ್ಯವಾದಷ್ಟು ವಿಕೇಂದ್ರಿಕರಿಸಬೇಕೆಂಬುದು ನನ್ನ ವೈಯಕ್ತಿಕ ಅಭಿಪ್ರಾಯ. ವಿದ್ಯುತ್‌ನಿಂದ ಇದು ಸಾಧ್ಯ. ಎರಡು ಬಗೆಯ ಅರ್ಥವ್ಯವಸ್ಥೆಗಳಿದ್ದರೆ, ಒಂದನ್ನೊಂದು ಮೆಟ್ಟನಿಲ್ಲಬಹುದು ಅಥವಾ ಎರಡರ ನಡುವೆ ಸಂಘರ್ಷ ಸಾಧ್ಯ..' ಇದು ನೆಹರೂರವರು ಕಂಡಿದ್ದ ಹಾದಿ.

ಕೈಗಾರಿಕೀಕರಣದ ಬಗ್ಗೆ ಒಮ್ಮೆ ಹೇಳುತ್ತಾ ಗಾಂಧಿ, 'ಕೈಗಾರಿಕೀಕರಣ ಮನುಕುಲಕ್ಕೇ ಶಾಪವಾಗುತ್ತದೆನ್ನುವ ಹೆದರಿಕೆ ನನಗಿದೆ. ಕೈಗಾರಿಕೀಕರಣ ವ್ಯಕ್ತಿಯೊಬ್ಬನ ದೋಚುವ ಸಾಮರ್ಥ್ಯವನ್ನವಲಂಬಿಸಿರುತ್ತದೆ, ವಿದೇಶಿ ಮಾರುಕಟ್ಟೆಯನ್ನು ಮತ್ತು ಸ್ಪರ್ಧಿಗಳಿಲ್ಲದಿರುವುದನ್ನು ಅವಲಂಬಿಸಿರುತ್ತದೆ.. ಕೈಗಾರಿಕೀಕರಣದ ಭವಿಷ್ಯತ್ತು ಅಂಧಕಾರಮಯವಾಗಿದೆ.. ಯಂತ್ರಗಳ ಆಕ್ಷೇಪಣೆಗೆ ನನ್ನ ಕಾರಣವೇನೆಂದರೆ ಈ ರಾಷ್ಟ್ರಗಳು ಇತರರನ್ನು ದೋಚುತ್ತಿರುವುದು ಯಂತ್ರಗಳಿಂದಾಗಿಯೇ.. ಈ ದಿನ, ಬೆರಳೆಣಿಕೆಯಷ್ಟು ಜನ ಲಕ್ಷಾಂತರ ಜನರ ಮೇಲೆ ಸವಾರಿ ಮಾಡಲು ಈ ಯಂತ್ರಗಳು ಸಹಾಯ ಮಾಡುತ್ತಿವೆ. ಇದರ ಹಿಂದಿರುವುದು ದುರಾಸೆಯೇ ಹೊರತು ಶ್ರಮ ಉಳಿಸುವ ಅಥವಾ ಶ್ರಮ ಕಡಿಮೆ ಮಾಡುವ ಉದಾತ್ತ ಮನೋಭಾವವಲ್ಲ' ಎಂದಿದ್ದರು. ಆದರೆ ಗಾಂಧಿಯವರು ಎಂದಿಗೂ ಯಂತ್ರ ಅಥವಾ ವಿಜ್ಞಾನ ವಿರೋಧಿಯಾಗಿರಲಿಲ್ಲ, ಆದರೆ ಅವು ಜನರ ಶೋಷಣೆಯ ಮಾಧ್ಯಮಗಳಾಗಬಾರದು ಎನ್ನುತ್ತಿದ್ದರು. '..ವಿದ್ಯುಚ್ಛಕ್ತಿ, ಹಡಗು ನಿರ್ಮಾಣ, ಯಂತ್ರಗಳು ನಮ್ಮ ಗ್ರಾಮೀಣ ಕುಶಲ ಕೈಗಾರಿಕೆಗಳ ಜೊತೆಯಲ್ಲೇ ಸಾಗಬೇಕೇ ಹೊರತು ಅವು ಇತರರನ್ನು ಶೋಷಿಸುವಂತಾಗಬಾರದು. ನನ್ನ ಚರಕವೂ ಯಂತ್ರವೇ, ಆದರೆ ಅದು ಮತ್ತೊಬ್ಬರನ್ನು ಶೋಷಿಸುವುದಿಲ್ಲ, ಬದಲಿಗೆ ಸ್ವಾಭಿಮಾನವನ್ನು ಕೊಡುತ್ತದೆ, ಬದುಕನ್ನು ಕೊಡುತ್ತದೆ' ಎಂದೊಮ್ಮೆ ಹೇಳಿದ್ದರು. ಗಾಂಧಿಯವರ ದೃಷ್ಟಿ ತಾಂತ್ರಿಕ ಅಭಿವೃದ್ಧಿ ಪ್ರಕೃತಿಯನ್ನು ಗೆಳೆಯನನ್ನಾಗಿ, ನಮ್ಮ ಪೋಷಕನನ್ನಾಗಿ ಪರಿಗಣಿಸಬೇಕು. ಆದರೆ ಈಗಿನ ನಮ್ಮ ವಿಧಾನಗಳೆಲ್ಲಾ ಇದಕ್ಕೆ ತದ್ವಿರುದ್ಧವಾದುವು. ಗಾಂಧಿಯ ಅರ್ಥಶಾಸ್ತ್ರ ಕನಿಷ್ಠ ಬಳಕೆ, ಸಂಸ್ಕರಣೆ, ಮರುಬಳಕೆ ಆಧಾರಿತ ಸುಸ್ಥಿರ ಆರ್ಥಿಕತೆಯ ಬುನಾದಿಯದು.

ಅವರಿಗೆ ಮನುಕುಲದ ಹಾಗೂ ಪ್ರಕೃತಿ ಎರಡರ ಬಗೆಗೂ ಕಾಳಜಿಯಿತ್ತು. ಅವುಗಳ ಉನ್ನತಿಗೆ ಅವರು ಪ್ರೀತಿ, ಪ್ರೇಮದ, ಶಾಂತಿಯ ಹಾಗೂ ಸಹಕಾರದ ಹಾದಿ ಅರಸಿದರು, ಏಕೆಂದರೆ ದ್ವೇಷ ಮತ್ತು ಯುದ್ಧಗಳಿಗಿಂತ ಅವೇ ಹೆಚ್ಚು ಸುಸ್ಥಿರವಾದುವು. 'ಮನುಕುಲವನ್ನು ಆಳುತ್ತಿರುವುದು ಪ್ರೀತಿಯ ನಿಯಮ. ಹಿಂಸೆ ದ್ವೇಷಗಳೇ ರಾರಾಜಿಸಿದ್ದಿದ್ದರೆ ನಾವೆಂದೋ ಸಂಪೂರ್ಣ ನಿರ್ನಾಮವಾಗಿಬಿಡಬೇಕಿತ್ತು. ಆದರೂ ನಾಗರಿಕವೆಂದು ಕರೆಯಲ್ಪಡುವ ಮನುಷ್ಯರು ಹಾಗೂ ದೇಶಗಳು ಸಮಾಜದ ತಳಹದಿಯೇ ಹಿಂಸೆಯೆನ್ನುವಂತೆ ನಡೆದುಕೊಳ್ಳುತ್ತಿರುವುದು ತೀರಾ ದುರಂತ' ಎಂಬ ಆತಂಕ ವ್ಯಕ್ತಪಡಿಸಿದ್ದರು.

* * *

ಜನಪದ ವ್ಯಕ್ತಿ

ಎನ್.ಕೆಂಪಗೌಡರ್

"ಎಲ್ಲಾದರೂ ಇರು ಎಂತಾದರೂ ಇರು ಎಂದೆಂದಿಗೂ ನೀ ಕನ್ನಡವಾಗಿರು" ಎಂಬ ರಾಷ್ಟ್ರ ಕವಿ ಕುವೆಂಪುರವರ ಆಶಯವನ್ನು ಅರ್ಥಶ: ಪಾಲಿಸುವ ಕನ್ನಡಿಗರ ಸಂಖ್ಯೆ ತುಂಬ ಅಪರೂಪವಾಗುತ್ತಿದೆ. ಕನ್ನಡದ ಬಗ್ಗೆ ಅಭಿಮಾನವಿರಬೇಕೆಂದು ಸಾಹಿತಿಗಳು, ರಾಜಕಾರಣಿಗಳು, ಹೇಳುತ್ತಲೇ ಇರುತ್ತಾರೆ. ಆದರೆ ಆ ಅಭಿಮಾನವನ್ನು ತಮ್ಮ ಕಾರ್ಯಕ್ಷೇತ್ರದಲ್ಲಿ ಪ್ರಕಟ ಪಡಿಸುವ ಕನ್ನಡಿಗರು ಬೆರಳೆಣಿಕೆಯಷ್ಟು. ಅನೇಕ ಕ್ಷೇತ್ರಗಳಲ್ಲಿ ಕನ್ನಡವನ್ನು ತುಂಬ ಅನುಕೂಲಕರವಾಗಿ ಬಳಸಬಹುದು. ವಾಣಿಜ್ಯ, ಕಲಾಕ್ಷೇತ್ರ, ಕೃಷಿ, ಆಡಳಿತ, ವೈದ್ಯಕೀಯ ಕ್ಷೇತ್ರ ಮುಂತಾದೆಡೆಗಳಲೆಲ್ಲ ಕನ್ನಡವನ್ನು ನಿಃಸಂಶಯವಾಗಿ ಪರಿಣಾಮಕಾರಿಯಾಗಿ ಉಪಯೋಗಿಸಬಹುದು. ಮನಸ್ಸಿದ್ದರೆ ವಿಜ್ಞಾನ ಕ್ಷೇತ್ರದಲ್ಲೂ, ತಾಂತ್ರಿಕ ಕ್ಷೇತ್ರದಲ್ಲೂ, ಕನ್ನಡವನ್ನು ಫಲಕಾರಿಯಾಗಿ ದುಡಿಸಿ ಕೊಳ್ಳಬಹುದು. ನ್ಯಾಯಾಂಗ ಕ್ಷೇತ್ರದಲ್ಲಂತೂ ಕನ್ನಡವನ್ನು ಸುಲಿದ ಬಾಳೆಹಣ್ಣಿನಂತೆ ಸುಲಭವಾಗಿ ಉಪಯೋಗಿಸಬಹುದು. ನ್ಯಾಯಾಂಗ ಕ್ಷೇತ್ರದಲ್ಲಿ ಕನ್ನಡವನ್ನು ಸಾರ್ಥಕವಾಗಿ ಉಪಯೋಗಿಸಿದ ಓರ್ವ ದಿಟ್ಟ ಕನ್ನಡಿಗನ ಉದಾಹರಣೆ ನಮ್ಮ ಮುಂದೆ ಇದೆ. ಉದಾಹರಣೆಯಾಗಿರುವ ಆ ವ್ಯಕ್ತಿ ಬೆಂಗಳೂರು ಮಹಾನಗರ ೮ನೇ ಜಿಲ್ಲಾ ನ್ಯಾಯಾಧೀಶರಾಗಿ ವರ್ಗಾವಣೆಗೊಂಡಿರುವ ಸಿದ್ದಪ್ಪ ಎನ್. ಕೆಂಪಗೌಡರ್. ತುಮಕೂರಿನ ಶೀಘ್ರ ನ್ಯಾಯ ವಿತರಣ ನ್ಯಾಯಾಲಯದಲ್ಲಿ ಹತ್ತು ಸಾವಿರಕ್ಕೂ ಹೆಚ್ಚು ತೀರ್ಪುಗಳನ್ನು ಕನ್ನಡದಲ್ಲೇ ನೀಡಿರುವ ಕೆಂಪಗೌಡರು ಕಳೆದ ೨೫ ವರ್ಷಗಳಿಂದ ನ್ಯಾಯಾಂಗ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಅವರು ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣಗಳಿಗೆ ಸಂಬಂಧಿಸಿದಂತೆ ವರ್ಷ ಒಂದಕ್ಕೆ ೫೪೦ರಂತೆ ಹದಿಮೂರು ಸಾವಿರಕ್ಕೂ ಹೆಚ್ಚು ತೀರ್ಪುಗಳನ್ನು ಕನ್ನಡದಲ್ಲಿ ಕೊಟ್ಟಿದ್ದಾರೆ! ಅವರ ಒಂದೊಂದು ತೀರ್ಪು ಸಾಮಾನ್ಯವಾಗಿ ೨೦ರಿಂದ ೨೫ ಪುಟಗಳಷ್ಟಿರುತ್ತದೆ. ಈ ಸಾಧನೆ ಸಾಲದೆಂಬಂತೆ ಕೆಂಪೆಗೌಡರವರು ಎಸ್‌ಎನ್ಕೆ ಎಂಬ ಕಾವ್ಯ ನಾಮದಲ್ಲಿ ಸುಮಾರು ೨೨ ಕೃತಿಗಳನ್ನು ಕನ್ನಡದಲ್ಲಿ ಪ್ರಕಟಿಸಿದ್ದಾರೆ. ಇನ್ನೂ ಕೆಲವು ಕೃತಿಗಳು ಪ್ರಕಟಣೆಯ ಹಂತದಲ್ಲಿವೆ. ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲ್ಲೂಕಿನ ಹತ್ತೀಕಟ್ಟೆ ಗ್ರಾಮದ ಕೆಂಪಗೌಡರು ಬಿ.ಎ. ಎಲ್.ಎಲ್.ಬಿ. ಪದವೀಧರರಾಗಿ ತಮ್ಮ ವೃತ್ತಿ ಆರಂಭಿಸಿದರು. ೧೯೮೫ರಲ್ಲಿ ನ್ಯಾಯಾಧೀಶರಾಗಿ ನೇಮಕಗೊಂಡರು. ನ್ಯಾಯಾಧೀಶರಾದ ಮೇಲೂ ಕನ್ನಡದ ಅಭಿಮಾನ ಬಿಡಲಿಲ್ಲ. ತೀರ್ಪುಗಳನ್ನು ಕನ್ನಡದಲ್ಲಿ ಕೊಡುವುದರ ಮೂಲಕ ನ್ಯಾಯ ಶಾಸ್ತ್ರದಲ್ಲಿ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಕನ್ನಡ ಅಭಿವೃಧಿ ಪ್ರಾಧಿಕಾರವು ಕೆಂಪಗೌಡರನ್ನು ಸನ್ಮಾನಿಸಿದೆ. ಕೆಂಪಗೌಡರವರಂಥ ಕನ್ನಡ ಅಭಿಮಾನಿಗಳ ವಂಶ ಎಲ್ಲ ಕ್ಷೇತ್ರಗಳಲ್ಲಿಯೂ ಹೆಚ್ಚಾಗಲಿ.

* * *

ವೇದದಲ್ಲಿಯ ಮುತ್ತುಗಳು

– ವಿನೋಬಾ

'ಸ್ವರಾಜ್ಯ' ವೈದಿಕ ಪರಿಭಾಷೆಯ ಒಂದು ಶಬ್ದ. ರಾಜ್ಯ ಒಂದು ಮಾತಾದರೆ 'ಸ್ವರಾಜ್ಯ' ಇನ್ನೊಂದು ಮಾತು. ರಾಜ್ಯವನ್ನು ಹಿಂಸೆಯಿಂದ ಪಡೆಯಬಹುದು, ಆದರೆ ಸ್ವರಾಜ್ಯ ಅಹಿಂಸೆಯಿಲ್ಲದೆ ಅಸಂಭವ. ಆದ್ದರಿಂದ ವಿಚಾರಶೀಲರಾಗಿರುವವರು 'ರಾಜ್ಯ'ವನ್ನು ಇಷ್ಟಪಡುವುದಿಲ್ಲ. ಬದಲಿಗೆ, "ಬನ್ನಿ ನಾವೆಲ್ಲರೂ ಸ್ವರಾಜ್ಯಕ್ಕಾಗಿ ಪ್ರಯತ್ನಿಸೋಣ" ಎಂದು ಹೇಳುತ್ತಾ ತಳಮಳಿಸುತ್ತಿರುತ್ತಾರೆ. ***ನ ತ್ವಹಂ ಕಾಮಯೆ ರಾಜ್ಯಂ.*** ಇದು ಅವರ ನಿಷೇಧಾತ್ಮಕ ಮತ್ತು ***ಯತೇಮಹಿ ಸ್ವರಾಜ್ಯೆ.*** ಇದು ಅವರ ವಿಧಾಯಕ ರಾಜಕೀಯ ಉದ್ಘೋಷವಾಗಿರುತ್ತದೆ. ***ವ್ಯಚಿಷ್ಠೆ ಬಹುಪಾಯ್ಯೆ ಯತೇಮಹಿ ಸ್ವರಾಜ್ಯೆ (ಋ.೪.೧೧)*** ಇದು ಅತ್ರಿ ಋಷಿಯ ಮಂತ್ರ. 'ವ್ಯಚಿಷ್ಠೆ ಅಂದರೆ ಅತ್ಯಂತ ವ್ಯಾಪಕವಾದದ್ದು ಅರ್ಥಾತ್ ಅಲ್ಲಿ ಎಲ್ಲರಿಗೂ ಸಮಾನ ಅಧಿಕಾರವಿದೆ. 'ಬಹಪಾಯ್ಯೆ' ಅಂದರೆ ಅಲ್ಪ ಸಂಖ್ಯಾತರ ರಕ್ಷಣೆಯ ವಿಷಯದಲ್ಲಿ ಬಹಸಂಖ್ಯಾತರು ಸಾವಧಾನರೂ, ಜಾಗೃತರೂ ಆಗಿರುತ್ತಾರೆ. ಇಂಥ ಸ್ವರಾಜ್ಯಕ್ಕಾಗಿ ನಾವು ಪ್ರಯತ್ನಿಸೋಣ.

ಸ್ವರಾಜ್ಯಾಂತೆ ನರಕ ಪ್ರಾಪ್ತಿಃ ಅಂದರೆ ರಾಜ್ಯ ಮುಗಿದ ಮೇಲೆ ನರಕ ಪ್ರಾಪ್ತವಾಗುತ್ತದೆಂದು ಶಾಸ್ತ್ರಗಳಲ್ಲಿ ಬರೆಯಲಾಗಿದೆ. ಅಂದರೆ ರಾಜ್ಯ ನಡೆಸುವ ರಾಜ ಮರಣ ಹೊಂದಿದ ಮೇಲೆ ನರಕಕ್ಕೆ ಹೋಗುತ್ತಾನೆ. ದಿಲ್ಲಿಯಿಂದ ಯಾವ ಯಾವುದು ನಡೆಯುತ್ತದೋ ಅದಕ್ಕೆ 'ರಾಜ್ಯ'ವೆನ್ನುತ್ತಾರೆ. ಆ ರಾಜ್ಯ ನಮ್ಮ ಜನರದೇ ಆಗಿದ್ದರೂ ಕೂಡ. ಹಳ್ಳಿ ಹಳ್ಳಿಗಳಲ್ಲಿ ಪ್ರತಿಯೊಬ್ಬ ತನ್ನ ಮೇಲೆ ಯಾವ ಅಧಿಕಾರ ನಡೆಸುತ್ತಾನೋ ಅದು 'ಸ್ವರಾಜ್ಯ'. ಹಸಿದಿದ್ದರೂ ಪರವಾಗಿಲ್ಲ, ಕಳ್ಳತನ ಮಾಡುವುದಿಲ್ಲ ಎಂಬುದರ ಹೆಸರು ಸ್ವರಾಜ್ಯ. ನನ್ನ ಮೇಲೆ ಬೇರೆಯವರ ಅಧಿಕಾರ ನಡೆದರೆ ಅದು ಸ್ವರಾಜ್ಯವೇ? ಸ್ವರಾಜ್ಯದ ಅರ್ಥ ನನ್ನ ಮೇಲೆ ನನ್ನ ಸ್ವಂತ ರಾಜ್ಯ! ಈ ರೀತಿ ಎಲ್ಲ ಜನರಲ್ಲಿ ಯಾವಾಗ ತಮ್ಮ ಮೇಲೆ ನಿಯಂತ್ರಣ ಇಟ್ಟುಕೊಳ್ಳುವ ಶಕ್ತಿ ಉಂಟಾಗುತ್ತದೊ ಮತ್ತು ಅವರಿಗೆ ತಮ್ಮ ಕರ್ತವ್ಯದ ಪ್ರಜ್ಞೆ ಉಂಟಾಗುತ್ತದೊ ಆಗ 'ಸ್ವರಾಜ್ಯ' ಬರುವುದು. ಅಲ್ಲಿಯ ವರೆಗೆ 'ರಾಜ್ಯವೇ' ನಡೆಯುವುದು. ಸ್ವರಾಜ್ಯದ ಕೆಲಸ ನಾವು ಮಾಡಬೇಕಿದೆ. ಅದಕ್ಕಾಗಿ ಜನಶಕ್ತಿ ಉಂಟುಮಾಡಬೇಕಿದೆ. ಜನರ ಹೃದಯದಲ್ಲಿ ಆತ್ಮಶಕ್ತಿಯ ಅರಿವನ್ನುಂಟುಮಾಡಬೇಕಿದೆ. ನಮ್ಮ ಮನಸ್ಸಿನಲ್ಲಿ ಚೇತನಕ್ಕಿಂತ ಅಚೇತನದ ಇಚ್ಛೆ ಇರುವವರೆಗೆ ಮತ್ತು ಅಧಿಕಾರ ಮುಂತಾದ ಮೋಹದಲ್ಲಿ ಚೇತನ ಓಡುತ್ತಿರುವವರೆಗೆ ನಿಜವಾದ ಸ್ವರಾಜ್ಯದ ಉದಯವೇ ಆಗುವುದಿಲ್ಲ. ಸರ್ವೋದಯವಂತೂ ಆಗುವುದೇ ಇಲ್ಲ.

ಸ್ವರಾಜ್ಯ ಶಾಸ್ತ್ರ ನಿತ್ಯ ಅರ್ಧಿಷ್ಣು. ಆದ್ದರಿಂದ ಅದರ ರೀತಿ ದೇಶಕಾಲಾನುಸಾರ ಸತತ ಪರಿವರ್ತನಶೀಲವಾಗಿದೆ. ಆದರೆ ಅದರ ಮೂಲತತ್ವ ಶಾಶ್ವತ.

ವೇದದಲ್ಲಿ ಸೂರ್ಯನನ್ನು **ಸ್ವರಾಟ್** ಎಂದು ಕರೆಯಲಾಗಿದೆ. ಅವನು ಸ್ವಯಂಪ್ರಕಾಶಿ. ಚಂದ್ರನನ್ನು **ಅನ್ಯರಾಜ್** ಎಂದು ಕರೆಯಲಾಗಿದೆ. ಅವನು ಎರಡನೆಯವರ ಪ್ರಕಾಶದಲ್ಲಿ ವಿರಾಜಮಾನನಾಗಿದ್ದಾನೆ.

'ಸ್ವರಾಜ್ಯ' ಶಬ್ದ ಬಹು ಸುಂದರವಾದ ಅರ್ಥವನ್ನು ತಿಳಿಸುವಂಥಾದ್ದಾಗಿದೆ. ಋಷಿಗಳು ಕೂಡ ಸಾಮಾಜಿಕ ದೃಷ್ಟಿಯಲ್ಲಿ ಪರಾಧೀನವಾಗಿರಲಿಲ್ಲ. ಅವರು ***ಯತೇಮಹಿ ಸ್ವರಾಜ್ಯೆ*** ಅಂದರೆ ನಾವು ಸ್ವರಾಜ್ಯಕ್ಕಾಗಿ ಪ್ರಯತ್ನಿಸುತ್ತೇವೆ ಎಂಬುದಾಗಿ ಹೇಳಿದ್ದರು.

– ೨೮ನೆ ಪುಟ ನೋಡಿ..

ಕನ್ಸರ್ವೇನ್ಸಿ ಲೇನ್ ಕೆಂಪಯ್ಯ

– ಬಿ.ಎಸ್.ವೆಂಕಟಲಕ್ಷ್ಮಿ

ನಾನು ಸಾರ್ವಜನಿಕ ಆಯಾಮಕ್ಕೆ ಸೇರಿದವಳಲ್ಲ. ಹೀಗಾಗಿ ವಿಸ್ತಾರವಾದ ಕ್ಯಾನ್ವಾಸ್ ಇಟ್ಟುಕೊಂಡು ಬರೆಯೋ ಸೌಲಭ್ಯ ನನಗಿಲ್ಲ. ಅದೂ ಅಲ್ಲದೆ ತಲ್ಲಣಗಳೆಂಬುದು ಲೇಖಕರಿಗೆ ಮಾತ್ರ ಸೀಮಿತವಾದವಲ್ಲ. ಸೂಕ್ಷ್ಮ ಮನಸ್ಸಿನ ಯಾರನ್ನೇ ಆಗಲಿ ಸುತ್ತಮುತ್ತಲಿನಲ್ಲಿ ನಡೆಯುತ್ತಿರೋ ಅನೇಕ ವಿಷಯಗಳು ಕಾಡಬಹುದು. ಇವು ತಲ್ಲಣಗೊಳಿಸುವಷ್ಟು ತೀವ್ರವಾದಾಗ ಕೆಲವರು ತಮ್ಮನ್ನು ಬಾಧಿಸುತ್ತಿರೋ ಸಂಗತಿಗಳನ್ನು ತಮಗೆ ಹತ್ತಿರವಾದವರ ಜತೆಯಲ್ಲಿ ಹಂಚಿಕೊಂಡು ಮನಸ್ಸನ್ನು ಹಗುರ ಮಾಡಿಕೊಳ್ಳುವಂತೆಯೇ, ಲೇಖಕರನ್ನೂ ಒಳಗೊಂಡಂತೆ ಸೃಜನಶೀಲ ಆಯಾಮದಲ್ಲಿರುವವರು ಇವನ್ನು ಇನ್ನೂ ವ್ಯಾಪಕ ಕ್ಷೇತ್ರಕ್ಕೆ ಹಿಗ್ಗಿಸಿ, ಅದಕ್ಕೊಂದು ಸಾರ್ವಜನಿಕ ಬಣ್ಣವನ್ನು ಒದಗಿಸಬಹುದು ಅಷ್ಟೆ. ಹೀಗಾದಾಗ ಲೇಖಕರಾಗಿರುವವರು ತಾವು ಮಾತ್ರ ಸಮಾಜದ ಹಿತಚಿಂತಕರು, ಮಿಕ್ಕೆಲ್ಲರೂ ಎಮ್ಮೆ ಮೇಲೆ ಮಳೆ ಹುಯ್ದ ಹಾಗೇ ಏನೇ ನಡೆಯುತ್ತಿದ್ದರೂ ಅವುಗಳ ಬಗ್ಗೆ ಚಿಂತೆಯನ್ನೇ ಬೆಳೆಸಿಕೊಳ್ಳದೇ ಇರುವವರು ಅಂತೇನಾದರೂ ತಿಳಿದುಕೊಂಡರೆ ಅದೊಂದು ದೊಡ್ಡ ತಪ್ಪು. ಅನೇಕ ಸಲ ಬಸ್ಸಿನಲ್ಲಿ ಪ್ರಯಾಣ ಮಾಡುತ್ತಿರುವಾಗಲೋ, ಅಥವಾ ರೇಶನ್ ಶಾಪಿನ ಕ್ಯೂನಲ್ಲಿ ನಿಂತಿರುವಾಗಲೋ ಇಲ್ಲವೇ ಫುಟ್‌ಪಾತ್‌ನಲ್ಲಿ ಸಣ್ಣಪುಟ್ಟ ವ್ಯಾಪಾರ ಮಾಡುತ್ತಿರುವಾಗಲೋ ಜನರ ಮಧ್ಯದಲ್ಲಿನ ಸಂಭಾಷಣೆಗಳಿಗೆ ಸ್ವಲ್ಪ ಗಮನ ಕೊಟ್ಟರೂ ಸಾಕು ನಮ್ಮ ಸಾಮಾನ್ಯ ಜನರಿಗೆ ಸಾರ್ವಜನಿಕ ವಿಷಯಗಳನ್ನು ಕುರಿತು ಇರೋ ತಲ್ಲಣಗಳು ಬೆರಗು ಹುಟ್ಟಿಸುತ್ತವೆ. ಅಷ್ಟೇ ಏಕೆ, ಮೆಯಿನ್ ರೋಡ್‌ಗಳಿಗೆ ಹೊಂದಿಕೊಂಡಂತಿರೋ ಗುಡಿಸಲುಗಳಲ್ಲಿ ವಾಸಿಸುತ್ತಿರೋ ಜನರಾಡುತ್ತಿರುವ ಮಾತುಗಳನ್ನೊ, ರಿಕ್ಷಾ ಡ್ರೈವರ್, ಗಾಡಿಗಳಲ್ಲಿ ಹಣ್ಣು ತರಕಾರಿ ಮಾರುವವರು, ಗಾರೆ ಕೆಲಸದಲ್ಲಿ ತೊಡಗಿರುವವರು, ತರಕಾರಿ ಹೆಚ್ಚುವ ಚಾಕು ಕತ್ತರಿಗಳನ್ನು ಹರಿತಗೊಳಿಸುವುದನ್ನೇ ಕಸುಬನ್ನಾಗಿಟ್ಟುಕೊಂಡು, ಭಾರವಾದ ಯಂತ್ರವನ್ನು ಹೆಗಲಿಗೇರಿಸಿಕೊಂಡು ಬೀದಿಬೀದಿ ಅಲೆಯುತ್ತಿರುವವರು ಇವರನ್ನೇ ನೋಡಿ. ಇವರೆಲ್ಲ ನಮಗಿಂತಲೂ ಹೆಚ್ಚು ಚುರುಕಾಗಿರುತ್ತಾರೆ. ಸಣ್ಣಪುಟ್ಟ ಚಿಲ್ಲರೆ ಸಂಪಾದನೆಗಾಗಿ, ದಿನವಿಡೀ ದುಡಿಯುತ್ತಿರುವ ಈ ಜನಕ್ಕೆ ವಾತಾವರಣ ತಮಗೆ ಪ್ರತಿಕೂಲವಿದ್ದಾಗಲೂ ತಮ್ಮ ತಲ್ಲಣಗಳನ್ನು, ಸಂಕಟಗಳನ್ನು ನುಂಗಿಕೊಂಡು ಮೌನವಾಗೇ ಬೆವರಿಳಿಸುತ್ತಿರೋದನ್ನು ಕಂಡಾಗ, ಲೇಖಕರೆನ್ನಿಸಿಕೊಂಡಿರುವ ನಾವು ಸೋಫಾದ ಮೇಲ್ಲೋ, ಕಂಪ್ಯೂಟರ್ ಮುಂದೋ ಕೂತು, ಕಾಫಿ ಕುಡಿಯುತ್ತ ನಮ್ಮ ಬರವಣಿಗೆಯಿಂದ ಸಮಾಜವನ್ನೇ ಬದಲಾಯಿಸಿ ಬಿಡುತ್ತೇವೇನೋ ಅನ್ನೋ ಸೋಗಿನಲ್ಲಿ, ಅಹಂಕಾರದಿಂದ ಮೆರೆಯುತ್ತಲೇ ನಮಗನ್ನಿಸಿದ್ದನ್ನೆಲ್ಲ ಹೇಳಿಕೊಳ್ಳುವುದೇ ನಾಚಿಕೆಗೇಡು ಅನ್ನಿಸಿಬಿಡುತ್ತೆ. ಏಕೆಂದರೆ ಇನ್ನೂ ಕೆಲವು

ದೇಶಗಳಲ್ಲಿರೋ ಹಾಗೆ ನಮ್ಮಲ್ಲಿ ಪ್ರಮುಖ ಲೇಖಕರೆಲ್ಲ ಸಾರ್ವಜನಿಕ ಲೀಡರ್‌ಗಳಲ್ಲ; ಮುಂಚೂಣಿಯಲ್ಲಿ ನಿಂತುಕೊಂಡು ಸಂಘಟನೆಯೊಂದನ್ನು ಹುಟ್ಟುಹಾಕೋ ತಾಕತ್ತನ್ನು ಹೊಂದಿರುವವರಲ್ಲ. ವೇದಿಕೆ ಸಿಕ್ಕಿದಾಗ ಉಪದೇಶ ನೀಡುತ್ತೀವಿ. ಪ್ರಚಾರದ ಹಂಬಲ ತೀವ್ರವಾದಾಗ, ಮೈಕ್‌ನಲ್ಲಿ ಗಂಭೀರವಾದ ಸ್ಟೇಟ್‌ಮೆಂಟ್‌ಗಳನ್ನು ಕೊಡುತ್ತೀವಿ. ನ್ಯಾಯಕ್ಕಾಗಿ, ತಮ್ಮ ಬೇಡಿಕೆಗಳನ್ನು ಪೂರೈಸಿಕೊಳ್ಳೋ ಸಲುವಾಗಿ ಕೆಳವರ್ಗಗಳ ಜನರೋ, ಕಾರ್ಮಿಕರೋ, ಯಾವುದೋ ಆಫೀಸಿನ ಸಿಬ್ಬಂದಿಯೋ ರಸ್ತೆಗಳಲ್ಲಿ ಮೆರವಣಿಗೆ ಹೊರಟು, ಲಾಠಿಯ ಪೆಟ್ಟಿನಿಂದ ನರಳುತ್ತಿರುವಾಗ ನಾವು ಟಿ.ವಿ. ಮುಂದೆ ಆ ಎಲ್ಲ ದಾರುಣ ದೃಶ್ಯಗಳನ್ನು ನೋಡಿ ಲೊಚಗುಟ್ಟುತ್ತ ತಣ್ಣಗೆ ಕೂತಿರುತ್ತೇವೆ. ಆದ್ದರಿಂದ ಶೂದ್ರ ಪತ್ರಿಕೆಯ ಶ್ರೀನಿವಾಸ್ ಮಹಾಶಯರೇ, ನಿಮ್ಮ ಪತ್ರಿಕೆಯ ವಿಶೇಷ ಸಂಚಿಕೆಗಾಗಿ ನೀವು ಸಾಂಸ್ಕೃತಿಕ ತಲ್ಲಣಗಳಿಗೆ ಲೇಖಕರನ್ನು ಮಾತ್ರ ಬಾಧ್ಯಸ್ಥರನ್ನಾಗಿಸಿರೋದು ಎಷ್ಟರ ಮಟ್ಟಿಗೆ ಸರಿ ಅಂತ ಯೋಚನೆ ಮಾಡುತ್ತಲೇ ಸಂಪಾದಕನಿಗಿರೋ ಸ್ವಾತಂತ್ರವನ್ನು ಗೌರವಿಸಿ ಸಾಮಾನ್ಯ ದೃಷ್ಟಾಂತಗಳನ್ನಿಲ್ಲಿ ಉದಾಹರಿಸಿ ನನ್ನ ಪರ್ಸನಲ್ ತಲ್ಲಣಗಳನ್ನು ಹಂಚಿಕೊಳ್ಳುತ್ತೀನಿ.

ನಿಮ್ಮಲ್ಲಿ ಕೆಲವರಿಗೆ ಗೊತ್ತೋ ಇಲ್ಲವೋ, ಬೆಂಗಳೂರಿನ ಹಳೆಯ ಬಡಾವಣೆಗಳಲ್ಲಿ ಮನೆಯ ಸಾಲುಗಳ ಮಧ್ಯೆ ಹಿಂದೆಲ್ಲ ಕನ್ಸರ್ವೆನ್ಸಿ ಲೇನ್ ಅನ್ನೋ ಕಿರಿದಾದ ರಸ್ತೆ ಇರುತ್ತಿತ್ತು. ಅಲ್ಲಿ ಮನೆಗಳಲ್ಲಿನ ಕಕ್ಕಸುಗಳ ರಾಡಿಯನ್ನು ಹೊರಹಾಕಲು ಪೈಪ್‌ಗಳನ್ನು ಜೋಡಿಸಿ ಅಲ್ಲಲ್ಲಿ ಮ್ಯಾನ್‌ಹೋಲ್‌ಗಳನ್ನು ಕಟ್ಟಿರುತ್ತಿದ್ದರು. ಒಂದೊಂದು ಸಲ ನಮ್ಮ ಹೊಲಸನ್ನೆಲ್ಲ ತುಂಬಿಕೊಂಡಿರುತ್ತಿದ್ದ ಈ ಪೈಪ್‌ಗಳ ಮೂತಿಯಲ್ಲಿ ಎಲೆಗಳೋ, ಮಣ್ಣೋ ಸೇರಿಕೊಂಡು ಹೊಲಸು ಸಲೀಸಾಗಿ ಮ್ಯಾನ್‌ಹೋಲ್‌ಗೆ ಹೋಗದೆ ಅಲ್ಲೇ ಕಟ್ಟಿಕೊಂಡು ಅದು ರಿವರ್ಸ್ ಆಗಿ ಮನೆಗಳ ಕಕ್ಕಸುಗಳಿಗೇ ವಾಪಸ್ಸು ಹರಿಯಲು ತೊಡಗಿದಾಗ ಮನೆಯವರೆಲ್ಲ ಗಾಬರಿಯಿಂದ ಮುನಿಸಿಪಾಲಿಟಿ ಆಫೀಸಿಗೆ ಓಡಿ ಕಂಪ್ಲೇಂಟ್ ಕೊಟ್ಟಾಗ ಕನ್ಸರ್ವೆನ್ಸಿ ಲೇನಿನ ಪೈಪ್‌ಗಳನ್ನು ಶುಚಿ ಮಾಡೋಕ್ಕೆ ಬರುತ್ತಿದ್ದ, ಖಾಕಿ ಶರ್ಟು, ಖಾಕಿ ಚಡ್ಡಿಯ ಒಬ್ಬ ಕೆಂಪಯ್ಯ. ಕೆಂಪಯ್ಯ ಅನ್ನೋ ಹೆಸರಿಗೆ ತಕ್ಕನಾಗಿ, ಇಂಥ ಕೆಲಸ ತನ್ನ ಹಣೆ ಬರಹವಾಯಿತಲ್ಲ ಅನ್ನೋ ರೋಷದಿಂದಲೋ ಏನೋ ಕೆಂಪು ಬಣ್ಣಕ್ಕೆ ತಿರುಗಿರುತ್ತಿದ್ದ ಅವನ ಕಪ್ಪು ಮುಖ. ತಾಕತ್ತಿಗೆ ಅಂತ ಕಳ್ಳು ಏರಿಸುತ್ತಿದ್ದನೇನೋ. ಅವನ ಕಣ್ಣುಗಳು ಸದಾ ಕೆಂಪಾಗಿ ಊದಿಕೊಂಡಿರುತ್ತಿದ್ದವು. ಅವನು ಪೈಪ್‌ಗಳನ್ನು ಕ್ಲೀನ್ ಮಾಡೋಕೆ ಶುರು ಮಾಡೋದಿಕ್ಕಿಲ್ಲ, ಗಬ್ಬುನಾತ ಇಡೀ ರಸ್ತೆಯಲ್ಲಿ ತುಂಬಿಕೊಳ್ಳುತ್ತಿದ್ದಾಗ ತಮ್ಮ ಹಿತ್ತಲಲ್ಲಿದ್ದ ಕನ್ಸರ್ವೆನ್ಸಿ ಲೇನಿಗೆ ಧಾವಿಸಿ, ಆ ಕೆಂಪಯ್ಯನ ಜತೆಯಲ್ಲೇ ಇದ್ದು ಅವನಿಗೆ ನೆಲದ ಮೇಲೆ ಬಿದ್ದಿರುತ್ತಿದ್ದ ದೆಬ್ಬೆ, ಕಡ್ಡಿ ಪೊರಕೆ ಇವನ್ನೆಲ್ಲ ಒದಗಿಸುತ್ತ ನಿಂತಿರುತ್ತಿದ್ದವರು ಯಾರು ಗೊತ್ತೇ? ನಮ್ಮ ಬೀದಿಯಲ್ಲೇ ವಾಸವಾಗಿದ್ದ ವಾಸುದೇವರಾವ್ ಅನ್ನೋ ಹಿರಿಯರು. ದುರ್ನಾತ ತಡೀಲಾರದೆ ನಾವುಗಳೆಲ್ಲ ಮನೇಲಿ ಮುಖಕ್ಕೆ ಟವಲ್ ಮುಚ್ಚಿಕೊಂಡು ಕೂತಿದ್ದರೂ ಮೊಟ್ಟ ಮೊದಲ ಸಲ ನನ್ನ ಕಿವಿಗೆ 'ತಲ್ಲಣ' ಅನ್ನೊ ಪದ ಕೇಳಿಸಿದ್ದು ಕೆಂಪಯ್ಯ ಹಾಗೂ ವಾಸುದೇವರಾವ್ ಮಧ್ಯೆ ನಡೆದಿದ್ದ ಮಾತುಕಥೆಯ ಸಂದರ್ಭದಲ್ಲಿ. "ಎಲ್ರಂಗೆ ನೀವ್ಯಾಕ್ಸಾಮಿ ಮನೇಲಿರ್ಲಾರ್ದೆ ಇಲ್ಲೀಗ್ಬರ್ತೀರಿ.....ಸುಮ್ಕೆ

ಮನೀಗೋಗಿ...."ಅಂತ ಕೆಂಪಯ್ಯ ಹೇಳಿದಾಗ ಈ ವಾಸುದೇವರಾವ್ ಹೇಳಿದ್ರು: 'ಏನ್ಮಾಡ್ಲೋ....ನೀನು ಮಾಡೋ ಕೆಲ್ಸ ನೋಡ್ತಿದ್ರೆ ಮನಸ್ಸು ತಲ್ಲಣಗುಟ್ಟುಬಿಡುತ್ತಲ್ಲೋ.." ಈ ಕೆಂಪಯ್ಯ ದೊಡ್ಡ ಹಬ್ಬಗಳ ಸಂದರ್ಭದಲ್ಲಿ ಯಾವತ್ತಿನ ಹಾಗೆ ಕೈಲಿ ಪೊರಕೆ, ದೆಬ್ಬೆ ಹಿಡಿದುಕೊಳ್ಳದೆ ಮಧ್ಯಾಹ್ನವಾಗುತ್ತಿದ್ದ ಹಾಗೇ ತಮಟೆಯೊಂದನ್ನು ಹಿಡ್ಕೊಂಡು ಅದರಿಂದ ರಸ್ತೆಗೆಲ್ಲ ಗದ್ದಲ ತುಂಬಿಸುತ್ತ ಆವೇಶ ಬಂದವನ ಹಾಗೆ ಕುಣಿಯುತ್ತ, ಕುಪ್ಪಳಿಸುತ್ತ ತನ್ನ ಜತೆಯಲ್ಲಿ ಪುಟ್ಟ ಹುಡುಗನೊಬ್ಬನನ್ನು ಕಟ್ಟಿಕೊಂಡು ಬರುತ್ತಿದ್ದ. ಎಲ್ಲ ಮನೆಗಳ ಗೇಟನ್ನು ಹಾರೊಡೆದು, ತಮಟೆಯನ್ನ ಮತ್ತಷ್ಟು ಜೋರಾಗಿ ಬಡಿದು ಮನೆಯವರು ಸದ್ದನ್ನು ತಡೀಲಾರದವರ ಹಾಗೆ ಕಿವಿ ಮುಚ್ಚಿಕೊಳ್ಳುತ್ತ ಗದ್ದಲ ನಿಲ್ಲಿಸು, ನಿಲ್ಲಿಸು ಅನ್ನೋ ಹಾಗೆ ಅವನಿಗೆ ಸನ್ನೆ ಮಾಡಿದಾಗ ಅವನು ತಮಟೆಗೆ ಸಿಕ್ಕಿಸಿದ್ದ ಹಗ್ಗವನ್ನೆಳೆದು ಅದನ್ನು ಹೆಗಲಿಗೆ ನೇತು ಹಾಕ್ಕೊಂಡು ಕೊಳೆ ಬಣ್ಣದ ಪಂಚೆಯೊಂದನ್ನು ಅಂಗಳದಲ್ಲಿ ಹಾಸಿದಾಗ ಜನರು ತಾವು ತಿಂದ ನಂತರ ಮಿಕ್ಕಿರುತ್ತಿದ್ದ ಅನ್ನ, ಚಿತ್ರಾನ್ನ, ಪಲ್ಯ ಇಂಥವನ್ನೆಲ್ಲ ಪಂಚೆಯ ಮೇಲೆ ಸುರಿಯುತ್ತಿದ್ದರು. ಪಾಯಸ, ಸಾರು ಇಂಥವನ್ನೆಲ್ಲ ಅವನು ತಾನೇ ತಂದಿರುತ್ತಿದ್ದ ಮಡಿಕೆಗೆ ಹಾಕಿಸಿಕೊಳ್ಳುತ್ತಿದ್ದ. ಪಂಚೆಯಲ್ಲಿ ಎಲ್ಲ ಮನೆಯವರೂ ತಮ್ಮದೇ ಆದ ರೀತಿಯಲ್ಲಿ ತಯಾರಿಸಿರುತ್ತಿದ್ದ, ಬೇರೆ ಬೇರೆ ರುಚಿಗಳಿರುತ್ತಿದ್ದ ಎಲ್ಲ ಬಗೆಯ ಅನ್ನಗಳ ಕಲಬೆರಕೆ. ಪಂಚೆಯ ಕೊಳೆ ಬಣ್ಣದ ಹಿನ್ನೆಲೆಯಲ್ಲಿ ಹಳದಿ, ಕೆಂಪು, ಬಿಳಿ ಬಣ್ಣದ ಅನ್ನಗಳು. ಒಂದೊಂದು ಸಲ ಕಜ್ಜಾಯದ ತುಂಡುಗಳು, ರವೆ ಉಂಡೆ ಚೂರುಗಳು, ಕರಕಾಲಾದ ಆಂಬೋಡೆಗಳು. ನೆರೆಮನೆಯ ವಾಸುದೇವರಾವ್ ಆಗ ತಾನೇ ತಲ್ಲಣ ಅನ್ನೋ ಪದಾನ ತಮ್ಮ ಶಬ್ದಕೋಶಕ್ಕೆ ಸೇರಿಸಿಕೊಂಡಿದ್ದರೋ ಅಥವಾ ಕೆಂಪಯ್ಯನ ಅವಸ್ಥೆ ಅವರ ಆಡುಮಾತನ್ನು ಗ್ರಾಂಥಿಕವಾಗಿಸಿತ್ತೋ, ಮತ್ಯಾವುದೋ ಹಬ್ಬದ ದಿನ ನನ್ಮುಂದೆ, "ಆ ಕೆಂಪಯ್ಯನ ಪಾಡು ನೋಡಿದರೆ, ಮನಸ್ಸು ತಲ್ಲಣವಾಗ್ಬಿಡುತ್ತೆ ಅಲ್ವಾ?" ಅಂತ ಇನ್ನೂ ಚಿಕ್ಕ ವಯಸ್ಸಿನ ನನ್ನನ್ನೇ ಕೇಳಿದ್ದರು.

ಈ ವಾಸುದೇವರಾವ್ ಮುಲ್ಕ್‌ರಾಜ್ ಆನಂದರ ಕೃತಿಗಳನ್ನು ಓದಿರಲಾರರು. ಗಾಂಧೀಜಿಯ ಆಶ್ರಮದಲ್ಲಿ ಕಸ್ತೂರಿಬಾ ಅವರನ್ನೂ ಒಳಗೊಂಡಂತೆ ಹರಿಜನರ ಕಕ್ಕಸುಗಳನ್ನು ಶುಚಿ ಮಾಡುತ್ತಿದ್ದವರ ವಿಷಯವನ್ನು ತಿಳಿದಿರಲಾರರು. ಅಂಬೇಡ್ಕರ್‌ರ ಸಿದ್ಧಾಂತದ ಬಗ್ಗೆ ತಲೆ ಕೆಡಿಸಿಕೊಂಡಿರಲಾರರು. ಮಲ ಹೊರುವವರಿಗೆ ಸಂಬಂಧಪಟ್ಟಂತೆ ನಾಯಕರುಗಳು ಆಡೋ ದೊಡ್ಡ ದೊಡ್ಡ ಮಾತುಗಳನ್ನು ಕೇಳಿಸಿಕೊಂಡಿರಲಾರರು. ಆದರೆ ಅವರಿಗೆ ಕೆಂಪಯ್ಯನನ್ನು ನೋಡಿದಾಗ ತಲ್ಲಣ ಹುಟ್ಟುತ್ತಿತ್ತು. ಅವನಿಗಾಗಿ ಮನಸ್ಸು ಕೆಲವು ನಿಮಿಷಗಳಾದರೂ ವಿಲವಿಲ ಅನ್ನುತ್ತಿತ್ತು. ತಲ್ಲಣ ಅನ್ನೋ ಪದವನ್ನು ನನ್ನ ಕಿವಿಗೆ ಬೀಳಿಸಿದ ವಾಸುದೇವರಾವ್ ಈಗ ನೆನಪಾಗಿ ಅವರಿಗೆ ಕೃತಜ್ಞತೆ ಸಲ್ಲಿಸೋ ಸಂದರ್ಭ ಈಗ "ಶೂದ್ರನ" ಮೂಲಕ ಒದಗಿರೋದೇ ತುಂಬಾ ವಿಚಿತ್ರ ಅನ್ನಿಸುತ್ತಿದೆ.

ವಾಸುದೇವರಾವ್‌ಗೆ ಈ ಕೆಂಪಯ್ಯನನ್ನು ಕಂಡು ತಲ್ಲಣ ಹುಟ್ಟಿದ್ದ ಹಾಗೇ ಮತ್ಯಾವ್ಯಾವ ಸಂದರ್ಭಗಳಲ್ಲಿ ತಲ್ಲಣಗಳು ಹುಟ್ಟಿಕೊಳ್ಳುತ್ತಿದ್ದವೋ ಗೊತ್ತಿಲ್ಲ. ಆದರೆ ಹಳ್ಳಿಯಿಂದ ಬಂದಿದ್ದ ಇವರ ವಯಸ್ಸಾದ ಅಕ್ಕ ತಮ್ಮನಿಗೆ ಅವನದೇ ಆದ ವಿಚಿತ್ರ

ನಡವಳಿಕೆ ಇದೆ ಅಂತ ಒಂದಿನ ಹೇಳ್ತಾ, "ಇವನು ಬೆಳ್ಳೂರಿಗೆ ಬರ್ತಿರ್ತಾನೆ ನೋಡಿ. ಆಗ್ಲೂ ಸುಮ್ಮನೆ ಮನೇಲೆ ತೆಪ್ಪಗೆ ಕೂತಿದ್ರೆ ಕೇಳಿ. ನಿಮ್ಮ ಸಿಟೀಲಿರೋ ಅಲ್ಲಿ ಮುಚ್ಚಿದ ಚರಂಡಿಯಿಲ್ಲ. ಮನೇ ಪಕ್ಕದಲ್ಲೇ ಚರಂಡಿ ಬಾಯಿ ತೆಕ್ಕೊಂಡು ಹರಿಯುತ್ತೆ. ಈ ವಾಸುದೇವ ಅಲ್ಲಿಗೆ ಬಂದ ಕೂಡ್ಲೆ ಮಾಡೋ ಕೆಲಸ, ಪೊರಕೆ ತಗೊಂಡು ಚರಂಡೀನ ಉಜ್ಜಿ ಕ್ಲೀನ್ ಮಾಡೋದು....". ಆಮೇಲೆ ಆಕೆ ಪಿಸುಗುಟ್ಟುತ್ತಲೂ ಇದ್ರು ಅಂತಿಟ್ಕೊಳ್ಳಿ.. "ಈ ಉಸಾಬರಿಯೆಲ್ಲ ಇವನಿಗ್ಯಾಕೆ ಅಲ್ವಾ? ಇವನನ್ನ ಯಾರು ಬ್ರಾಹ್ಮಣ ಅಂತಾರೇ...".

ಕಾಲ ಒಂದೇ ರೀತಿ ಇರುತ್ತಾ? ವಯಸ್ಸಾಗಿದ್ದರೂ ಗಟ್ಟುಮುಟ್ಟಾಗಿದ್ದ ವಾಸುದೇವರಾವ್‌ಗೆ ತಾವು ಮತ್ತಷ್ಟು ಮುದಿಯಾಗಿ, ಹಾಸಿಗೆ ಹಿಡಿದು ಮಿಕ್ಕವರಿಗೆ ತೊಂದರೆ ಕೊಡಬಾರದು ಅನಿಸಿತೋ ಏನೋ, ಒಂದು ರಾತ್ರಿ ಮಲಗಿದವರು ಬೆಳಿಗ್ಗೆಯಾದರೂ ಏಳಲೇ ಇಲ್ಲ. ಅಂಗಳದಲ್ಲಿ ಚಟ್ಟದ ಮೇಲೆ ಮಲಗಿಸಿದ್ದ ಅವರ ಸುತ್ತಲೂ ತಲೆ ತಗ್ಗಿಸಿ ನಿಂತಿದ್ದ ಜನರ ಗುಂಪಿನ ಹಿಂದೆ ಖಾಕಿ ಚಡ್ಡಿ , ಖಾಕಿ ಶರ್ಟು ಹಾಕಿಕೊಂಡಿದ್ದ ಕೆಂಪಯ್ಯ ಕೂಡಾ ಕಣ್ಣಲ್ಲಿ ನೀರು ತುಂಬಿಕೊಂಡು ಮೂಕನಂತೆ ನಿಂತಿದ್ದ. ಆದ್ರೆ ಜನರಿಗೆ 'ತಲ್ಲಣ' ಹುಟ್ಟಿ, ಎದೆ ಢವಢವಗುಟ್ಟಿದ್ದು ವಾಸುದೇವರಾವ್ ಸತ್ತಿದ್ದರಿಂದಲೋ, ಅವರ ದೇಹವನ್ನು ಒಯ್ದಾಗಲೋ ಅಲ್ಲ. ಇದ್ದಕ್ಕಿದ್ದಂತೆ ಕನ್ಸರ್ವೆನ್ಸಿ ಲೇನಿಗೆ ನುಗ್ಗಿದ ಕೆಂಪಯ್ಯನನ್ನು ಕಂಡಾಗ. ಅವನಿಗೇನಾಯ್ತೋ, ಇಡೀ ರಸ್ತೇಲಿ ತನಗೆ ನೈತಿಕ ಬೆಂಬಲ ನೀಡುತ್ತಿದ್ದ ಸ್ವಾಮಿಯೋರೊಬ್ಬರು ಹೋಗೇಬಿಟ್ಟರಲ್ಲ ಅಂತ ಹತಾಶೆ ಅವನಿಗೆ ಕವಿದುಕೊಂಡಿತೋ, ದೇಹವನ್ನು ಸುತ್ತುವರಿದಿದ್ದ ಬ್ರಾಹ್ಮಣ ಸಮೂಹವನ್ನು ದಾಟಿಕೊಡು ತನ್ನನ್ನು ಗೆಳೆಯನಂತೆ ನಡೆಸಿಕೊಂಡಿದ್ದ ಅವರ ಪಾದವನ್ನು ಮುಟ್ಟಿ ನಮಸ್ಕರಿಸೋ ಭಾಗ್ಯ ತನಗೆ ಸಿಗಲಿಲ್ಲವೆಮಬ ಸಿಟ್ಟು ಅವನನ್ನೂ ಸುಡೋಕ್ಕೆ ತೊಡಗಿತ್ತೋ ಒಟ್ಟಿನಲ್ಲಿ ಧಿಡೀರನೆ ಎಲ್ಲಿಂದಲೋ ಒಂದು ಕುಕ್ಕೆಯನ್ನು ತಂದ ಕೆಂಪಯ್ಯ ಕನ್ಸರ್ವೆನ್ಸಿ ಲೇನಿನಲ್ಲಿ ಬಿದ್ದಿದ್ದ ತರಗೆಲೆಗಳು, ಕೊಚ್ಚೆ, ಹೊಲಸು ಎಲ್ಲವನ್ನು ಕುಕ್ಕೆಗೆ ತುಂಬಿಸಿ ಅವನ್ನು ಬ್ರಾಹ್ಮಣರ ಮನೆಗಳ ಕಾಂಪೌಂಡಿನೊಳಕ್ಕೆ ಸುರಿಯಲು ಶುರು ಮಾಡಿದ್ದ. ಮಹಾ ರುದ್ರನಂತೆ ಏದುಸಿರು ಬಿಡುತ್ತ, ಎಲ್ಲರನ್ನೂ ತನ್ನ ಕೆಂಗಣ್ಣಿನಿಂದಲೇ ಸುಟ್ಟು ಹಾಕುವಂತೆ ಬುಸುಗುಟ್ಟುತ್ತಿದ್ದ ಕೆಂಪಯ್ಯ. ಪ್ರತಿಭಟಿಸಲೂ ಬೆದರಿದವರಂತೆ ಗಾಬರಿಯಿಂದ ಮನೆಯೊಳಗೆ ಕೈ ಕಾಲು ಸೋತವರಂತೆ ನಿಟ್ಟುಸಿರು ಬಿಡುತ್ತಾ ಕೂತ ಮಹಾ ಬ್ರಾಹ್ಮಣರು. ವಾಸುದೇವರಾವ್ ಅವರಿಂದ ಕಲಿತಿದ್ದ "ತಲ್ಲಣ" ಪದ ಕಾರ್ಯರೂಪಕ್ಕೆ ಇಳಿದಂತೆ ನಂಗೆ ಭಾಸವಾಗಿದ್ದು ಕೆಂಪಯ್ಯನ ವಿಚಿತ್ರ ತಲ್ಲಣವನ್ನು ಕಂಡಾಗ.

ವಾಸುದೇವರಾವ್ ಬದುಕಿದ್ದಾಗಲೂ, ಅವರು ಸತ್ತ ನಂತರವೂ ಇದ್ದ ಕೆಂಪಯ್ಯನೆಂಬ ವ್ಯಕ್ತಿ ಒಬ್ಬನೇ. ಆಮೇಲೂ ಕೆಂಪಯ್ಯ ಕನ್ಸರ್ವೆನ್ಸಿ ಲೇನನ್ನು ದಿನವೂ ಶುಚಿ ಮಾಡುತ್ತಲೇ ಇದ್ದ. ಹಬ್ಬದ ದಿವಸಗಳಲ್ಲಿ ಅದೇ ಖಾಕಿ ಶರ್ಟು, ಖಾಕಿ ಚಡ್ಡಿ ಹಾಕ್ಕೊಂಡು, ಕೊಳಕು ಪಂಚೆಯನ್ನು ಅಂಗಳದಲ್ಲಿ ಹರಡಿ ಜನ ಅದರ ಮೇಲೆ ಸುರಿಯುತ್ತಿದ್ದ ಊಟವನ್ನು ಗಂಟು ಕಟ್ಟಿಕೊಂಡು ಹೊರಡುತ್ತಲೇ ಇದ್ದ. ಆದರೆ ಅವನ ರೌದ್ರಾವತಾರ ನೋಡಿದ್ದ ಜನ ಮಾತ್ರ ಅವನ ತಲ್ಲಣಗಳನ್ನು ಅರ್ಥಮಾಡಿಕೊಳ್ಳಲು

ಪ್ರಯತ್ನಿಸದೆಯೇ, ಕೆಂಪಯ್ಯ ಅಂದ್ರೆ ಭೀತಿಯನ್ನು ಹುಟ್ಟಿಸಿಕೊಂಡು ಬಿಟ್ಟರಷ್ಟೆ. ಕನ್ಸರ್ವೆನ್ಸಿ ಲೇನಿನಲ್ಲಿ ಪೊರಕೆಯಿಂದ ಕಸ–ಎಲೆಯನ್ನು ಪರಪರ ಗುಡಿಸುತ್ತಿದ್ದ ಸದ್ದು ಕೇಳುತ್ತಿದ್ದ ಹಾಗೇ ಮನೆಯಲ್ಲಿನ "ಸಭ್ಯ ಗೃಹಸ್ಥರು" ಸದ್ದಿಲ್ಲದೆ ಪುಸ್ತಕವನ್ನೋ, ನ್ಯೂಸ್ ಪೇಪರನ್ನೋ ಮುಖದ ಮುಂದೆ ಹಿಡಿದುಕೊಂಡು ಪರಪರ ಸದ್ದು ಕ್ಷೀಣವಾಗಿ ಅವನು ಕೆಲಸ ಮುಗಿಸಿ ಅಲ್ಲಿಂದ ಜಾಗ ಖಾಲಿ ಮಾಡುವುದನ್ನೇ ನಿರೀಕ್ಷಿಸುತ್ತಿದ್ದವರಂತೆ ಕೂರುತ್ತಿದ್ದರು. ಅಷ್ಟೇಕೆ ರಚ್ಚೆ ಹಿಡಿದ ಮಕ್ಕಳನ್ನು ತಾಯಂದಿರು ಪಿಸು ಮಾತಿನಲ್ಲಿ "ತಾಳು, ಕೆಂಪಯ್ಯನ್ನ ಕರೀತೀನಿ ಅಂತಂದು, "ಲೋ..ಕೆಂಪಾ...ಬಾರೋ ಇಲ್ಲಿ, ಇದನ್ನು ಎತ್ಕೊಂಡ್ಹೋಗೋ...." ಅಂತ ನಾಟಕವಾಡಿದರೂ ಸಾಕು, ಮಕ್ಕಳು ನಡುಗುತ್ತ ತಾಯಂದಿರ ಸೆರಗಲ್ಲಿ ಮುಖ ಮರೆಸಿಕೊಳ್ಳುತ್ತಿದ್ದವು.

ಕೆಂಪಯ್ಯ ಈಗ ಪ್ರಾಯಶಃ ಸತ್ತಿರುತ್ತಾನೆ. ಇವನು ಸತ್ತ ಹಿಂದಿನ ಅಥವಾ ಮುಂದಿನ ಒಂದೆರಡು ವರ್ಷಗಳ ಕಾಲಾವಧಿಯಲ್ಲಿ, ಈಗಿನ ಹಾಗೆ ಅಡುಗೆ ಮನೆಯಲ್ಲಿ ಗ್ಯಾಸ್ ಸ್ಟೌವ್, ಬಚ್ಚಲು ಮನೆಯಲ್ಲಿ ಗೀಸರ್ ಇರದಿದ್ದ ಕಾಲದಲ್ಲಿ ಜನರು ಕೊಂಡು ತಂದಿರುತ್ತಿದ್ದ ಸರ್ವೆ ಸೌದೆಯನ್ನು ಒಡೆಯೋಕ್ಕೇ ಹುಟ್ಟಿದವನ ಹಾಗೆ ಸದಾ ಭುಜಕ್ಕೆ ಕೊಡಲಿ ನೇತು ಹಾಕಿಕೊಂಡು ತಿರುಗುತ್ತಿದ್ದ ಕಾಳಯ್ಯನೂ ಸತ್ತಿರಬಹುದು. ಮುಖ, ಕೈಕಾಲುಗೆಲ್ಲ ಮಸಿ ಹತ್ತಿದ್ದರೂ ಅದನ್ನು ಕ್ಲೀನ್ ಮಾಡಿಕೊಳ್ಳಲೂ ಬಿಡುವಿಲ್ಲದವನ ಹಾಗೆ ಭುಜದಿಂದ ಭಾರದ ಇದ್ದಿಲು ಮೂಟೆಯನ್ನು ನೇತಾಡಿಸಿಕೊಂಡು ಅವನ್ನು ಮನೆ ಮನೆಗೆ ತಲುಪಿಸಿ, ಮನೆಯ ಯಜಮಾನ ಚೌಕಾಸಿ ಮಾಡ್ತಾನೇ ತನ್ನ ಅಂಗೈಗೆ ಹಾಕುತ್ತಿದ್ದ ಚಿಲ್ಲರೆ ಕಾಸನ್ನು ಅವರಿಗೆ ಸಲಾಂ ಹೊಡೆಯುತ್ತ ಸ್ವೀಕರಿಸುತ್ತಿದ್ದ ಮುನ್ಸಾಮೀನೂ ಈಗ ಪರಲೋಕವಾಸಿಯಾಗಿರಬಹುದು. ಆದರೆ ಇವರ ಚಿತ್ರಗಳೆಲ್ಲ ಎಂದೂ ಮಸುಕಾಗದೆ ಇವರೆಲ್ಲರೂ ಅನುಭವಿಸಿರಬಹುದಾದ ತಲ್ಲಣಗಳೂ ನನ್ನೆದೆಯಲ್ಲಿ ಇನ್ನೂ ಪ್ರತಿಧ್ವನಿ ಹುಟ್ಟಿಸುತ್ತಲೇ ಇರೋದ್ರಿಂದ ನಂಗನ್ನಿಸುತ್ತೆ ತಲ್ಲಣವೆಂಬುದು ನಿರಂತರ, ಪರಿಸ್ಥಿತಿ ಬೇರೆ ಇರಬಹುದು, ಘಟನೆಗಳು ಭಿನ್ನವಾಗಿರಬಹುದು, ನಾವು ಮನಸ್ಸನ್ನು ಬಿಚ್ಚಿಟ್ಟ ಹಾಗೆಲ್ಲ ಒಂದಲ್ಲ ಒಂದು ತಲ್ಲಣ ಕಾಡುತ್ತಲೇ ಹೋಗುತ್ತವೆ ಅಂತ. ಆದರೆ ಒಂದೇ ವ್ಯತ್ಯಾಸ. ಚಿಕ್ಕಂದಿನಲ್ಲಿ ಸಾಮಾನ್ಯ ಮಧ್ಯಮ ವರ್ಗದಲ್ಲಿ ಬಾಲ್ಯ ಯೌವನ ಕಳೆದಿರೋದ್ರಿಂದ ಒಂದು ಸೀಮಿತ ವರ್ಗದ ವ್ಯಕ್ತಿಗಳಿಗೆ ಸಂಬಂಧಿಸಿದ ಸಾಧಾರಣ ಎನ್ನಿಸಬಹುದಾದ ತೀರಾ ವೈಯಕ್ತಿಕ ಘಟನೆಗಳಿಂದಲೇ ತಲ್ಲಣಗೊಳ್ಳುತ್ತಿದ್ದ ನನ್ನಂಥವರೂ ಈಗ ಊಹಿಸಲೂ ಆಗದಂಥ ಗಂಭೀರ ಪ್ರಸಂಗಗಳು ಸಂಭವಿಸಿದಾಗಲೂ ತಲ್ಲಣಗೊಳ್ಳದೆ ನಿಶ್ಚಿಂತೆಯಿಂದ ಇರುವ ದುರಭ್ಯಾಸವನ್ನು ಬೆಳೆಸಿಕೊಂಡಿರುವುದು.

ಇದಕ್ಕೆ ಕಾರಣ ಅಷ್ಟೆ. ಅಪರೂಪಕ್ಕೊಮ್ಮೆ ದುರಂತ ಕಾಣಿಸಿದರೆ ಅದು ನಿಜವಾಗಿಯೂ ತಲ್ಲಣವನ್ನು ಹುಟ್ಟಿಸುತ್ತದೆ. ಹೀಗೂ ನಡೆಯಬಹುದಾ ಅಂತ ನಾವು ಚಕಿತಗೊಳ್ಳುತ್ತೀವಿ. ಹೀಗ್ಯಾಕಾಯ್ತು ಅಂತ ಚಿಂತೆಯಿಂದ ತಲೆ ಮೇಲೆ ಕೈಹೊತ್ತು ಕೂರುತ್ತೀವಿ. ಆದರೀಗ ಪ್ರತಿನಿತ್ಯ ನಮ್ಮ ಕಣ್ಣಿಗೆ ಕಾಣಿಸೋ ನರಕ. ಓದು ಬರಹ ಮಾಡಿರೋ ಜನ. ಆದರೆ ಹಿಂದಿನಿಂದ ಇಂದಿನವರೆಗೂ ಬದಲಾಯಿಸದೇ ಹೋಗಿರೋ ಕೆಲವರ ವೈಯಕ್ತಿಕ ಹಾಗೂ ಸಾಮಾಜಿಕ ಧೋರಣೆ. ಎಲ್ಲೆಂದರಲ್ಲಿ ಧಾರಾಳವಾಗಿರೋ

ಹಗಲು ದರೋಡೆಗಳು. ಸಿಕ್ಕಿದ್ದನ್ನೆಲ್ಲ ನಾಚಿಕೆಯಿಲ್ಲದೆ ಬಾಚಿಕೊಳ್ಳುತ್ತಿರೋ ಪ್ರಸಂಗಗಳು. ಕೊಲೆ, ಸುಲಿಗೆ, ವಿಕೃತ ಕಾಮ...ತಲ್ಲಣಗಳನ್ನು ಪ್ರಕಟಿಸಲೂ ಬಿಡುವಿಲ್ಲದೆ, ತಮ್ಮ ತಮ್ಮ ತಾಪತ್ರಯಗಳಲ್ಲೇ ಸಿಕ್ಕಿ ಒದ್ದಾಡುತ್ತಿರೋ ಸಾಮಾನ್ಯ ಜನರು. ಆದ್ದರಿಂದಲೇ ಬೆಂಗಳೂರಿನಲ್ಲಿ ಹಿಂದೆ ಬೇಲೂರು ಶ್ರೀನಿವಾಸಯ್ಯಂಗಾರ್ ಕುಟುಂಬದವರನ್ನೆಲ್ಲ ದುರುಳರು ಸಾಯಿಸಿದ ಸಂದರ್ಭದಲ್ಲಿ ದಿನಪತ್ರಿಕೆಯಲ್ಲಿ ಪ್ರಕಟಗೊಂಡಿದ್ದ ಫೋಟೋಗಳನ್ನು ಕಂಡೇ ತಲ್ಲಣಗೊಂಡಿದ್ದ ನಮಗೆ ಈಗ ಪ್ರತಿ ದಿನ ಗಂಡನಿಂದಲೇ ಹೆಂಡತಿ–ಮಕ್ಕಳ ಕೊಲೆ ನಡೆದಾಗ, ಕಾಲ್ ಸೆಂಟರ್‌ನ ಟ್ಯಾಕ್ಸಿ ಚಾಲಕನೇ ಕಂಪೆನಿಯ ಉದ್ಯೋಗಿಯನ್ನು ಸಾಯಿಸಿದಾಗ, ಪ್ರೇಮಿಯೊಬ್ಬ ತಾನು ಇಷ್ಟಪಟ್ಟವಳೊಬ್ಬಳು ಬೇರೆಯವರನ್ನು ಮದುವೆಯಾದಳು ಅನ್ನೋ ಕಾರಣಕ್ಕಾಗಿಯೇ ಅವಳ ಮುಖಕ್ಕೆ ವಿಷ ಸುರಿದು ಅವಳನ್ನು ಕುರೂಪಗೊಳಿಸಿದಾಗ ಅವನ್ನೆಲ್ಲ ತುಂಬಾ ಕ್ಯಾಶುಯಲ್ ಆಗಿ ತೆಗೆದುಕೊಳ್ಳತ್ತೀವಿ. ಅಂತರರಾಷ್ಟ್ರೀಯ ಚಲನಚಿತ್ರ ಸಂದರ್ಭದಲ್ಲಿ ಕಾರ್ ಪಾರ್ಕಿಂಗ್ ಕಡೆಗೆ ನಡೆಯುತ್ತಿದ್ದ ವಿದೇಶಿ ಮಹಿಳೆಯೊಬ್ಬಳು ಕೊಲೆಗೀಡಾದಾಗ, ಟಿ.ವಿ. ಚಾನಲ್‌ನ ಮಹಿಳಾ ಉದ್ಯೋಗಿಯೊಬ್ಬಳು ದೆಹಲಿಯಲ್ಲಿ ಮನೆಗೆ ಹೋಗುತ್ತಿದ್ದ ಸಂದರ್ಭದಲ್ಲಿ ಅವಳನ್ನು ಯಾರೋ ಗುಂಡಿಕ್ಕಿ ಕೊಂದಾಗ, ಚರ್ಚಿನಲ್ಲಿ ಪ್ರಾರ್ಥನೆ ಸಲ್ಲಿಸುತ್ತಿದ್ದ ನನ್ ಒಬ್ಬಳನ್ನು ರೇಪ್ ಮಾಡಿದಾಗ ಇವೆಲ್ಲ ಈಗ ನಡೆಯುವಂಥವೇ ಅಂತ ಸುಮ್ಮನೆ ನಾವು ಸಮಾಧಾನ ಮಾಡಿಕೊಂಡು ತೆಪ್ಪಗೆ ನಮ್ಮದೇ ಕೆಲಸಗಳಲ್ಲಿ ಮುಳುಗುತ್ತೀವಿ.

ಖಂಡಿತ ತಲ್ಲಣಗಳು ಈಗ ಕ್ರಮೇಣ ಪೇಲವವಾಗುತ್ತಿವೆ. ಔಷಧಿಯೊಂದು ಶರೀರಕ್ಕೆ ಇಮ್ಯುನೈಸ್ ಆಗುತ್ತಿದ್ದಂತೆಯೇ ಪರಿಣಾಮ ನೀಡುವ ಗುಣವನ್ನು ಕಳೆದುಕೊಳ್ಳುವಂತೆ. ರಕ್ತಸ್ರಾವ, ಸಾಲುಸಾಲು ಹೆಣಗಳು, ಸರಣಿ ಬಾಂಬ್ ಧಾಳಿಯಿಂದಾಗಿ ಛಿದ್ರಗೊಂಡು ಎಲ್ಲೆಲ್ಲೂ ಚೆಲ್ಲಾಪಿಲ್ಲಿಯಾಗಿರೋ ದೇಹದ ಅವಯವಗಳು, ಇವುಗಳ ಚಿತ್ರಗಳನ್ನು ಟಿ.ವಿ. ಚಾನಲ್‌ಗಳು ಪರಸ್ಪರ ಪೈಪೋಟಿಯಿಂದ ಮತ್ತೆ, ಮತ್ತೆ, ಮತ್ತೆ, ಮತ್ತೆ ರೀಪ್ಲೇ ಮಾಡುತ್ತಾ ಹೋದಾಗ ನಾವು ಅವನ್ನು ನೋಡುತ್ತಲೋ, ಹರಟೆ ಹೊಡೆಯುತ್ತಲೊ ಕೂರುವಂಥ ಅಸೂಕ್ಷ್ಮತೆ ನಮಗೀಗ ರಕ್ತಗತವಾಗಿದೆ. ತಮ್ಮ ಗಂಡ, ಹೆಂಡತಿ, ಮಕ್ಕಳು, ಬಂಧು ಬಳಗ ಇವರ ಹಿತಾಸಕ್ತಿಯನ್ನು ಮಾತ್ರ ಕಾಪಾಡಿಕೊಳ್ಳುವ ಪ್ರವೃತ್ತಿ ಹೆಚ್ಚಾಗುತ್ತಿದ್ದಂತೆಯೇ, ವಿಸ್ತಾರವಾದ ಸಮಾಜದಲ್ಲಿನ ತಲ್ಲಣಗಳಿಗೆ ಗಮನ ಕೊಡುವವರ ಸಂಖ್ಯೆಯೇ ಕಡಿಮೆಯಾಗುತ್ತಿದೆ.

ಎಲ್ಲೋ ಒಬ್ಬ ಬಾಬಾ ಆಮ್ಟೆ ಇರಬಹುದು. ಸುಂದರಲಾಲ್ ಬಹುಗುಣ, ಮಹಾಶ್ವೇತಾ ದೇವಿ, ಮೇಧಾ ಪಾಠಕ್, ಬಿಳಿಗಿರಿರಂಗನ ಬೆಟ್ಟದ ಸುದರ್ಶನ್, ಮೇಲುಕೋಟೆಯಲ್ಲಿನ ಕೌಲಗಿ ದಂಪತಿ ಇಂಥವರಿರಬಹುದು. ಇನ್ನು ಗಾಂಧೀ ವಿಚಾರಗಳಿಗೆ ಮನಸೋತಿರುವವರು ತಮ್ಮದೇ ಆದ ರೀತಿಯಲ್ಲಿ ಉಪಯೋಗಿಗಳಾಗಿರಬಹುದು. ಆದರೆ ಅವರಿಗೆ ಬೆಂಬಲ ನೀಡಬಲ್ಲ ಸಹಸ್ರಾರು ಜನರನ್ನು ಹುಟ್ಟಿಸೋದು ಹೇಗೆ ಸಾಧ್ಯ? ಮನೆ ಮನೆ ತಲುಪೂ ಟಿ.ವಿ.ಯಂಥ ದೃಶ್ಯ ಮಾಧ್ಯಮದ ಅತ್ಯಂತ ಜನಪ್ರಿಯವಾಗಿರೋ ಕೆಲವು ವ್ಯಾಪಾರಿ ಚಾನಲ್‌ಗಳು, ಪುಟ್ಟ ಪುಟ್ಟ ಟ್ರಾನ್ಸಿಸ್ಟರ್ ರೇಡಿಯೋಗಳು ಯುವಕ ಯುವತಿಯರು ಮಾತ್ರ ಅಲ್ಲದೆ, ಪುಟ್ಟ

ಮಕ್ಕಳೂ ಹಾಡಲು, ಕುಣಿಯಲು, ಕಾಲಿಗೆ ಕೈಗೆ ಗೆಜ್ಜೆ ಕಟ್ಟಿಕೊಂಡೇ ಹುಟ್ಟಿದ್ದು ಅವರ ಸುತ್ತಲೂ ಬರೀ ಬಣ್ಣ ಬೆಳಕು ಇವು ಮಾತ್ರ ಇವೆ ಎನ್ನುವಂತೆ ಪ್ರೋಗ್ರಾಂಗಳನ್ನು ಬಿತ್ತರಿಸುತ್ತಿರುವಾಗ, ಕಪ್ಪು ಬಣ್ಣದ ದಾರುಣ ಘಟನೆಗಳನ್ನು ನೋಡೋ ಸೈರಣೆ ಎಷ್ಟು ಜನರಿಗಿದೆ?

ಇಂಥ ಪರಿಸ್ಥಿತಿಗೆ ಯಾರನ್ನು ಹೊಣೆಯಾಗಿಸೋಣ? ಅಸ್ತಿತ್ವಕ್ಕೆ ಬರುತ್ತಿರುವ ಅವಧಿಯುದ್ದಕ್ಕೂ ಅಲುಗಾಡುತ್ತಲೇ ಇರುವ ಅಭದ್ರ ಸರ್ಕಾರಗಳು. ತಮ್ಮ ಕ್ಷೇತ್ರ ಸಂಗೀತವೇ ಆಗಲಿ, ನೃತ್ಯವೇ ಆಗಲಿ, ಜಾನಪದವೇ ಆಗಲಿ, ಸ್ಪರ್ಧಾತ್ಮಕ ವಾತಾವರಣದಲ್ಲಿ ಸಾಧ್ಯವಾದಷ್ಟೂ ಅವಕಾಶಗಳನ್ನು ಬಳಸಿಕೊಂಡು ಎಲ್ಲೆಲ್ಲೂ ಕಾಣಿಸಿಕೊಳ್ಳಲು ಹಾತೊರೆಯುತ್ತಿರುವ ಕಲಾವಿದರು. ಸ್ಥಾನಮಾನಗಳನ್ನು ಗಿಟ್ಟಿಸಿಕೊಂಡು ಮಂತ್ರಿ ಪದವಿಗೆ ಸರಿಸಮನಾದ ಚೇರ್‌ಗಳಲ್ಲಿ ಕೂರಲೋ, ವಿಧಾನ ಪರಿಷತ್ ಅಥವಾ ರಾಜ್ಯ ಸಭೆಯಲ್ಲಿ ಸದಸ್ಯತ್ವ ಪಡೆದುಕೊಳ್ಳಲು ಹೆಣಗಾಡುತ್ತಿರೋ ಸೃಜನಶೀಲರೆನ್ನಿಸಿಕೊಂಡವರು, ಮತಾಂತರದಂಥ ವಿಷಯವನ್ನೇ ತಮ್ಮ ನಿಲುವನ್ನು ಪ್ರತಿಪಾದಿಸಲು ಬಳಸಿಕೊಂಡು ಅತ್ಯಧಿಕ ಪ್ರಸಾರವಿರುವ ಪತ್ರಿಕೆಗಳಲ್ಲಿ ಪುಟಗಟ್ಟಲೆ ತಮ್ಮ ವಿಚಾರಧಾರೆಯಿಂದ ಓದುಗರ ಬ್ರೈನ್‌ವಾಶ್ ಮಾಡಲು ಸದಾ ಸಜ್ಜಾಗಿರೋ ಲೇಖಕರು, ತಮ್ಮನ್ನು ಹಿಂದೊಮ್ಮೆ ಟೀಕಿಸಿ ತಮ್ಮ ಸ್ವಾಭಿಮಾನವನ್ನೇ ಮುಕ್ಕಾಗಿಸುವಂತೆ ವರ್ತಿಸಿದ್ದ ಮಂತ್ರಿ ಮಹೋದಯರ ಪಕ್ಕದಲ್ಲೇ ಈಗ ಕೂತು, ಅವರ ಹಿಂದಿನ ವರ್ತನೆಯನ್ನು ಈಗ ನಾಚಿಕೆ ಬಿಟ್ಟು ತಾವೇ ಸಮರ್ಥಿಸಿಕೊಳ್ಳೋ ಉದ್ದಾಮ ಲೇಖಕರು..... ಮುಂಚೂಣಿಯಲ್ಲಿರೋ ಇವರೆಲ್ಲರೇ ಹೀಗಿರುವಾಗ ನಾವು ಸಾಮಾನ್ಯ ಜನರೇ ಪ್ರಜಾಪ್ರಭುತ್ವದಲ್ಲಿ ಸಾರ್ವಭೌಮರು ಅಂತ ಎಲ್ಲಿವರೆಗೆ ಬುರುಡೆ ಹೊಡೆಯೋದು?

ಕನ್ಸರ್ವೆನ್ಸಿ ಲೇನಿನ ಕೆಂಪಯ್ಯನಂಥವರು ಈಗಲೂ ಲೆಕ್ಕವಿಲ್ಲದಷ್ಟು ಸಂಖ್ಯೆಯಲ್ಲಿದ್ದಾರೆ. ಸೌದೆ ಒಡೆಯುವ ಕಾಳಯ್ಯನಂಥವರು ಹಳ್ಳಿಗಳಲ್ಲಿ ಎಲ್ಲೆಲ್ಲೂ ಕಾಣುತ್ತಾರೆ. ಆದರೆ ನಂಗೆ ಆದರ್ಶ ವ್ಯಕ್ತಿಯಂತೆ ಕಾಣೋ ವಾಸುದೇವರಾವ್ ಅಂಥವರು? ಕ್ಷೀಣಿಸುತ್ತಿರೋ ಇಂಥವರನ್ನು ಹುಡುಕಿ, ಮುಂಚೂಣಿಯಲ್ಲಿ ನಿಲ್ಲಿಸೋ ಕನಸನ್ನು ಮಾತ್ರ ನಾವು ಕಾಣಬಹುದಷ್ಟೆ. (ಸಾಭಾರ : ಶೂದ್ರ)

* * *

೨೧ ನೇ ಪುಟದಿಂದ....

ಅವರಿಗೆ ಈ ಮಾತು ಪ್ರಯತ್ನಶೀಲತೆಯದಾಗಿತ್ತು. ಇಷ್ಟು ವ್ಯಾಪಕರ್ಥದ ಶಬ್ದ 'ಸ್ವರಾಜ್ಯ'ವಾಗಿದೆ.

ನಮ್ಮ ಕಾರ್ಯ ಆತ್ಮಿಕ. ಆದ್ದರಿಂದ ಆಳಕ್ಕೆ ಹೋಗಬೇಕಾಗುತ್ತದೆ. ಭಾಷ್ಯಕಾರರೆಂಬ ಕಾರಣದಿಂದ ನಾವು ಎಷ್ಟು ಆಳವಾಗಿ ಹೋಗಲು ಸಾಧ್ಯವೋ ಅಷ್ಟು ಆಳವಾಗಿ ಹೋಗಿ ತಿಳಿದುಕೊಳ್ಳಬೇಕು. 'ರಾಮರಾಜ್ಯ' ಶಬ್ದ ಮೊದಲಿನಿಂದಲೂ ಬಂದಿದೆ, ಆದರೆ ಅದರಲ್ಲಿ ದೋಷವಿರುವುದು ಕಂಡು ಬಂತು. ಆದ್ದರಿಂದ ನಾನು 'ಗ್ರಾಮ ಸ್ವರಾಜ್ಯ' ಎಂಬ ಶಬ್ದವನ್ನು ರಚಿಸಿದೆ. ಅಷ್ಟರ ಮಟ್ಟಿಗೆ ಶಬ್ದ ಶುದ್ಧಿಯನ್ನು ನಾವು ಮಾಡಬೇಕಾಗುತ್ತದೆ. 'ಗ್ರಾಮ ಸ್ವರಾಜ್ಯ' ಶಬ್ದವನ್ನು ಚಲಾವಣೆಗೆ ತರಬೇಕು. *(ಮುಂದುವರಿಯುವುದು...)*

* * *

ಗಾಂಧೀ ವಿಚಾರ

ಭಾರತ ಇಬ್ಭಾಗವಾಗಿದೆ. ಪ್ರಚಾರದ ಮಾಧ್ಯಮವಾಗಿ ಮತ್ತು ಸಂಸದೀಯ ವ್ಯವಸ್ಥೆಯಾಗಿ ಕಾಂಗ್ರೆಸ್ ತನ್ನ ಉಪಯುಕ್ತತೆಯನ್ನು ಕಳೆದುಕೊಂಡಿದೆ. ಭಾರತ ಏಳು ಲಕ್ಷ ಹಳ್ಳಿಗಳನ್ನು ಹೊಂದಿದೆ. ಪಟ್ಟಣ ಮತ್ತು ನಗರಗಳಿಗಿಂತ ಭಿನ್ನವಾದ ಸಾಮಾಜಿಕ, ನೈತಿಕ ಮತ್ತು ಆರ್ಥಿಕ ಸ್ವಾತಂತ್ರ್ಯವನ್ನು ಈ ಹಳ್ಳಿಗಳು ಇನ್ನೂ ಪಡೆಯಬೇಕಿದೆ. ಭಾರತ ಪ್ರಜಾಪ್ರಭುತ್ವದ ತನ್ನ ಗುರಿಯತ್ತ ಪ್ರಗತಿ ಸಾಧಿಸುತ್ತ ಹೋದಹಾಗೆ ಸೈನ್ಯ ಶಕ್ತಿಯ ಮೇಲೆ ನಾಗರಿಕ ಶಕ್ತಿಯು ತನ್ನ ಹಿಡಿತವನ್ನು ಸಾಧಿಸುವುದು. ರಾಜಕೀಯ ಪಕ್ಷಗಳು ಮತ್ತು ಮತೀಯ ಸಂಘಟನೆಗಳೊಂದಿಗೆ ಅದು ಅಹಿತಕರ ಸ್ಪರ್ಧೆಗೆ ಇಳಿಯಬಾರದು. ಈ ಕಾರಣಗಳಿಂದಾಗಿ ಮತ್ತು ಇಂಥವೇ ಇತರ ಕಾರಣಗಳಿಂದಾಗಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಈಗ ಅಸ್ತಿತ್ವದಲ್ಲಿರುವ ಕಾಂಗ್ರೆಸ್ ಸಂಘಟನೆಯನ್ನು ವಿಸರ್ಜಿಸಬೇಕೆಂದೂ ಮತ್ತು ಅದು ಲೋಕಸೇವಕ ಸಂಘವಾಗಿ ಅರಳಬೇಕೆಂದೂ ತೀರ್ಮಾನಿಸುತ್ತದೆ.

ಪ್ರತಿಯೊಬ್ಬ ಕಾರ್ಯಕರ್ತ ಸ್ವತಃ ನೂತ ದಾರದಿಂದ ತಯಾರಾದ ಖಾದಿಯನ್ನು ಸ್ವಭಾವಸಿದ್ಧವಾಗಿ ಧರಿಸುವನು.

* * *

ನೀರ ನೋಟ

ಇಂಗ್ಲೀಷ್ ಭಾಷೆಯ ನಂತರ ಭಾರತೀಯರ ಮನಸ್ಸನ್ನು ತನ್ನ ಹಿಡಿತದಲ್ಲಿಟ್ಟುಕೊಂಡಿರುವ ಎರಡನೆಯ ವಿಷಯ ಕ್ರಿಕೆಟ್. ಹೇಗೆ ಇಂಗ್ಲೀಷ್ ಭಾಷೆ ತನ್ನ ಚುಂಚು ಪ್ರವೇಶದೊಂದಿಗೆ ಇಡೀ ವಸ್ತುವಿನ ದ್ರವ್ಯವನ್ನೇ ಕ್ಷಯಿಸಿಹಾಕಿಬಿಡುವುದೋ ಅದೇ ರೀತಿ ಕ್ರಿಕೆಟ್. ಕ್ರಿಕೆಟ್ ಆಟಕ್ಕೆ ಯಾವುದೇ ಪ್ರಕಾರದ ಮಾನವೀಯ ದುರಂತಗಳು ಅಡ್ಡಿಯಾಗುವುದಿಲ್ಲ. ಚುನಾವಣೆ ಬರಲಿ, ಚಂಡಮಾರುತ ಬೀಸಿ ಪ್ರಾಣಹಾನಿಯಾಗಲಿ, ಕೋಮು ಗಲಭೆಗಳು ನಡೆಯಲಿ, ಯುದ್ಧ ನಡೆಯಲಿ ಇಂಥ ಯಾವ ಘಟನೆಯೇ ನಡೆಯಲಿ ಚೆಂಡು ಎಸೆದಾಟ, ಬಾರಿಸುವಾಟ, ಪ್ರೇಕ್ಷಕರ ಕುಣಿದಾಟ, ಆಸಕ್ತರ ಬಾಜಿಯಾಟ, ಮಿಲಿಯಗಟ್ಟಲೆ ಹಣದ ಹರಿದಾಟ, ದೂರದರ್ಶನಗಳ ಮುಂದೆ ಲಕ್ಷಾನುಲಕ್ಷ ಜನರ ತದೇಕಚಿತ್ತದ ನೋಟ, ಮಿಲಿಯಗಟ್ಟಲೆ ಜನರ ಅಮೂಲ್ಯ ಸಮಯದ ವ್ಯರ್ಥ ಓಟ, ಅಪಾರ ಪ್ರಮಾಣದ ವಿದ್ಯುತ್‌ಶಕ್ತಿಯ ಅನುತ್ಪಾದಕ ಚೆಲ್ಲಾಟ, ಹವಾಮಾನ ವೈಪರಿತ್ಯದ ಭೀಕರ ಹೂಟ ಇಂಥ ಯಾವುದೇ ಸಂಗತಿಗಳು ಕ್ರಿಕೆಟ್ ಆಟಗಾರರನ್ನು, ಆ ಆಟದ ಸಯೋಜಕರನ್ನು, ಪ್ರೇಮಿಗಳನ್ನು ಕಿಂಚಿತ್ತೂ ವಿಚಲಿತರನ್ನಾಗಿ ಕಾಯುವುದಿಲ್ಲ.

* * *

ಜನಪದ ಸೇವಾ ಟ್ರಸ್ಟ್ ಸಮಾಚಾರ


ಜನಪದ ಸೇವಾ ಟ್ರಸ್ಟಿನ ೨೦೦೮-೨೦೦೯ನೇ ಸಾಲಿನ ಸರ್ವ ಸದಸ್ಯರ ಸಭೆ ಹೊಸ ಜೀವನ ದಾರಿ ಕೇಂದ್ರದಲ್ಲಿ ಸುರೇಂದ್ರ ಕೌಲಗಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಭೆಯಲ್ಲಿ ಧರ್ಮದರ್ಶಿಗಳಾದ ಕೆ.ಮಾದೇಗೌಡರು, ಡಿ.ಪ್ರಭಾಕರ್, ಸಂತೋಷ್ ಶೀಲವಂತ್, ಡಾ॥ ಮನೋಹರ್, ಸುರೇಂದ್ರ ಕೌಲಗಿ, ಗಿರಿಜಾ ಕೌಲಗಿ, ಸಂತೋಷ್ ಕೌಲಗಿ ಭಾಗವಹಿಸಿದ್ದರು. ಈ ಸಭೆಯಲ್ಲಿ ಹಿಂದಿನ ಸಾಲಿನ ಕಾರ್ಯವರದಿಯನ್ನು ಹಾಗೂ ೨೦೦೮-೨೦೦೯ನೇ ಸಾಲಿನ ತಾತ್ಕಾಲಿಕ ಜಮಾ ಖರ್ಚು ಪಟ್ಟಿಯನ್ನು ಆಡಿಟ್ ಆದ ಲೆಕ್ಕ ಪತ್ರವನ್ನು ಅಂಗೀಕರಿಸಲಾಯಿತು. ಅಲ್ಲದೆ ೨೦೦೯-೨೦೧೧ನೇ ಸಾಲಿಗೆ ಅಂದರೆ ಎರಡು ವರ್ಷದ ಅವಧಿಗೆ ಹೊಸ ಕಾರ್ಯಕಾರಿ ಸಮಿತಿಯನ್ನು ರಚಿಸಲಾಯಿತು ಮತ್ತು ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಸುರೇಂದ್ರ ಕೌಲಗಿಯವರನ್ನು ಅಧ್ಯಕ್ಷರವರನ್ನಾಗಿ, ಸಂತೋಷ್‌ಶೀಲವಂತರನ್ನು ಉಪಾಧ್ಯಕ್ಷರನ್ನಾಗಿ, ಡಿ.ಪ್ರಭಾಕರ್‌ರವರನ್ನು ಖಜಾಂಚಿಯನ್ನಾಗಿ ಮತ್ತು ಸಂತೋಷಕೌಲಗಿಯವರನ್ನು ಕಾರ್ಯದರ್ಶಿಯನ್ನಾಗಿ ಆಯ್ಕೆ ಮಾಡಲಾಯಿತು. ಕಾರ್ಯಕಾರಿಣಿ ಸಮಿತಿಗೆ ಈ ಪದಾಧಿಕಾರಿಗಳಲ್ಲದೆ ಡಾ॥ ಮನೋಹರ್, ಕೆ.ಮಾದೇಗೌಡರು, ಗಿರಿಜಾ ಕೌಲಗಿ ಅವರನ್ನು ಆಯ್ಕೆ ಮಾಡಲಾಯಿತು. ಅಲ್ಲದೆ ಜೆ.ಶ್ರೀನಿವಾಸ್ ಎಂಬ ಸ್ಥಳೀಯ ಯುವಕರನ್ನು ಆಹ್ವಾನಿತ ಸದಸ್ಯರನ್ನಾಗಿ ಆಯ್ಕೆ ಮಾಡಿಕೊಳ್ಳಲಾಯಿತು. ಮುಂದಿನ ವರ್ಷಗಳಲ್ಲಿ ಟ್ರಸ್ಟ್ ಕೈಗೊಳ್ಳಬಹುದಾದ ರಚನಾತ್ಮಕ ಕಾರ್ಯಕ್ರಮಗಳ ಬಗ್ಗೆ ಸುದೀರ್ಘವಾಗಿ ಚರ್ಚಿಸಲಾಯಿತು ಮತ್ತು ಕೆಲವು ತೀರ್ಮಾನಕ್ಕೆ ಬರಲಾಯಿತು.

ಟಿ.ನರಸೀಪುರ ತಾಲ್ಲೂಕಿನ ಬನ್ನೂರಿನಲ್ಲಿ "ಮುನ್ನುಡಿ" ಎಂಬ ಸೇವಾ ಸಂಸ್ಥೆಯ ಉದ್ಘಾಟನೆಯನ್ನು ಟ್ರಸ್ಟಿನ ಅಧ್ಯಕ್ಷರು ನೆರವೇರಿಸಿದರು.

ಪ್ರತಿ ವರ್ಷದಂತೆ ಬೇಸಿಗೆಯಲ್ಲಿ "ದೊಡ್ಡಮರದಾ ನೆರಳಿನಲಿ" ಎಂಬ ಹೆಸರಿನ ಮಕ್ಕಳಿಗಾಗಿ ಬೇಸಿಗೆ ಶಿಬಿರವನ್ನು ಹತ್ತು ದಿನಗಳ ಅವಧಿಗೆ ನಡೆಸಲಾಯಿತು. ಈ ಶಿಬಿರದಲ್ಲಿ ೪೦ ಮಕ್ಕಳು ಭಾಗವಹಿಸಿದ್ದರು. ಮೇಲುಕೋಟೆ ಪಕ್ಕದ ಗ್ರಾಮ ರಾಂಪುರದಿಂದಲೂ ಕೆಲವು ಮಕ್ಕಳು ಭಾಗವಹಿಸಿದ್ದರು. ಈ ಶಿಬಿರದ ನಿರ್ವಹಣೆಗೆ ಅಗತ್ಯವಾದ ಧನಸಹಾಯವನ್ನು ಶ್ರೀ ಚೆಲುವರಾಜು, ಶ್ರೀ ರಾಜನ್ ಷಾ, ಶ್ರೀ ಶ್ರೀನಿವಾಸ್, ಶ್ರೀ ಎನ್.ತಿರುಮಲೈ, ಶ್ರೀ ಶ್ರೀಕಾಂತ್, ಶ್ರೀಮತಿ ಅಯ್ಯಂಗಾರ್ ಮುಂತಾದ ಸ್ನೇಹಿತರು ಭರಿಸಿದ್ದಾರೆ ಇವರೆಲ್ಲರಿಗೆ ಟ್ರಸ್ಟ್ ಆಭಾರಿಯಾಗಿದೆ. ಶಿಬಿರದ ಮುಕ್ತಾಯ ಸಮಾರಂಭದಲ್ಲಿ ಶಿಬಿರದ ಮಕ್ಕಳು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು ಮತ್ತು ಮೈಸೂರಿನ "ನಟನ" ತಂಡದ ಮಕ್ಕಳಿಂದ "ನಾಯಿ ತಿಪ್ಪ" ಎಂಬ ನಾಟಕ ಆಡಿಸಿದರು. ಗ್ರಾಮದ ಬಹಳಷ್ಟು ಜನರು ಬಂದು ಕಾರ್ಯಕ್ರಮ ನೋಡಿ ಸಂತೋಷಪಟ್ಟರು. ಈ ಕಾರ್ಯಕ್ರಮದಲ್ಲಿ ಪ್ರಸಿದ್ದ ನಟ ಮಂಡ್ಯ ರಮೇಶ್‌ರವರು ಮಾತನಾಡಿದರು.

ಜನಪದ ನಿಲಯದ ಅಂತರಂಗದಲ್ಲಿ .. ೬೨

– *ಸುರೇಂದ್ರ ಕೌಲಗಿ*



ಇದೇ ಸಮಯದಲ್ಲಿ ಮಾಡಿದ ಇನ್ನೊಂದು ಹುಚ್ಚು ಕೆಲಸವೆಂದರೆ ಕೋಳಿ ಸಾಕಿದ್ದು ! ಆಗಾಗ ಪಾಂಡವಪುರದಲ್ಲಿಯ ಟಿ.ಎ.ಪಿ.ಸಿ.ಎಮ್. ಸೊಸೈಟಿಗೆ ಅಕ್ಕಿ ತರಲು ಹೋಗಬೇಕಾಗುತ್ತಿತ್ತು. ಆ ಸೊಸೈಟಿಯವರು ಕೋಳಿ ಸಾಕುವ ಕೆಲಸ ಪ್ರಾರಂಭಿಸಿದ್ದರು. ಅದನ್ನು ನೋಡಿ, ಟ್ರಸ್ಟಿನಲ್ಲಿಯೂ ಈ ಕೆಲಸ ಪ್ರಾರಂಭಿಸಿ ಆದಾಯ ಬರುವಂತೆ ಏಕೆ ಮಾಡಬಾರದೆಂಬ ವಿಚಾರ ಬಂತು. ಆದರೆ ಕೋಳಿ ಸಾಕುವುದು, ಮಾರುವುದು ಗಾಂಧೀ ವಿಚಾರಕ್ಕೆ ಸಲ್ಲದೆಂಬ ವಿಚಾರ ಹೊಳೆಯಲೇ ಇಲ್ಲ. ಆಗ ಟ್ರಸ್ಟಿಗೆ ಆದಾಯ ತರಬೇಕು, ಟ್ರಸ್ಟ್ ಬೆಳೆಸಬೇಕೆಂಬ ಮೋಹ ಗಾಂಧೀ ತತ್ವದ ಬಗ್ಗೆ ಬುದ್ಧಿಗೆ ಮಂಕು ಹಿಡಿಸಿತ್ತು. ಮೈಸೂರಿನ ರೋಟರಿ ಕ್ಲಬ್‌ನವರು ಧನ ಸಹಾಯ ಮಾಡಿದರು. ಮೇಲುಕೋಟೆಯಲ್ಲಿಯೇ ಕರುಣಾಗೃಹದ ಹತ್ತಿರವೇ ಇದ್ದ ಒಂದು ಸಣ್ಣ ಮಣ್ಣುಗೋಡೆಯ ಮನೆಯನ್ನು ಬಾಡಿಗೆ ತೆಗೆದುಕೊಂಡು ಒಂದು ನೂರು ಕೋಳಿಯೊಂದಿಗೆ ಪೌಲ್ಟ್ರಿ ಕಾರ್ಯವನ್ನು ಪ್ರಾರಂಭಿಸಲಾಯಿತು. ಪೌಲ್ಟ್ರಿಯ ಬಗ್ಗೆ ಯಾವ ತಿಳುವಳಿಕೆ, ಅನುಭವ ಲವಲೇಶವೂ ಇರಲಿಲ್ಲ. ಆ ಕೆಲಸದಲ್ಲಿ ತೊಡಗಿರುವವರ ಸಲಹೆ–ಸಹಕಾರ ಪಡೆಯಲಾಗುತ್ತಿತ್ತು. ಎಂದೂ ಮೊಟ್ಟೆಯನ್ನು ಮುಟ್ಟಿರದ ಕೈ ಮೊಟ್ಟೆಗಳನ್ನೂ ಮುಟ್ಟುವಂತಾಯಿತು. ಕೆಲವೊಮ್ಮೆ ಕ್ಯಾಲ್ಸಿಯಂ ಕೊರತೆಯಿಂದಾಗಿ ಕೋಳಿಗಳು ಇಟ್ಟ ಮೊಟ್ಟೆಗಳು ಮೃದುವಾಗಿರುತ್ತಿದ್ದವು. ಅವುಗಳನ್ನು ತೆಗೆದುಕೊಳ್ಳಲು ಹೋದಾಗ ಅವು ಒಡೆದು ಹೋಗಿ ಕೈ ಬೆರಳುಗಳೆಲ್ಲವೂ ಮೊಟ್ಟೆಯ ಲೋಳೆಯಿಂದ ಒದ್ದೆಯಾಗುತ್ತಿತ್ತು. ಕೋಳಿ ಸಾಕಿದ ಮನೆ ಆ ಉದ್ದೇಶ್ಯಕ್ಕಾಗಿ ಮಾಡಿಸಿದ್ದಂಥಾದ್ದಾಗಿರಲಿಲ್ಲ. ಮೊಟ್ಟೆ ತರಲು ಮತ್ತು ಕೋಳಿಗಳಿಗೆ ಫೀಡ್ಸ್ ಹಾಕಲು ಒಳಗೆ ಹೋದರೆ ಅಡ್ಡವಾಸನೆ ಹೊಡೆಯುತಿತ್ತು. ಆ ಮನೆಯಲ್ಲಿ ಅಡ್ಡಲಾಗಿ ಎರಡು ದೊಡ್ಡ ತೊಲೆಗಳಿದ್ದವು. ಕೋಳಿಗಳು ಹಾರಿ ಆ ತೊಲೆಗಳ ಮೇಲೆ ಕುಳಿತು ಬಿಡುತ್ತಿದ್ದವು. ಮೊಟ್ಟೆಗಳನ್ನು ಎತ್ತಲು ಮೈ ಬಾಗಿಸಿದಾಗ ತೊಲೆಯ ಮೇಲೆ ಕುಳಿತ ಕೋಳಿಗಳು ತಲೆಯ ಮೇಲೂ, ಬೆನ್ನ ಮೇಲೂ ಹೇಸಿಗೆ ಮಾಡುತ್ತಿದ್ದವು. ದೊರೆಯುತ್ತಿದ್ದ ಎಲ್ಲ ಮೊಟ್ಟೆಗಳು ಮೇಲುಕೋಟೆಯಲ್ಲಿ ಮಾರಾಟವಾಗುತ್ತಿರಲಿಲ್ಲ. ಆದ್ದರಿಂದ ಮಾರಾಟವಾಗದೇ ಉಳಿಯುತ್ತಿದ್ದ ಮೊಟ್ಟೆಗಳನ್ನು ಪ್ಲಾಸ್ಟಿಕ್ ಬಕೆಟ್‌ಗಳಲ್ಲಿ ಭತ್ತದ ಹೊಟ್ಟಿನಲ್ಲಿ ತುಂಬಿಕೊಂಡು ಮೈಸೂರಿಗೆ ಹೋಗಿ ಮಿಲಿಟರಿ ಹೋಟೆಲ್‌ಗಳಿಗೆ ಮಾರಬೇಕದ ಪ್ರಸಂಗ ಬರುತ್ತಿತ್ತು. ಒಂದು ಹೋಟೆಲಿನವರು ಬೇಡವೆಂದರೆ ಇನ್ನೊಂದು ಹೋಟೆಲ್ ಹುಡುಕಿಕೊಂಡು ಹೋಗಬೇಕಾಗುತ್ತಿತ್ತು. ಅಂತೂ ಇದು

ವಿಚಿತ್ರವಾದ ಸಾಹಸವಾಯಿತು. ಕಾರಣಾಂತರದಿಂದ ಇದನ್ನು ನಿಲ್ಲಿಸಲಾಯಿತು. ಇಂಥ ಹುಚ್ಚು ಸಾಹಸಗಳೆಲ್ಲ ಟ್ರಸ್ಟಿನ ಅಭಿವೃದ್ಧಿಯ ಹುಚ್ಚು ಕಲ್ಪನೆಯಿಂದ.

ಮತ್ತೊಂದು ಸಾಹಸ ಮುದ್ರಣಾಲಯದ್ದು. ಟ್ರಸ್ಟಿನ ಆಶ್ರಯದಲ್ಲಿ ನಡೆಸಲಾಗುತ್ತಿದ್ದ ಎಸ್.ಎಸ್.ಎಲ್.ಸಿ ಪರೀಕ್ಷೆಗಾಗಿ ಕಂಡೆನ್ಸಡ್ ಕೋರ್ಸ್ ವಿದ್ಯಾರ್ಥಿನಿಯರಿಗೆ ಉದ್ಯೋಗ ತರಬೇತಿಗೋಸ್ಕರ ಮುದ್ರಣಾಲಯವನ್ನು ಪ್ರಾರಂಭಿಸಿದ್ದು. ಹೆಣ್ಣು ಮಕ್ಕಳೇನೋ ಮುದ್ರಣಾಲಯದ ಹಲವಾರು ಕೆಲಸಗಳನ್ನು ಮಾಡುತ್ತಿದ್ದರಾದರೂ ಆಗಾಗ್ಗೆ ಸ್ವತಃ ಮುದ್ರಣದ ಕೆಲಸವನ್ನು ಅನಿವಾರ್ಯವಾಗಿ ಮಾಡಬೇಕಾಗುತ್ತಿತ್ತು. ಕಾಲಕ್ರಮೇಣ ಚಿಕ್ಕ ಸೈಜಿನ ಮೆಶೀನ್ ಜೊತೆಗೆ ದೊಡ್ಡ ಸೈಜಿನ ಟ್ರೆಡಲ್ ಮತ್ತು ಒಂದು ಸಿಲಿಂಡರ್ ಜೋಡಿಸಲಾಯಿತು. ಈ ಎಲ್ಲ ಯಂತ್ರಗಳ ಮೇಲೆ ಕೆಲಸ ಮಾಡುವಾಗ ಬಟ್ಟೆಯೆಲ್ಲ ಮಸಿಯಾಗುತ್ತಿತ್ತು. ಎಂಟು ಹತ್ತು ಕೆ.ಜಿ. ಭಾರವಾದ ಚೆಸ್ ಅನ್ನು ಆಗಾಗ ಎತ್ತಿ ಮೆಶೀನಿಗೆ ಹಾಕುವುದು, ಪ್ರಿಂಟ್ ತೆಗೆಯುವುದು, ಮುದ್ರಣ ದೋಷ ಕಂಡೊಡನೆ ಭಾರವಾದ ಚೆಸ್ ಅನ್ನು ಕೆಳಗಿಳಿಸುವುದು, ದೋಷವನ್ನು ಸರಿಪಡಿಸಿ ಪುನಃ ಭಾರವಾದ ಚೆಸ್ ಅನ್ನು ಮೆಶೀನಿಗೆ ಹಾಕುವುದು. ಹೀಗೆ ಹಲವಾರು ಬಾರಿ ನಡೆಯುತ್ತಿತ್ತು. ಮೊಣ ಕೈಗಳ ಮೇಲೆ ಭಾರ ಹೆಚ್ಚಾಗಿ ಬೀಳುವುದರಿಂದ ಕೆಲವೊಮ್ಮೆ ರಟ್ಟೆಗಳಿಗೆ ನೋವು ಬರುತ್ತಿತ್ತು. ಈ ಎಲ್ಲ ಕಸರತ್ತು ಆದ ಮೇಲೆ ಮುದ್ರಣ ಕೆಲಸ ಪ್ರಾರಂಭಿಸುವುದು. ಆಗಲೂ ಕೂಡ ಸಾಮಾನ್ಯವಾಗಿ ಮೂರು-ನಾಲ್ಕು ಗಂಟೆ ನಿಂತು ಮುದ್ರಣ ಮಾಡಬೇಕಾಗುತ್ತಿತ್ತು. ತುರ್ತು ಕೆಲಸವಿದ್ದರೆ ಮಧ್ಯ ರಾತ್ರಿಯವರೆಗೆ, ನಂತರ ಬೆಳಗಿನ ಜಾವ ಎದ್ದು ಕೆಲಸ ಮಾಡಬೇಕಾಗುತ್ತಿತ್ತು. ಮುದ್ರಣ ಕೆಲಸದಲ್ಲಿಯೂ ಯಾವ ತರಬೇತಿ ಇರಲಿಲ್ಲ ಎಲ್ಲವನ್ನೂ ಅನುಭವದಿಂದ ಮತ್ತು ಸಾಮಾನ್ಯ ಜ್ಞಾನದ ಬಲದಿಂದ ಮಾಡಬೇಕಾಗಿತ್ತು. ಮುದ್ರಣ ಕೆಲಸಕ್ಕಾಗಿ ಕೆಲಸಗಾರರು ಸಿಗದೇ ಇದ್ದಾಗ ಮುದ್ರಣ, ಪರಫರೇಶನ್, ನಂಬರಿಂಗ್ ಮುಂತಾದ ಎಲ್ಲ ಕೆಲಸವನ್ನೂ ಮಾಡಬೇಕಾಗುತ್ತಿತ್ತು. ಮುದ್ರಣ ಕೆಲಸಕ್ಕಾಗಿ ಸಂಘ-ಸಂಸ್ಥೆ-ಸೊಸೈಟಿಗಳನ್ನು ಹುಡುಕಿಕೊಂಡು ಹೋಗಬೇಕಾಗುತ್ತಿತ್ತು. ಆದಾಗ್ಯೂ ಅದೇನುಕಾರಣವೋ ಮುದ್ರಣಾಲಯದ ಯಾವ ಕೆಲಸವೂ ಕಠಿಣವೆಂದಾಗಲೀ, ಶ್ರಮದಾಯಕವೆಂದಾಗಲೀ ಎಂದೂ ಅನಿಸಲೇ ಇಲ್ಲ. ಅದೆಲ್ಲವೂ ಕಾಯಕ ಯಜ್ಞವೆಂದೇ ನಡೆಯುತ್ತಿತ್ತು. ಯಜ್ಞಕ್ಕೆ ಒಂದು ಉದ್ದೇಶವಿರಬೇಕಲ್ಲವೆ? ಈ ಕಾಯಕದ ಯಜ್ಞಕ್ಕೆ ಇದ್ದ ಉದ್ದೇಶ್ಯ ಟ್ರಸ್ಟನ್ನು ವಿವಿಧ ಮುಖವಾಗಿ ಬೆಳೆಸಬೇಕು. ಸ್ವಂತ ದುಡಿಮೆಯಿಂದ ಆದಾಯ ತರಬೇಕು ಎಂಬುದೇ ಆಗಿತ್ತು. ಆ ಉದ್ದೇಶ ಬಹುಮಟ್ಟಿಗೆ ನೆರವೇರಿತು ಕೂಡ. ಮುದ್ರಣಾಲಯದಲ್ಲಿ ಹತ್ತಾರು ಸಮಸ್ಯೆಗಳ ಹತ್ತಾರು ಹೆಣ್ಣು ಮಕ್ಕಳು ಶಿಕ್ಷಣ ಪಡೆದರು ಮತ್ತು ಬೇರೆ ಬೇರೆ ಸ್ಥಳಗಳಿಗೆ ಹೋಗಿ ಅಲ್ಲಿಯ ಮುದ್ರಣಾಲಯಗಳಲ್ಲಿ ಕೆಲಸ ಮಾಡಿ ಜೀವನ ಮಾಡಿದರು. ತಮ್ಮ ನೊಂದ ಜೀವನಕ್ಕೊಂದು ಆಸರೆ ಪಡೆದರು.

(ಮುಂದುವರಿಯುವುದು..)

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾ ಸ್ಮರಿಸುತ್ತದೆ.

ಶ್ರೀ ಜಿ.ಎಲ್. ಕುಮಾರ್ ಬೆಂಗಳೂರು,
ಶ್ರೀ ಬಿ. ಅಪ್ಪಾಜಿಗೌಡರು.
ಡಾ॥ ಅರ್ಜುನಪುರಿ ಅಪ್ಪಾಜಿಗೌಡರು, ಮದ್ದೂರು.
ಈ ಬಂಧುಗಳು ತಮ್ಮ ಚಂದಾ ನವೀಕರಿಸಿದ್ದಕ್ಕಾಗಿ
ಹಾಗೂ ಹೊಸದಾಗಿ ಪತ್ರಿಕೆಗೆ ಚಂದಾದಾರರಾದ
ಶ್ರೀ ಎಂ.ಎ. ಶ್ರೀ ಕಾಂತ್. ಬೆಂಗಳೂರು.
ಶ್ರೀಮತಿ ರುಕ್ಷ್ಮಿಣಿ ಎಸ್.ನಾಗಮಂಗಲ
ಶ್ರೀ ಎ.ಎಸ್. ರಾಮು. ವಿವೇಕಾನಂದ ಶಿಕ್ಷಣ ಸಂಸ್ಥೆ. ಬನ್ನೂರು
ಶ್ರೀ ಹೆಚ್. ಉಮೇಶ್. ತುಮಕೂರು.
ಶ್ರೀ ಪುಟ್ಟಸ್ವಾಮಿ,
ಶ್ರೀ ಹೆಚ್.ವಿ. ಬಾಲರಾಜು. ಮದ್ದೂರು.
ಇವರಿಗೆ ಕೃತಜ್ಞತೆಗಳು.

೨೦೦೯ ಮೇ ಮಾಹೆಯ ದಾನಿಗಳು

ಶ್ರೀ ಗಿರೀಶ್.
ಶ್ರೀ ಎಂ.ಆರ್. ಭಾರ್ಗವ.
ಶ್ರೀ ಎನ್.ಆರ್. ಸುಬ್ರಮಣ್ಯ. ಬೆಂಗಳೂರು.
ಡಾ॥ ಮಧುಸೂದನ್. ಮೈಸೂರು.
ಡಾ॥ ಸಿ.ಡಿ.ರಂಗನಾಥ್. ಚನ್ನಪಟ್ಟಣ.
ಶ್ರೀ. ಶ್ಯಾಮ್‌ಪ್ರಕಾಶ್. ಭದ್ರಾವತಿ
ಮತ್ತು ಸಂಸ್ಥೆಯ ಎಲ್ಲ ಮಾಹೆಯಾನ ದಾನಿಗಳಿಗೆ ಟ್ರಸ್ಟ್ ತನ್ನ ಕೃತಜ್ಞತೆಯನ್ನು ಸಮರ್ಪಿಸುತ್ತದೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ
(–ಸಂಪಾದಕರು)

ತೆರೆದ-ಅಂಚೆ



KA / SK / MND / 470 / 2009-2011
Regd. no. KAR / KAN / 2000 / 3820

ಶ್ರೀಮತಿ/ ಶ್ರೀ.

ಶ್ರೀ ರಹಮತ್ ತರೀಕೆರೆ
ಪ್ರಾಧ್ಯಾಪಕರು
ಕನ್ನಡ ವಿಶ್ವ ವಿದ್ಯಾನಿಲಯ
ಹಂಪಿ 583276

....

....

JANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431.DTP Sanketh, Melkote. Printed at Sanketh, Mudrana, Melkote. Phone : 08236 – 299998 e-mail : janapada@yahoo.com web : janapada.net